



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಜನರೇ, ನೀವು ನಿಮ್ಮ ಪಾಲಕ ಪ್ರಭುವನ್ನು ಭಯಪಡಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು ಮತ್ತು ಅವೆರಡರಿಂದ ಅನೇಕಾನೇಕ ಸ್ತ್ರೀ-ಪುರುಷರನ್ನು ಲೋಕದಲ್ಲಿ ಹಬ್ಬಿಸಿದನು. ನೀವು ಯಾರ ಹೆಸರನ್ನೆತ್ತಿ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಕೇಳುತ್ತೀರೋ ಆ ಅಲ್ಲಾಹನನ್ನು ಭಯಪಡಿರಿ. ಕುಟುಂಬ ಸಂಬಂಧಗಳನ್ನು ಕೆಡಿಸಬೇಡಿರಿ. ಅಲ್ಲಾಹನು ನಿಮ್ಮ ಮೇಲೆ ಮೇಲ್ನೋಟವನ್ನಿರಿಸಿಕೊಂಡಿರುವನೆಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ.

يٰٓاَيُّهَا النَّاسُ اتَّقُوْا رَبَّكُمُ الَّذِيْ
خَلَقَكُمْ مِّنْ نَّفْسٍ وَّاحِدَةٍ وَّخَلَقَ مِنْهَا
زَوْجَهَا وَبَثَّ مِنْهُمَا رِجَالًا كَثِيْرًا وَّنِسَاۗءً ۚ
وَاتَّقُوا اللّٰهَ الَّذِيْ تَسَاۗءَلُوْنَ بِهٖ وَالْاَرْحَامَ ۭ
اِنَّ اللّٰهَ كَانَ عَلَيْكُمْ رَقِيْبًا ①

2. ಅನಾಥರ ಸೊತ್ತುಗಳನ್ನು ಅವರಿಗೆ ಹಿಂದಿರುಗಿಸಿರಿ. ಒಳ್ಳೆಯ ಸೊತ್ತಿನ ಸ್ಥಾನದಲ್ಲಿ ಕೆಟ್ಟದನ್ನು ಬದಲಿಸಿಡಬೇಡಿರಿ. ಅವರ ಸೊತ್ತನ್ನು ನಿಮ್ಮದರೊಂದಿಗೆ ಸೇರಿಸಿ ಕಬಳಿಸಲೂ ಬೇಡಿರಿ. ಇದು ಅತ್ಯಂತ ಘೋರ ಪಾತಕ.

وَاٰتُوا الْيَتٰمٰٓى اَمْوَالَهُمْ وَلَا تَتَبَدَّلُوا
الْخَبِيْثَ بِالطَّيِّبِ ۠ وَلَا تَاْكُلُوْٓا اَمْوَالَهُمْ
اِلٰٓى اَمْوَالِكُمْ ۭ اِنَّهٗ كَانَ حُوْبًا كَبِيْرًا ②

3. ಅನಾಥರೊಂದಿಗೆ ನ್ಯಾಯವಾಗಿ ನಡೆದುಕೊಳ್ಳಲು ಸಾಧ್ಯವಾಗದೆಂಬ ಆಶಂಕೆ ನಿಮಗುಂಟಾದರೆ ಸ್ತ್ರೀಯರಲ್ಲಿ ನಿಮಗೆ ಮೆಚ್ಚಿದ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ವಿವಾಹ ಮಾಡಿಕೊಳ್ಳಿರಿ.[1] ಆದರೆ ಅವರೊಂದಿಗೆ ನ್ಯಾಯ ಪಾಲಿಸಲಾರಿರೆಂಬ

وَاِنْ خِفْتُمْ اَلَّا تُقْسِطُوْا فِي الْيَتٰمٰى فَانْكِحُوْا
مَا طَابَ لَكُمْ مِّنَ النِّسَاۗءِ مَثْنٰى وَثُلٰثَ
وَرُبٰعَ ۚ فَاِنْ خِفْتُمْ اَلَّا تَعْدِلُوْا فَوَاحِدَةً

1. ಈ ಸೂಕ್ತಗಳು ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಲು ಅನುಮತಿಸಲಿಕ್ಕಾಗಿ ಬಂದಿಲ್ಲವೆಂಬುದು ಗಮನಾರ್ಹ. ಏಕೆಂದರೆ ಇದರ ಅವತೀರ್ಣಕ್ಕೆ ಮೊದಲೇ ಅಲ್ಲಿ ಆ ಪದ್ಧತಿ ಜಾರಿಯಲ್ಲಿತ್ತು. ಸ್ವತಃ ಪ್ರವಾದಿವರ್ಯರು(ಸ) ಆಗ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಿದ್ದರು. ಯುದ್ಧದಲ್ಲಿ ಹುತಾತ್ಮರಾದವರು ತಮ್ಮ ಹಿಂದೆ ಬಿಟ್ಟಿದ್ದ ಅನಾಥ ಮಕ್ಕಳ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ ಈ ಸೂಕ್ತ ಅವತೀರ್ಣಗೊಂಡಿದೆ. ಈ ಅನಾಥ ಮಕ್ಕಳ ಪರಿಪಾಲನೆಯನ್ನು ಹಾಗೆಯೇ ನಿಮಗೆ ಮಾಡಲು ಸಾಧ್ಯವಿಲ್ಲದಿದ್ದರೆ ಅನಾಥ ಮಕ್ಕಳನ್ನು ಹೊಂದಿರುವ ಮಹಿಳೆಯರನ್ನು ನೀವು ವಿವಾಹವಾಗಿರಿ ಎನ್ನುವ ಮೂಲಕ ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಲಾಗಿದೆ.

ಆಶಂಕೆ ನಿಮಗಿದ್ದರೆ ಒಬ್ಬ ಸ್ತ್ರೀಯನ್ನು ಮಾತ್ರ[2] (ವಿವಾಹವಾಗಿರಿ) ಅಥವಾ ನಿಮ್ಮ ವಶಕ್ಕೆ ಬಂದ ಸ್ತ್ರೀಯರನ್ನು ಸ್ವೀಕರಿಸಿಕೊಳ್ಳಿರಿ.[3] ಅನ್ಯಾಯದಿಂದ ತಪ್ಪಿಸಿಕೊಳ್ಳಲು ಇದು ಹೆಚ್ಚು ಉತ್ತಮ.

أَوْ مَا مَلَكَتْ أَيْمَانُكُمْ ۚ ذَٰلِكَ أَدْنَىٰ أَلَّا تَعُولُوا ﴿٣﴾

4. ಸ್ತ್ರೀಯರಿಗೆ 'ವಿವಾಹಧನ'ವನ್ನು ಆತ್ಮ ಸಂತೋಷದಿಂದ (ಕಡ್ಡಾಯವೆಂದರಿತು) ಪಾವತಿ ಮಾಡಿರಿ. ಅವರು ತಮ್ಮಿಷ್ಟದಿಂದ ವಿವಾಹಧನದ ಒಂದಂಶವನ್ನು ನಿಮಗೆ ಬಿಟ್ಟು ಕೊಟ್ಟರೆ, ನೀವು ಅದನ್ನು ಸಂತೋಷದಿಂದ ಅನುಭೋಗಿಸಿಕೊಳ್ಳಬಹುದು.

وَآتُوا النِّسَاءَ صَدُقَاتِهِنَّ نِحْلَةً ۚ فَإِن طِبْنَ لَكُمْ عَن شَيْءٍ مِّنْهُ نَفْسًا فَكُلُوهُ هَنِيئًا مَّرِيئًا ﴿٤﴾

5. ಅಲ್ಲಾಹನು ನಿಮಗೆ ಜೀವನ ಸಾಧನವನ್ನಾಗಿ ನಿಶ್ಚಯಿಸಿರುವ ಸಂಪತ್ತನ್ನು ತಿಳಿಗೇಡಿಗಳ ವಶಕ್ಕೆ ಒಪ್ಪಿಸಬೇಡಿರಿ. ಆದರೆ ಅವರಿಗೆ ಉಣ್ಣಲಿಕ್ಕೂ ಉಡಲಿಕ್ಕೂ ಕೊಡಿರಿ ಮತ್ತು ಅವರಿಗೆ ಸದ್ಬೋಧನೆ ಮಾಡಿರಿ.

وَلَا تُؤْتُوا السُّفَهَاءَ أَمْوَالَكُمُ الَّتِي جَعَلَ اللَّهُ لَكُمْ قِيَامًا وَارْزُقُوهُمْ فِيهَا وَاكْسُوهُمْ وَقُولُوا لَهُمْ قَوْلًا مَّعْرُوفًا ﴿٥﴾

6. ಅನಾಥರನ್ನು ಅವರು ವಿವಾಹಯೋಗ್ಯ ವಯಸ್ಸಿನವರಾಗುವ ವರೆಗೂ ಪರಿಶೀಲಿಸುತ್ತಲೇ ಇರಿ.[4] ಅನಂತರ ಅವರಲ್ಲಿ ಯೋಗ್ಯತಾರ್ಹತೆಗಳನ್ನು ಕಂಡೊಡನೆ ಅವರ ಸಂಪತ್ತನ್ನು ಅವರ ವಶಕ್ಕೊಪ್ಪಿಸಿರಿ. ಅವರು ದೊಡ್ಡವರಾಗಿ ತಮ್ಮ ಹಕ್ಕನ್ನು ಕೇಳುವರೆಂದು ಹೆದರಿ, ನ್ಯಾಯದ ಮೇರೆಯನ್ನು ಮೀರಿ, ಅವರ ಸಂಪತ್ತನ್ನು ಲಗುಬಗೆಯಿಂದ ಕಬಳಿಸಬಾರದು. ಅನಾಥರ ರಕ್ಷಕನು ಧನಿಕನಾಗಿದ್ದರೆ ಅವನು ಸಂಯಮದಿಂದ ವರ್ತಿಸಲಿ ಮತ್ತು

وَابْتَلُوا الْيَتَامَىٰ حَتَّىٰ إِذَا بَلَغُوا النِّكَاحَ فَإِنْ آنَسْتُم مِّنْهُمْ رُشْدًا فَادْفَعُوا إِلَيْهِمْ أَمْوَالَهُمْ ۖ وَلَا تَأْكُلُوهَا إِسْرَافًا وَبِدَارًا أَن يَكْبَرُوا ۚ وَمَن كَانَ غَنِيًّا فَلْيَسْتَعْفِفْ ۖ وَمَن كَانَ فَقِيرًا فَلْيَأْكُلْ بِالْمَعْرُوفِ ۚ فَإِذَا دَفَعْتُمْ

2. ಪತ್ನಿಯರ ಸಂಖ್ಯೆಯನ್ನು ಮಿತಗೊಳಿಸಲಾಗಿದೆ ಮತ್ತು ಒಮ್ಮೆಗೆ ನಾಲ್ಕಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದಿರುವುದನ್ನು ನಿಷೇಧಿಸಲಾಗಿದೆ ಎಂಬ ಬಗ್ಗೆ ಕರ್ಮಶಾಸ್ತ್ರಜ್ಞರಲ್ಲಿ ಒಮ್ಮತಾಭಿಪ್ರಾಯವಿದೆ. ಅಲ್ಲದೆ ಈ ಸೂಕ್ತ ಪತ್ನಿಯರ ಸಂಖ್ಯೆಯನ್ನು ನ್ಯಾಯಪಾಲನೆಯ ಶರತ್ತಿನೊಂದಿಗೆ ಜೋಡಿಸಿದೆ. ನ್ಯಾಯಪಾಲನೆಯ ಶರತ್ತನ್ನು ಈಡೇರಿಸದೆ, ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವ ಅನುಮತಿಯಿಂದ ಪ್ರಯೋಜನ ಪಡೆಯುವವನು ಅಲ್ಲಾಹನಿಗೆ ವಂಚನೆ ಮಾಡುವವನಾಗಿದ್ದಾನೆ. ಯಾವ ಪತ್ನಿ ಅಥವಾ ಪತ್ನಿಯರು ನ್ಯಾಯಪಾಲನೆಯ ಶರತ್ತಿನಿಂದ ವಂಚಿತರಾಗಿದ್ದಾರೋ ಅವರ ಅಹವಾಲನ್ನು ಕೇಳುವ ಹಕ್ಕು ಇಸ್ಲಾಮೀ ಆಡಳಿತದ ನ್ಯಾಯಾಲಯಗಳಿಗಿವೆ. ಕೆಲವರು ಪಾಶ್ಚಿಮಾತ್ಯ ಸಿದ್ಧಾಂತಗಳಿಂದ ಪ್ರಭಾವಿತರಾಗಿ, ಪಾಶ್ಚಿಮಾತ್ಯರ ದೃಷ್ಟಿಯಲ್ಲಿ ಒಂದು ಕೆಟ್ಟ ಪದ್ಧತಿಯಾಗಿರುವ ಬಹುಪತ್ನಿತ್ವವನ್ನು ಕೊನೆಗೊಳಿಸುವುದೇ ಕುರ್‌ಆನಿನ ನೈಜ ಉದ್ದೇಶವಾಗಿದೆ ಎಂದು ಸಾಬೀತು ಪಡಿಸಲು ಪ್ರಯತ್ನಿಸುತ್ತಾರೆ. ಇದು ಕೇವಲ ವೈಚಾರಿಕ ದಾಸ್ಯದ ಪರಿಣಾಮವಾಗಿದೆ. ಬಹುಪತ್ನಿತ್ವವೇ ಒಂದು ಕೆಟ್ಟ ಪದ್ಧತಿಯಾಗಿದೆ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಕೆಲವೊಮ್ಮೆ ಇದು ಸಾಂಸ್ಕೃತಿಕ ಮತ್ತು ನೈತಿಕ ಅನಿವಾರ್ಯತೆಯಾಗಿ ಮಾರ್ಪಡುತ್ತದೆ. ಕುರ್‌ಆನಿನಲ್ಲಿ ಅದನ್ನು ಅತ್ಯಂತ ಸ್ಫುಟವಾದ ಭಾಷೆಯಲ್ಲಿ ಧರ್ಮಸಮ್ಮತವೆನ್ನಲಾಗಿದೆ. ಕುರ್‌ಆನ್ ಅದನ್ನು ಕೊನೆಗೊಳಿಸಬಯಸುತ್ತದೆ ಎಂದು ಊಹಿಸಲು ಅದನ್ನು ಖಂಡಿಸುತ್ತಾ ಸೂಚ್ಯವಾಗಿಯೂ ಯಾವುದೇ ಮಾತನ್ನು ಹೇಳಲಾಗಿಲ್ಲ.

3. ಅರ್ಥಾತ್- ದಾಸಿಯರು. ಅಂದರೆ ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ನಂತರ ಯುದ್ಧ ಕೈದಿಗಳ ವಿನಿಮಯವಾಗದಿದ್ದಾಗ ಸರ್ಕಾರದ ವತಿಯಿಂದ ಜನರ ಮಧ್ಯೆ ವಿತರಿಸಲ್ಪಟ್ಟ ಮಹಿಳೆಯರು.

4. ಅರ್ಥಾತ್- ಅವರು ಪ್ರೌಢಾವಸ್ಥೆಗೆ ಕಾಲಿರಿಸುತ್ತಿರುವ ಹಂತದಲ್ಲಿ ಅವರಲ್ಲಿ ಬೌದ್ಧಿಕ ಬೆಳವಣಿಗೆ ಎಷ್ಟರ ಮಟ್ಟಿಗಿದೆ, ತಮ್ಮ ವ್ಯವಹಾರಗಳನ್ನು ಸ್ವತಃ ನಿರ್ವಹಿಸುವ ಅರ್ಹತೆ ಅವರಲ್ಲಿ ಯಾವ ಮಟ್ಟದಲ್ಲಿ ಕಂಡು ಬರುತ್ತಿದೆ ಎಂಬುದನ್ನು ನೋಡುತ್ತಿರಿ.

ಅವನು ಬಡವನಾಗಿದ್ದರೆ ನ್ಯಾಯೋಚಿತ ರೀತಿಯಿಂದ ತಿನ್ನಲಿ.[5] ಅನಂತರ ಅವರ ಸಂಪತ್ತನ್ನು ಅವರಿಗೆ ಒಪ್ಪಿಸುವಾಗ ಜನರನ್ನು ಸಾಕ್ಷಿಯಾಗಿರಿಸಿಕೊಳ್ಳಿರಿ. ಲೆಕ್ಕ ಪರಿಶೋಧನೆ ನಡೆಸಲು ಅಲ್ಲಾಹ್ ಸಾಕು.

إِلَيْهِمْ أَمْوَالَهُمْ فَأَشْهِدُوا عَلَيْهِمْ ۚ وَكَفَىٰ
بِاللَّهِ حَسِيبًا ﴿٦﴾

7. ಮಾತಾಪಿತರೂ ಆಪ್ತ ಬಂಧುಗಳೂ ಬಿಟ್ಟು ಹೋದ ಸಂಪತ್ತಿನಲ್ಲಿ ಪುರುಷರಿಗೆ ಪಾಲಿದೆ. ಮಾತಾಪಿತರೂ ಆಪ್ತ ಬಂಧುಗಳೂ ಬಿಟ್ಟು ಹೋದ ಸಂಪತ್ತಿನಲ್ಲಿ ಸ್ತ್ರೀಯರಿಗೂ ಪಾಲಿದೆ. ಕಡಿಮೆ ಇರಲಿ ಅಥವಾ ಹೆಚ್ಚಿರಲಿ[6] ಈ ಪಾಲು (ಅಲ್ಲಾಹನ ಕಡೆಯಿಂದ) ನಿಶ್ಚಿತವಾಗಿದೆ.

لِلرِّجَالِ نَصِيبٌ مِمَّا تَرَكَ الْوَالِدَانِ
وَالْأَقْرَبُونَ وَلِلنِّسَاءِ نَصِيبٌ مِمَّا تَرَكَ
الْوَالِدَانِ وَالْأَقْرَبُونَ مِمَّا قَلَّ مِنْهُ
أَوْ كَثُرَ ۚ نَصِيبًا مَفْرُوضًا ﴿٧﴾

8. ಪಾಲಾಗುವ ಸಂದರ್ಭದಲ್ಲಿ (ಹಕ್ಕುದಾರರಲ್ಲದ) ಸಂಬಂಧಿಕರು, ಅನಾಥರು ಮತ್ತು ನಿರ್ಗತಿಕರು ಬಂದರೆ ಅವರಿಗೂ ಏನಾದರೂ ಕೊಡಿರಿ. ಅವರೊಡನೆ ಸೌಜನ್ಯದ ಮಾತುಗಳನ್ನಾಡಿರಿ.

وَإِذَا حَضَرَ الْقِسْمَةَ أُولُو الْقُرْبَىٰ وَالْيَتَامَىٰ
وَالْمَسَاكِينُ فَارْزُقُوهُمْ مِنْهُ وَقُولُوا
لَهُمْ قَوْلًا مَعْرُوفًا ﴿٨﴾

9. ತಾವು ಸ್ವತಃ ಅಸಹಾಯಕ ಮಕ್ಕಳನ್ನು ಬಿಟ್ಟು ಮರಣ ಹೊಂದುತ್ತಿದ್ದರೆ ಆಗ ತಮ್ಮ ಮಕ್ಕಳ ಬಗ್ಗೆ ತಮಗೆಷ್ಟು ಕಾಳಜಿ ಯುಂಟಾಗುತ್ತಿತ್ತೆಂಬುದನ್ನು ಎಣಿಸಿಕೊಂಡು ಜನರು ಭಯಪಡ ಬೇಕು. ಆದುದರಿಂದ ಅವರು ಅಲ್ಲಾಹನನ್ನು ಭಯಪಟ್ಟು ಸರಿಯಾದ ಮಾತನ್ನೇ ಆಡಲಿ.

وَلْيَخْشَ الَّذِينَ لَوْ تَرَكُوا مِنْ خَلْفِهِمْ
ذُرِّيَّةً ضِعَافًا خَافُوا عَلَيْهِمْ فَلْيَتَّقُوا
اللَّهَ وَلْيَقُولُوا قَوْلًا سَدِيدًا ﴿٩﴾

10. ಅನಾಥರ ಸೊತ್ತನ್ನು ಅಕ್ರಮವಾಗಿ ಕಬಳಿಸುವವರು ವಾಸ್ತವದಲ್ಲಿ ತಮ್ಮ ಹೊಟ್ಟೆಯನ್ನು ನರಕಾಗ್ನಿಯಿಂದ ತುಂಬುತ್ತಾರೆ ಮತ್ತು ನಿಶ್ಚಯವಾಗಿಯೂ ಅವರು ಜ್ವಲಿಸುವ ನರಕಾಗ್ನಿಯಲ್ಲಿ ತಳ್ಳಲ್ಪಡುವವರು.

إِنَّ الَّذِينَ يَأْكُلُونَ أَمْوَالَ الْيَتَامَىٰ ظُلْمًا
إِنَّمَا يَأْكُلُونَ فِي بُطُونِهِمْ نَارًا ۖ
وَسَيَصْلَوْنَ سَعِيرًا ﴿١٠﴾

5. ಅರ್ಥಾತ್- ಪ್ರತಿಯೊಬ್ಬ ನಿಷ್ಪಕ್ಷಪಾತಿ ವ್ಯಕ್ತಿಗೂ ಸರಿಯೆನಿಸುವ ರೀತಿಯಲ್ಲಿ ತನ್ನ ಸೇವೆಗೆ ಅವನು ಪ್ರತಿಫಲ ಪಡೆಯಲಿ. ಅದನ್ನೂ ಗೋಪ್ಯವಾಗಿ ಪಡೆಯುವ ಬದಲು ನಿಗದಿತ ರೂಪದಲ್ಲಿ ಬಹಿರಂಗವಾಗಿ ಪಡೆಯಲಿ ಮತ್ತು ಅದರ ಲೆಕ್ಕವಿಡಲಿ.

6. ಈ ಸೂಕ್ತದ ಮೂಲಕ ಸ್ಪಷ್ಟವಾಗಿ ಐದು ಆದೇಶಗಳನ್ನು ಕೊಡಲಾಗಿದೆ. ಮೊದಲನೆಯದಾಗಿ ವಾರೀಸು ಸೊತ್ತಿಗೆ ಪುರುಷರು ಮಾತ್ರ ಹಕ್ಕುದಾರರಲ್ಲ ಮಹಿಳೆಯರಿಗೂ ಅದರಲ್ಲಿ ಹಕ್ಕಿದೆ. ಎರಡನೆಯದಾಗಿ ವಾರೀಸು ಸೊತ್ತು ಎಷ್ಟೇ ಚಿಕ್ಕ ಪ್ರಮಾಣದ್ದಾಗಿದ್ದರೂ ಅದು ವಿತರಿಸಲ್ಪಡಬೇಕು. ಮೂರನೆಯದಾಗಿ ಈ ಸೂಕ್ತದಲ್ಲಿ ಮೃತ ವ್ಯಕ್ತಿಯು ಬಿಟ್ಟು ಹೋದ ಒಟ್ಟು ಆಸ್ತಿಯು ವಿತರಣೆಯಾಗಬೇಕು ಎನ್ನಲಾಗಿದೆ. ಸ್ಥಿರಾಸ್ತಿ ಮತ್ತು ಚರಾಸ್ತಿ ಕೃಷಿಗೆ ಸಂಬಂಧಿಸಿದ ಮತ್ತು ಕೃಷ್ಯೇತರ, ಪಿತ್ರಾರ್ಜಿತ ಮತ್ತು ಸ್ವಯಮಾರ್ಜಿತ ಎಂಬ ಭೇದವನ್ನು ಇದರಲ್ಲಿ ಕಲ್ಪಿಸಲಾಗಿಲ್ಲ. ನಾಲ್ಕನೆಯದಾಗಿ ಆಸ್ತಿಯನ್ನು ಹೊಂದಿರುವವನ ಜೀವನಾವಸ್ಥೆಯಲ್ಲಿ ವಾರೀಸು ಹಕ್ಕಿನ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವನು ತನ್ನ ಹಿಂದೆ ಆಸ್ತಿಯನ್ನು ಬಿಟ್ಟು ನಿಧನನಾದಾಗ ಮಾತ್ರ ವಾರೀಸುದಾರಿಕೆಯ ಪ್ರಶ್ನೆ ಉದ್ಭವಿಸುತ್ತದೆ. ಐದನೆಯದಾಗಿ ಹತ್ತಿರದ ಸಂಬಂಧಿಕರ ಉಪಸ್ಥಿತಿಯಲ್ಲಿ ದೂರದ ಸಂಬಂಧಿಕರು ವಾರೀಸು ಸೊತ್ತನ್ನು ಪಡೆಯಲಾರರು ಎಂಬ ನಿಯಮವೂ ಇದರಿಂದ ವ್ಯಕ್ತವಾಗುತ್ತದೆ. ಸೂಕ್ತ 11ರ ಕೊನೆಯ ಭಾಗದಲ್ಲಿ ಮತ್ತು 33ನೇ ಸೂಕ್ತದಲ್ಲಿ ಈ ನಿಯಮವನ್ನೇ ಮತ್ತಷ್ಟು ವಿವರಿಸಲಾಗಿದೆ.

11. ಅಲ್ಲಾಹನು ನಿಮ್ಮ ಮಕ್ಕಳ ಬಗ್ಗೆ ನಿಮಗೆ ಹೀಗೆ ಆದೇಶವನ್ನೀಯುತ್ತಾನೆ; ಪುರುಷನಿಗೆ, ಇಬ್ಬರು ಸ್ತ್ರೀಯರಿಗೆ ಸಮಾನವಾದ ಪಾಲಿದೆ.[7] (ಮೃತನ ಉತ್ತರಾಧಿಕಾರಿಗಳಾಗಿ) ಇಬ್ಬರಿಗಿಂತ ಹೆಚ್ಚು ಮಂದಿ ಪುತ್ರಿಯರಿದ್ದರೆ ಅವರಿಗೆ ಉತ್ತರಾಧಿಕಾರದ ಸೊತ್ತಿನಿಂದ ಮೂರನೆಯ ಎರಡಂಶ ಕೊಡಲಾಗುವುದು[8] ಮತ್ತು ಒಬ್ಬಳೇ ಮಗಳಿದ್ದರೆ ಅವಳಿಗೆ ಅರ್ಧಾಂಶ. ಮೃತನು ಮಕ್ಕಳಿದ್ದವನಾಗಿದ್ದರೆ ಮಾತಾಪಿತರಲ್ಲಿ ಪ್ರತಿಯೊಬ್ಬರಿಗೂ ಸೊತ್ತಿನ ಆರನೆಯ ಒಂದಂಶ ಸಿಗಬೇಕು.[9] ಅವನು ಮಕ್ಕಳಿಲ್ಲದವನಾಗಿದ್ದು ಮಾತಾಪಿತರೇ ಅವನ ವಾರೀಸುದಾರರಾಗಿರುವಾಗ ತಾಯಿಗೆ ಮೂರನೆಯ ಒಂದಂಶ ಕೊಡಬೇಕು.[10] ಮೃತನಿಗೆ ಸಹೋದರ ಸಹೋದರಿಯರೂ ಇದ್ದರೆ, ತಾಯಿಯು ಆರನೆಯ ಒಂದಂಶಕ್ಕೆ ಹಕ್ಕುದಾರಳಾಗುವಳು.[11] ಮೃತನು ಮಾಡಿದ 'ವಸಿಯ್ಯತ್' (ಉಯಿಲು) ಪೂರ್ತಿಗೊಳಿಸಿದ ಮತ್ತು ಅವನ ಮೇಲಿರುವ ಸಾಲಗಳ ಸಂದಾಯ ಆದ ಅನಂತರವೇ[12] (ಈ ಪಾಲುಗಳನ್ನು ಹಂಚಲಾಗುವುದು). ನಿಮ್ಮ ಮಾತಾಪಿತರ ಮತ್ತು ಮಕ್ಕಳ ಪೈಕಿ

يُوْصِيْكُمُ اللّٰهُ فِيْٓ اَوْلَادِكُمْ ۗ لِلذَّكَرِ مِثْلُ
حَظِّ الْاُنْثَيَيْنِ ۚ فَاِنْ كُنَّ نِسَآءً فَوْقَ
اثْنَتَيْنِ فَلَهُنَّ ثُلُثَا مَا تَرَكَ ۚ وَاِنْ كَانَتْ
وَاحِدَةً فَلَهَا النِّصْفُ ۗ وَلِاَبَوَيْهِ لِكُلِّ
وَاحِدٍ مِّنْهُمَا السُّدُسُ مِمَّا تَرَكَ اِنْ
كَانَ لَهٗ وَلَدٌ ۚ فَاِنْ لَّمْ يَكُنْ لَّهٗ وَلَدٌ وَّ
وَرِثَهٗٓ اَبَوٰهُ فَلِاُمِّهِ الثُّلُثُ ۚ فَاِنْ كَانَ
لَهٗٓ اِخْوَةٌ فَلِاُمِّهِ السُّدُسُ مِنْۢ بَعْدِ
وَصِيَّةٍ يُّوْصِيْ بِهَآ اَوْ دَيْنٍ ۗ اٰبَآؤُكُمْ
وَاَبْنَآؤُكُمْ لَا تَدْرُوْنَ اَيُّهُمْ اَقْرَبُ لَكُمْ

7. ಕೌಟುಂಬಿಕ ಜೀವನದಲ್ಲಿ ಪುರುಷನಿಗೆ ಶರೀಅತ್ ಹೆಚ್ಚು ಆರ್ಥಿಕ ಜವಾಬ್ದಾರಿಗಳನ್ನು ನೀಡಿದೆ ಮತ್ತು ಸ್ತ್ರೀಯನ್ನು ಅನೇಕ ಆರ್ಥಿಕ ಜವಾಬ್ದಾರಿಗಳಿಂದ ಮುಕ್ತಗೊಳಿಸಿದೆ. ಆದ್ದರಿಂದ ಮಹಿಳೆಗೆ ಆಸ್ತಿಯಲ್ಲಿ ಪುರುಷನಿಗಿಂತ ಕಡಿಮೆ ಪಾಲಿರುವುದು ನ್ಯಾಯದ ಬೇಡಿಕೆಯೂ ಆಗಿದೆ.

8. ಎರಡು ಹೆಣ್ಮಕ್ಕಳಿದ್ದರೂ ಈ ಆದೇಶ ಅನ್ವಯವಾಗುತ್ತದೆ. ಅರ್ಥಾತ್- ಒಬ್ಬನಿಗೆ ವಾರೀಸುದಾರನಾಗಿ ಯಾವುದೇ ಪುತ್ರ ಸಂತಾನವಿಲ್ಲದೆ, ಪುತ್ರಿಯರು ಮಾತ್ರವಿದ್ದರೆ, ಅವರ ಸಂಖ್ಯೆ ಎರಡು ಅಥವಾ ಅದಕ್ಕಿಂತ ಹೆಚ್ಚಿದ್ದರೂ, ಅವನು ಬಿಟ್ಟ ಆಸ್ತಿಯ ಮೂರನೇ ಎರಡು ($^2/_3$) ಭಾಗವನ್ನು ಪುತ್ರಿಯರಲ್ಲಿ ವಿತರಿಸಲಾಗುವುದು. ಉಳಿದ ಮೂರನೇ ಒಂದು ($^1/_3$) ಭಾಗವನ್ನು ಇತರ ವಾರೀಸುದಾರರಿಗೆ ಕೊಡಲಾಗುವುದು. ಆದರೆ ಮೃತನಿಗೆ ಒಬ್ಬನೇ ಪುತ್ರನಿದ್ದು ಇತರ ವಾರೀಸುದಾರರಿಲ್ಲದಿದ್ದರೆ ಅವನು ಸಮಸ್ತ ಆಸ್ತಿಯ ವಾರೀಸುದಾರನಾಗುವನು ಎಂಬ ಬಗ್ಗೆ ಒಮ್ಮತಾಭಿಪ್ರಾಯವಿದೆ. ಇತರ ವಾರೀಸುದಾರರು ಇದ್ದ ಪಕ್ಷದಲ್ಲಿ ಅವರಿಗೆ ಸಲ್ಲಬೇಕಾದ ಅಂಶವನ್ನು ಬಿಟ್ಟು ಉಳಿದ ಆಸ್ತಿ ಎಲ್ಲ ಅವನಿಗೆ ದೊರೆಯುವುದು.

9. ಅರ್ಥಾತ್- ಮೃತನಿಗೆ ಮಕ್ಕಳಿದ್ದರೆ ಅವನ ಮಾತಾಪಿತರಲ್ಲಿ ಪ್ರತಿಯೊಬ್ಬರೂ ಆಸ್ತಿಯ ಆರನೇ ಒಂದು ಭಾಗ($^1/_6$)ವನ್ನು ಪಡೆಯುವರು. ಮೃತನ ವಾರೀಸುದಾರರಾಗಿ ಬರೇ ಪುತ್ರಿಯರು, ಬರೇ ಪುತ್ರರು, ಪುತ್ರ-ಪುತ್ರಿಯರಿಬ್ಬರೂ ಅಥವಾ ಒಬ್ಬನೇ ಪುತ್ರ ಯಾ ಪುತ್ರಿಯಿದ್ದರೂ ಸರಿಯೇ. ಉಳಿದ ಮೂರನೇ ಎರಡು ($^2/_3$) ಭಾಗದಲ್ಲಿ ಇತರ ವಾರೀಸುದಾರರು ಪಾಲು ಪಡೆಯುವರು.

10. ಮಾತಾಪಿತರ ಹೊರತು ಬೇರಾರೂ ವಾರೀಸುದಾರರಿಲ್ಲದಿದ್ದರೆ ಉಳಿದ ಮೂರನೇ ಎರಡು ($^2/_3$) ಭಾಗ ತಂದೆಗೆ ಸಿಗುವುದು. ಅನ್ಯಥಾ ತಂದೆ ಮತ್ತು ಇತರ ವಾರೀಸುದಾರರು ಅದರಲ್ಲಿ ಭಾಗಿಗಳಾಗುವರು.

11. ಮೃತನಿಗೆ ಸೋದರ ಸೋದರಿಯರಿದ್ದರೆ ತಾಯಿಯ ಪಾಲು ಮೂರನೇ ಒಂದು ($^1/_3$) ಭಾಗದ ಬದಲಿಗೆ ಆರನೇ ಒಂದು ($^1/_6$) ಭಾಗವಾಗುವುದು. ಹೀಗೆ ತಾಯಿಯ ಪಾಲಿನಿಂದ ಪಡೆಯಲಾದ ಆರನೇ ಒಂದು ($^1/_6$) ಭಾಗವನ್ನು ತಂದೆಯ ಪಾಲಿಗೆ ಸೇರಿಸಲಾಗುವುದು. ಏಕೆಂದರೆ ಇಂತಹ ಸಂದರ್ಭದಲ್ಲಿ ತಂದೆಯ ಮೇಲೆ ಹೆಚ್ಚಿನ ಹೊಣೆಗಾರಿಕೆಗಳಿರುವುದು. ಮೃತನ ತಂದೆ ತಾಯಂದಿರು ಜೀವಂತವಿದ್ದರೆ ಅವನ ಸೋದರ-ಸೋದರಿಯರಿಗೆ ಪಾಲಿರುವುದಿಲ್ಲವೆಂಬುದು ಗಮನಾರ್ಹ.

12. ಇಲ್ಲಿ ವಸಿಯ್ಯತ್‌ನ ಪ್ರಸ್ತಾಪವನ್ನು ಸಾಲಕ್ಕಿಂತ ಮೊದಲು ಮಾಡಲಾಗಿದ್ದರೂ ಸಾಲಕ್ಕೆ, ವಸಿಯ್ಯತ್‌ಗಿಂತ ಹೆಚ್ಚಿನ ಆದ್ಯತೆ ಇದೆ ಎಂಬುದರ ಬಗ್ಗೆ ಒಮ್ಮತಾಭಿಪ್ರಾಯವಿದೆ. ಅರ್ಥಾತ್- ಮೃತನಿಗೆ ಸಾಲವಿದ್ದರೆ ಮೊಟ್ಟ ಮೊದಲು ಅವನ ಆಸ್ತಿಯಿಂದ ಅದನ್ನು ನೀಡಲಾಗುವುದು. ಅನಂತರ ವಸಿಯ್ಯತ್ತನ್ನು ಈಡೇರಿಸಲಾಗುವುದು. ತದನಂತರ ಆಸ್ತಿಯ ವಿಂಗಡನೆ ನಡೆಯುವುದು.

ನಿಮಗೆ ಪ್ರಯೋಜನದ ದೃಷ್ಟಿಯಿಂದ ಯಾರು ಸಮೀಪದವರೆಂಬುದು ನಿಮಗೆ ತಿಳಿಯದು. ಅಲ್ಲಾಹನು ನಿಶ್ಚಯಿಸಿದ ಪಾಲುಗಳಿವು. ನಿಶ್ಚಯವಾಗಿಯೂ ಅಲ್ಲಾಹನು ಸಕಲವನ್ನು ಬಲ್ಲವನೂ ಮಹಾ ಯುಕ್ತಿಪೂರ್ಣನೂ ಆಗಿರುತ್ತಾನೆ.

نَفْعًا ۚ فَرِيضَةً مِّنَ اللَّهِ ۗ إِنَّ اللَّهَ كَانَ
عَلِيمًا حَكِيمًا ﴿١١﴾

12. ನಿಮ್ಮ ಪತ್ನಿಯರು ಮಕ್ಕಳಿಲ್ಲದವರಾಗಿದ್ದರೆ ಅವರು ಬಿಟ್ಟುಹೋದುದರಲ್ಲಿ ಅರ್ಧಾಂಶ ನಿಮಗೆ ಸಿಗುವುದು. ಮಕ್ಕಳಿದ್ದರೆ ಅವರು ಮಾಡಿದ್ದ ವಸಿಯ್ಯತನ್ನು ಈಡೇರಿಸಿದ ಮತ್ತು ಸಾಲಗಳನ್ನು ಪಾವತಿ ಮಾಡಿದ ಬಳಿಕ ಉಳಿಯುವ ಸೊತ್ತಿನ ನಾಲ್ಕನೆಯ ಒಂದಂಶ ನಿಮ್ಮದು. ನೀವು ಮಕ್ಕಳಿಲ್ಲದವರಾಗಿದ್ದರೆ ನೀವು ಬಿಟ್ಟುಹೋದ ಸೊತ್ತಿನ ಕಾಲಂಶಕ್ಕೆ ಅವರು ಹಕ್ಕುದಾರರಾಗುವರು. ಮಕ್ಕಳಿದ್ದರೆ ನೀವು ಮಾಡಿದ್ದ ವಸಿಯ್ಯತ್ ಮತ್ತು ಸಾಲಗಳ ಪಾವತಿಯಾದ ಬಳಿಕ ಉಳಿಯುವ ಸೊತ್ತಿನ ಎಂಟನೆಯ ಒಂದಂಶ ಅವರದಾಗುವುದು.[13] (ವಾರೀಸುದಾರರೊಳಗೆ ಪಾಲಾಗತಕ್ಕ ಸೊತ್ತನ್ನು ಬಿಟ್ಟುಹೋದ) ಪುರುಷನಾಗಲಿ, ಸ್ತ್ರೀಯಾಗಲಿ ಮಕ್ಕಳಿಲ್ಲದವರಾಗಿದ್ದು ಅವರ ಮಾತಾಪಿತರೂ ಜೀವಂತರಾಗಿಲ್ಲದಿದ್ದು ಅವರಿಗೆ ಒಬ್ಬ ಸಹೋದರ ಅಥವಾ ಒಬ್ಬ ಸಹೋದರಿ ಇದ್ದರೆ, ಅವರಲ್ಲಿ ಪ್ರತಿಯೊಬ್ಬರಿಗೆ ಆರನೆಯ ಒಂದಂಶ ಸಿಗುವುದು ಮತ್ತು ಸಹೋದರ ಸಹೋದರಿಯರು ಒಬ್ಬರಿಗಿಂತ ಅಧಿಕ ಸಂಖ್ಯೆಯಲ್ಲಿದ್ದರೆ, ಮೃತರು ಮಾಡಿದ್ದ ಹಾನಿಕಾರಕವಲ್ಲದ[14] ವಸಿಯ್ಯತನ್ನು ಈಡೇರಿಸಿದ ಮತ್ತು ಸಾಲಗಳನ್ನು ಪಾವತಿ ಮಾಡಿದ ಬಳಿಕ ಉಳಿಯುವ ಒಟ್ಟು ಸೊತ್ತಿನ ಮೂರನೆಯ ಒಂದಂಶದಲ್ಲಿ ಅವರೆಲ್ಲರೂ ಭಾಗಿಗಳಾಗುವರು.[15] ಇವು ಅಲ್ಲಾಹನ ಅಪ್ಪಣೆಗಳು ಮತ್ತು ಅಲ್ಲಾಹನು ಸರ್ವಜ್ಞನೂ ಸಹನಶೀಲನೂ ಆಗಿರುತ್ತಾನೆ.

وَلَكُمْ نِصْفُ مَا تَرَكَ أَزْوَاجُكُمْ إِن
لَّمْ يَكُن لَّهُنَّ وَلَدٌ ۚ فَإِن كَانَ لَهُنَّ
وَلَدٌ فَلَكُمُ الرُّبُعُ مِمَّا تَرَكْنَ مِن بَعْدِ
وَصِيَّةٍ يُوصِينَ بِهَا أَوْ دَيْنٍ ۚ وَلَهُنَّ
الرُّبُعُ مِمَّا تَرَكْتُمْ إِن لَّمْ يَكُن لَّكُمْ
وَلَدٌ ۚ فَإِن كَانَ لَكُمْ وَلَدٌ فَلَهُنَّ الثُّمُنُ
مِمَّا تَرَكْتُم مِّن بَعْدِ وَصِيَّةٍ تُوصُونَ
بِهَا أَوْ دَيْنٍ ۗ وَإِن كَانَ رَجُلٌ يُورَثُ
كَلَالَةً أَوِ امْرَأَةٌ وَلَهُ أَخٌ أَوْ أُخْتٌ
فَلِكُلِّ وَاحِدٍ مِّنْهُمَا السُّدُسُ ۚ فَإِن
كَانُوا أَكْثَرَ مِن ذَٰلِكَ فَهُمْ شُرَكَاءُ فِي
الثُّلُثِ مِن بَعْدِ وَصِيَّةٍ يُوصَىٰ بِهَا أَوْ
دَيْنٍ غَيْرَ مُضَارٍّ ۚ وَصِيَّةً مِّنَ اللَّهِ ۗ
وَاللَّهُ عَلِيمٌ حَلِيمٌ ﴿١٢﴾

13. ಅರ್ಥಾತ್- ಒಬ್ಬಳೇ ಪತ್ನಿಯಿದ್ದರೂ, ಅನೇಕ ಪತ್ನಿಯರಿದ್ದರೂ ಸಂತಾನವಿದ್ದರೆ ಅವರ ಪಾಲಿಗೆ ಎಂಟನೇ ಒಂದು ($^1/_8$) ಭಾಗವಿರುವುದು. ಸಂತಾನವಿಲ್ಲದಿದ್ದರೆ ಅವರು ನಾಲ್ಕನೇ ಒಂದು ($^1/_4$) ಭಾಗವನ್ನು ಪಡೆಯಲು ಅರ್ಹರಾಗುವರು. ಎಂಟನೇ ಒಂದು ($^1/_8$) ಅಥವಾ ನಾಲ್ಕನೇ ಒಂದು ($^1/_4$) ಭಾಗದ ಆಸ್ತಿಯಲ್ಲಿ ಎಲ್ಲ ಪತ್ನಿಯರಿಗೂ ಸಮಪಾಲಿರುವುದು.

14. ಹಾನಿಕಾರಕವಾದ ವಸಿಯ್ಯತ್ ಎಂದರೆ ಪಾಲನ್ನು ಪಡೆಯಲು ಬಾಧ್ಯಸ್ಥರಾದ ಸಂಬಂಧಿಕರ ಹಕ್ಕುಗಳು ವಂಚಿಸಲ್ಪಡುವಂತಹ ವಸಿಯ್ಯತ್ ಆಗಿದೆ. ಹಾನಿಕಾರಕವಾದ ಸಾಲವೆಂದರೆ ಹಕ್ಕುದಾರರನ್ನು ವಂಚಿಸಲಿಕ್ಕಾಗಿಯೇ ವಿನಾಕಾರಣ ವ್ಯಕ್ತಿ ತಾನು ಪಡೆಯದ ಸಾಲವನ್ನು ಪಡೆದಿದ್ದೇನೆನ್ನುವುದಾಗಿದೆ. ಅಥವಾ ಹಕ್ಕುದಾರರನ್ನು ಆಸ್ತಿಯಿಂದ ವಂಚಿತಗೊಳಿಸುವ ಉದ್ದೇಶದಿಂದ ಸಾಲದ ಕುತಂತ್ರ ಹೂಡುವುದಾಗಿದೆ.

15. ಈ ಸೂಕ್ತದಲ್ಲಿರುವ ಸೋದರ ಸೋದರಿಯರ ಪ್ರಸ್ತಾಪ ಏಕೋದರ ಸೋದರ ಸೋದರಿಯರ ಅರ್ಥಾತ್ ತಂದೆ ಬೇರೆಯಾದರೂ ಒಂದೇ ತಾಯಿಯ ಗರ್ಭದಲ್ಲಿ ಜನಿಸಿದ ಸೋದರ-ಸೋದರಿಯರ ಕಡೆಗಿದೆ. ಈ ಬಗ್ಗೆ ವ್ಯಾಖ್ಯಾನಕಾರರಲ್ಲಿ ಒಮ್ಮತಾಭಿಪ್ರಾಯವಿದೆ. ಒಡಹುಟ್ಟಿದ ಸೋದರ-ಸೋದರಿಯರು ಮತ್ತು ತಂದೆಯ ಮೂಲಕ ಮೃತನಿಗೆ ಸಂಬಂಧವಿರುವ ಮಲ ಸೋದರ ಸೋದರಿಯರ ಕುರಿತು ಈ ಅಧ್ಯಾಯದ ಕೊನೆಯ ಸೂಕ್ತದಲ್ಲಿ ವಿವರಿಸಲಾಗಿದೆ.

13. ಇವು ಅಲ್ಲಾಹನು ನಿಶ್ಚಯಿಸಿದ ಮೇರೆಗಳು. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಅನುಸರಣೆ ಮಾಡುವವನಿಗೆ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನ ಗಳಲ್ಲಿ ಅಲ್ಲಾಹನು ಪ್ರವೇಶ ಕೊಡುವನು. ಅವನು ಆ ಸ್ವರ್ಗೋದ್ಯಾನಗಳಲ್ಲಿ ಸದಾ ವಾಸಿಸುತ್ತಿರುವನು ಮತ್ತು ಇದೇ ಅಮೋಘ ವಿಜಯವಾಗಿದೆ.

تِلْكَ حُدُوْدُ اللّٰهِ ۭ وَمَنْ يُّطِعِ اللّٰهَ وَرَسُوْلَهٗ
يُدْخِلْهُ جَنّٰتٍ تَجْرِيْ مِنْ تَحْتِهَا الْاَنْھٰرُ
خٰلِدِيْنَ فِيْهَا ۭ وَذٰلِكَ الْفَوْزُ الْعَظِيْمُ ﴿١٣﴾

14. ಅಲ್ಲಾಹನ ಹಾಗೂ ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡುವವನನ್ನು ಮತ್ತು ಅವನು ನಿರ್ಣಯಿಸಿ ಕೊಟ್ಟ ಮೇರೆಗಳನ್ನು ಮೀರುವವನನ್ನು ಅಲ್ಲಾಹನು ನರಕಾಗ್ನಿಗೆ ತಳ್ಳುವನು. ಅದರಲ್ಲಿ ಅವನು ಸದಾಕಾಲವಿರುವನು ಮತ್ತು ಅವನಿಗೆ ನಿಂದನಾತ್ಮಕ ಶಿಕ್ಷೆ ಇದೆ.

وَمَنْ يَّعْصِ اللّٰهَ وَرَسُوْلَهٗ وَيَتَعَدَّ
حُدُوْدَهٗ يُدْخِلْهُ نَارًا خَالِدًا فِيْهَا ۠
وَلَهٗ عَذَابٌ مُّهِيْنٌ ﴿١٤﴾

15. ನಿಮ್ಮ ಸ್ತ್ರೀಯರಲ್ಲಿ ಯಾರಾದರೂ ನೀಚವೃತ್ತಿ (ವ್ಯಭಿಚಾರ) ಎಸಗಿದರೆ ಅವರ ಬಗ್ಗೆ ನಿಮ್ಮಲ್ಲಿನ ನಾಲ್ವರ ಸಾಕ್ಷ್ಯ ಪಡೆಯಿರಿ. ನಾಲ್ವರು ಸಾಕ್ಷ್ಯ ಕೊಟ್ಟರೆ ಆ ಸ್ತ್ರೀಯರನ್ನು ಅವರ ಜೀವನ ಪರ್ಯಂತ ಅಥವಾ ಅಲ್ಲಾಹನು ಅವರಿಗೆ ಬೇರಾವುದಾದರೂ ದಾರಿ ತೆರೆಯುವ ತನಕ ಗೃಹ ಬಂಧನದಲ್ಲಿರಿಸಿರಿ.

وَالّٰتِيْ يَاْتِيْنَ الْفَاحِشَةَ مِنْ نِّسَاۗىِٕكُمْ
فَاسْتَشْهِدُوْا عَلَيْهِنَّ اَرْبَعَةً مِّنْكُمْ ۚ فَاِنْ
شَهِدُوْا فَاَمْسِكُوْھُنَّ فِي الْبُيُوْتِ حَتّٰى
يَتَوَفّٰىھُنَّ الْمَوْتُ اَوْ يَجْعَلَ اللّٰهُ
لَهُنَّ سَبِيْلًا ﴿١٥﴾

16. ನಿಮ್ಮ ಪೈಕಿ ಈ ಪಾಪಕಾರ್ಯವೆಸಗುವ ಈರ್ವರಿಗೂ ವೇದನೆ ಕೊಡಿರಿ. ಅವರು ಪಶ್ಚಾತ್ತಾಪ ಪಟ್ಟು ತಮ್ಮನ್ನು ಸುಧಾರಿಸಿ ಕೊಂಡರೆ ಅವರನ್ನು ಬಿಟ್ಟುಬಿಡಿರಿ. ಅಲ್ಲಾಹನು ಪಶ್ಚಾತ್ತಾಪವನ್ನು ಬಹಳವಾಗಿ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.[16]

وَالَّذٰنِ يَاْتِيٰنِهَا مِنْكُمْ فَاٰذُوْھُمَا ۚ
فَاِنْ تَابَا وَاَصْلَحَا فَاَعْرِضُوْا عَنْهُمَا ۭ
اِنَّ اللّٰهَ كَانَ تَوَّابًا رَّحِيْمًا ﴿١٦﴾

17. ಅವಿವೇಕದಿಂದ ಕೆಟ್ಟ ಕಾರ್ಯವೇನಾದರೂ ಎಸಗಿ ಅನಂತರ ಶೀಘ್ರವೇ ಪಶ್ಚಾತ್ತಾಪ ಪಟ್ಟು ಮರಳುವವರ ಪಶ್ಚಾತ್ತಾಪವನ್ನು ಮಾತ್ರ ಅಲ್ಲಾಹನಿಂದ ಸ್ವೀಕರಿಸಲ್ಪಡುವುದೆಂಬುದನ್ನು ತಿಳಿದಿರಬೇಕು. ಅಲ್ಲಾಹನು ಇಂತಹವರ ಮೇಲೆ ಪುನಃ ತನ್ನ ಕೃಪಾಕಟಾಕ್ಷ ಬೀರುತ್ತಾನೆ. ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

اِنَّمَا التَّوْبَةُ عَلَي اللّٰهِ لِلَّذِيْنَ يَعْمَلُوْنَ
السُّوْۗءَ بِجَهَالَةٍ ثُمَّ يَتُوْبُوْنَ مِنْ قَرِيْبٍ
فَاُولٰۗىِٕكَ يَتُوْبُ اللّٰهُ عَلَيْهِمْ ۭ وَكَانَ
اللّٰهُ عَلِــيْمًا حَكِـيْمًا ﴿١٧﴾

18. ಆದರೆ, ಪಾಪಕಾರ್ಯಗಳನ್ನು ಮಾಡುತ್ತಲೇ ಇದ್ದು ಕೊನೆಗೆ ಮರಣವು ಆಸನ್ನವಾದಾಗ, ಈಗ ನಾನು ಪಶ್ಚಾತ್ತಾಪ ಪಟ್ಟೆ

وَلَيْسَتِ التَّوْبَةُ لِلَّذِيْنَ يَعْمَلُوْنَ السَّيِّاٰتِ ۚ
حَتّٰٓي اِذَا حَضَرَ اَحَدَھُمُ الْمَوْتُ قَالَ

16. ಇದು ವ್ಯಭಿಚಾರದ ಕುರಿತು ಮೊದಲ ಆದೇಶವಾಗಿದೆ. ಅನಂತರ ಸ್ತ್ರೀ ಪುರುಷರಿಬ್ಬರಿಗೂ ನೂರು ಕೊರಡೆ ಏಟುಗಳನ್ನು ಬಾರಿಸುವ ಆದೇಶ ಕೊಡಲಾಯಿತು.

ಎನ್ನುವವನಿಗೆ 'ಪಶ್ಚಾತ್ತಾಪ' ಇಲ್ಲ. ಅದೇ ರೀತಿಯಲ್ಲಿ ಕೊನೆಯುಸಿರಿನ ತನಕವೂ 'ಸತ್ಯನಿಷೇಧಿ'ಯಾಗಿರುವವರಿಗೂ 'ಪಶ್ಚಾತ್ತಾಪ' ಇಲ್ಲ. ಇಂತಹವರಿಗೆ ನಾವು ವೇದನಾಯುಕ್ತ ಶಿಕ್ಷೆಯನ್ನು ಸಿದ್ಧಗೊಳಿಸಿಟ್ಟಿರುವೆವು.

إِنِّي تُبْتُ الْآنَ وَلَا الَّذِينَ يَمُوتُونَ
وَهُمْ كُفَّارٌ ۚ أُولَٰئِكَ أَعْتَدْنَا لَهُمْ
عَذَابًا أَلِيمًا ﴿١٨﴾

19. ಓ ಸತ್ಯವಿಶ್ವಾಸಿಗಳೇ, ನೀವು ಬಲಾತ್ಕಾರವಾಗಿ ಸ್ತ್ರೀಯರ ವಾರೀಸುದಾರರಾಗುವುದು ನಿಮಗೆ ಧರ್ಮಬದ್ಧವಲ್ಲ.[17] ಅವರನ್ನು ಸತಾಯಿಸಿ, ನೀವು ಅವರಿಗೆ ಕೊಟ್ಟಿದ್ದ ವಿವಾಹಧನದ ಒಂದಂಶವನ್ನು ದಕ್ಕಿಸಿಕೊಳ್ಳಲು ಪ್ರಯತ್ನಿಸುವುದೂ ನಿಮಗೆ ಧರ್ಮಬದ್ಧವಲ್ಲ. ಆದರೆ, ಅವರು ಪ್ರತ್ಯಕ್ಷ ನೀಚಕಾರ್ಯ ವೆಸಗಿದಾಗ (ಅದರ ಹಕ್ಕು ನಿಮಗೆ ಇದ್ದೇ ಇದೆ.)[18] ನೀವು ಅವರೊಂದಿಗೆ ಉತ್ತಮ ರೀತಿಯಿಂದ ಜೀವನ ನಡೆಸಿರಿ. ಅವರು ನಿಮಗೆ ಅಪ್ರಿಯರಾಗಿದ್ದರೆ ಒಂದು ವಸ್ತುವು ನಿಮಗೆ ಅಪ್ರಿಯ ವಾಗಿದ್ದರೂ ಅಲ್ಲಾಹನು ಅದರಲ್ಲೇ ಅತಿ ಹೆಚ್ಚು ಒಳಿತನ್ನಿರಿಸಿರಲೂ ಬಹುದು.

يَا أَيُّهَا الَّذِينَ آمَنُوا لَا يَحِلُّ لَكُمْ أَنْ
تَرِثُوا النِّسَاءَ كَرْهًا ۖ وَلَا تَعْضُلُوهُنَّ
لِتَذْهَبُوا بِبَعْضِ مَا آتَيْتُمُوهُنَّ إِلَّا أَنْ
يَأْتِينَ بِفَاحِشَةٍ مُبَيِّنَةٍ ۚ وَعَاشِرُوهُنَّ
بِالْمَعْرُوفِ ۚ فَإِنْ كَرِهْتُمُوهُنَّ فَعَسَىٰ أَنْ
تَكْرَهُوا شَيْئًا وَيَجْعَلَ اللَّهُ فِيهِ خَيْرًا كَثِيرًا ﴿١٩﴾

20. ಮತ್ತು ನೀವು ಓರ್ವ ಪತ್ನಿಯ ಸ್ಥಾನದಲ್ಲಿ ಇನ್ನೋರ್ವ ಪತ್ನಿಯನ್ನು ತರುವ ನಿರ್ಧಾರವನ್ನೇ ಮಾಡಿಕೊಂಡರೆ ಅವಳಿಗೆ ನೀವು (ಮೊದಲ ಪತ್ನಿಗೆ) ಸಂಪತ್ತಿನ ರಾಶಿಯನ್ನೇ ಕೊಟ್ಟಿದ್ದರೂ ಅದರಿಂದ ಲೇಶ ಮಾತ್ರವನ್ನೂ ಹಿಂದಕ್ಕೆ ಪಡೆಯಬಾರದು. ನೀವು ಸುಳ್ಳಾರೋಪ ಹೊರಿಸಿ ಮತ್ತು ಪ್ರತ್ಯಕ್ಷ ಅತಿರೇಕವೆಸಗಿ ಅದನ್ನು ಹಿಂದಕ್ಕೆ ಪಡೆಯುವಿರಾ?

وَإِنْ أَرَدْتُمُ اسْتِبْدَالَ زَوْجٍ مَكَانَ
زَوْجٍ وَآتَيْتُمْ إِحْدَاهُنَّ قِنْطَارًا فَلَا
تَأْخُذُوا مِنْهُ شَيْئًا ۚ أَتَأْخُذُونَهُ بُهْتَانًا
وَإِثْمًا مُبِينًا ﴿٢٠﴾

21. ನೀವು ಪರಸ್ಪರ ರಸಾನಂದವನ್ನು ಸವಿದ ಬಳಿಕ ಹಾಗೂ ಅವರು ನಿಮ್ಮಿಂದ ಒಂದು ಪ್ರಬಲ ಕರಾರನ್ನು ಪಡೆದುಕೊಂಡ ಬಳಿಕ ನೀವು ಅದನ್ನು ಹಿಂದಕ್ಕೆ ಪಡೆಯುವುದಾದರೂ ಹೇಗೆ?

وَكَيْفَ تَأْخُذُونَهُ وَقَدْ أَفْضَىٰ بَعْضُكُمْ إِلَىٰ
بَعْضٍ وَأَخَذْنَ مِنْكُمْ مِيثَاقًا غَلِيظًا ﴿٢١﴾

22. ನಿಮ್ಮ ಪಿತರು ವಿವಾಹ ಮಾಡಿಕೊಂಡಿದ್ದ ಸ್ತ್ರೀಯರನ್ನು ನೀವು ಎಂದೆಂದಿಗೂ ವಿವಾಹವಾಗಬೇಡಿರಿ. ಆದರೆ ಹಿಂದೆ ಆದುದು ಆಗಿಹೋಯಿತು.[19] ವಾಸ್ತವದಲ್ಲಿ ಇದೊಂದು ಅಶ್ಲೀಲ ಕಾರ್ಯ,

وَلَا تَنْكِحُوا مَا نَكَحَ آبَاؤُكُمْ مِنَ النِّسَاءِ إِلَّا
مَا قَدْ سَلَفَ ۚ إِنَّهُ كَانَ فَاحِشَةً

17. ಅರ್ಥಾತ್- ಪತಿಯ ನಿಧನಾನಂತರ ಅವನ ಕುಟುಂಬಸ್ಥರು ಅವನ ವಿಧವೆಯನ್ನು ಮೃತನ ಸೊತ್ತೆಂದು ಭಾವಿಸಿ ಅವಳ ಉತ್ತರಾಧಿಕಾರಿಯಾಗಿ ಬಿಡಬಾರದು. ಪತಿ ನಿಧನ ಹೊಂದಿದ ನಂತರ ಸ್ತ್ರೀ ಸ್ವತಂತ್ರಳು. 'ಇದ್ದತ್'ನ ಅವಧಿ ಮುಗಿದ ನಂತರ ಆಕೆ ತಾನಿಚ್ಛಿಸಿದಲ್ಲಿಗೆ ಹೋಗಬಹುದು ಮತ್ತು ತಾನಿಚ್ಛಿಸಿದವರನ್ನು ವಿವಾಹವಾಗಬಹುದು.

18. ಇದು ಸಂಪತ್ತನ್ನು ಕಬಳಿಸಲಿಕ್ಕಾಗಿಯಲ್ಲ, ಬದಲಾಗಿ ಆಕೆಯ ದುಷ್ಕೃತ್ಯದ ಶಿಕ್ಷೆಯ ರೂಪದಲ್ಲಾಗಿದೆ.

19. ಅರ್ಥಾತ್- ಅಜ್ಞಾನ ಕಾಲದಲ್ಲಿ ತನ್ನ ಮಲತಾಯಿಯನ್ನು ವಿವಾಹವಾದವನು ಈ ಆದೇಶ ಬಂದ ನಂತರವೂ ಆಕೆಯನ್ನು ತನ್ನ ವಿವಾಹ ಬಂಧನದಲ್ಲಿ ಇರಿಸಬಹುದೆಂದು ಇದರ ಅರ್ಥವಲ್ಲ. ಮೊದಲು ಈ ರೀತಿ ವಿವಾಹ ಮಾಡಿಕೊಂಡಿರುವುದರಿಂದ ಆಗಿರುವ ಸಂತಾನ

ಅಪ್ರಿಯ ಕಾರ್ಯ ಮತ್ತು ದುಷ್ಟ ಸಂಪ್ರದಾಯವಾಗಿದೆ.[20]

وَّمَقْتًا ؕ وَسَآءَ سَبِيْلًا ﴿٢٢﴾ ع

23. ನಿಮಗೆ ಈ ಸ್ತ್ರೀಯರು ವಿವಾಹಕ್ಕೆ ನಿಷಿದ್ಧರು:- ನಿಮ್ಮ ಮಾತೆಯರು,[21] ಪುತ್ರಿಯರು,[22] ಸಹೋದರಿಯರು,[23] ಸೋದರತ್ತೆಯರು, ತಾಯಿಯ ಸೋದರಿಯರು, ಸೋದರ ಪುತ್ರಿಯರು, ಸೋದರಿ ಪುತ್ರಿಯರು,[24] ನಿಮಗೆ ಮೊಲೆ ಹಾಲುಣಿಸಿದ ಸಾಕು ತಾಯಂದಿರು, ನಿಮ್ಮೊಂದಿಗೆ ಸ್ತನಪಾನ ಸಂಬಂಧವಿರುವ ಸೋದರಿಯರು,[25] ನಿಮ್ಮ ಪತ್ನಿಯರ ತಾಯಂದಿರು ನಿಮ್ಮ ಮಡಿಲಲ್ಲಿ ಪೋಷಣೆ ಪಡೆದಿರುವ ನಿಮ್ಮ ಪತ್ನಿಯ ಪುತ್ರಿಯರು,[26] ಯಾವ ಪತ್ನಿಯರೊಂದಿಗೆ ನೀವು ಸಂಭೋಗ ಮಾಡಿರುವಿರೋ ಅವರ ಪುತ್ರಿಯರು, ಆದರೆ (ಬರೇ ನಿಕಾಹ್ ಆಗಿದ್ದು) ನೀವು ಸಂಭೋಗ ಮಾಡಿರದಿದ್ದರೆ (ಅವರನ್ನು ಬಿಟ್ಟು ಅವರ ಪುತ್ರಿಯರನ್ನು ವಿವಾಹ ಮಾಡಿಕೊಳ್ಳುವುದರಲ್ಲಿ) ದೋಷವಿಲ್ಲ. ನಿಮ್ಮ ಸ್ವಂತ ಪುತ್ರರ ಪತ್ನಿಯರೂ ನಿಮಗೆ ನಿಷಿದ್ಧ.[27] ಒಂದು ವಿವಾಹ ಬಂಧನದಲ್ಲಿ ಇಬ್ಬರು ಸಹೋದರಿಯನ್ನಿರಿಸಿ ಕೊಳ್ಳುವುದೂ ನಿಷಿದ್ಧವಾಗಿದೆ.[28] ಆದರೆ

حُرِّمَتْ عَلَيْكُمْ اُمَّهٰتُكُمْ وَبَنٰتُكُمْ وَاَخَوٰتُكُمْ
وَعَمّٰتُكُمْ وَخٰلٰتُكُمْ وَبَنٰتُ الْاَخِ وَبَنٰتُ
الْاُخْتِ وَاُمَّهٰتُكُمُ الّٰتِيْٓ اَرْضَعْنَكُمْ وَاَخَوٰتُكُمْ
مِّنَ الرَّضَاعَةِ وَاُمَّهٰتُ نِسَآئِكُمْ وَرَبَآئِبُكُمُ
الّٰتِيْ فِيْ حُجُوْرِكُمْ مِّنْ نِّسَآئِكُمُ الّٰتِيْ
دَخَلْتُمْ بِهِنَّ ؗ فَاِنْ لَّمْ تَكُوْنُوْا دَخَلْتُمْ
بِهِنَّ فَلَا جُنَاحَ عَلَيْكُمْ ؗ وَحَلَآئِلُ
اَبْنَآئِكُمُ الَّذِيْنَ مِنْ اَصْلَابِكُمْ ۙ وَاَنْ
تَجْمَعُوْا بَيْنَ الْاُخْتَيْنِ اِلَّا مَا قَدْ سَلَفَ ؕ
اِنَّ اللّٰهَ كَانَ غَفُوْرًا رَّحِيْمًا ﴿٢٣﴾

ಈ ಆದೇಶ ಬಂದ ನಂತರ ಜಾರಸಂತಾನವೆನಿಸಿಕೊಳ್ಳುವುದಿಲ್ಲ. ಅಂತೆಯೇ ಅವರು ತಮ್ಮ ಪಿತ್ರಾರ್ಜಿತ ಸೊತ್ತಿನಲ್ಲಿರುವ ಪಾಲಿನಿಂದಲೂ ವಂಚಿತರಾಗುವುದಿಲ್ಲವೆಂದು ಇದರ ಅರ್ಥವಾಗಿದೆ.

20. ಇಸ್ಲಾಮೀ ಕಾನೂನಿನ ಪ್ರಕಾರ ಇದೊಂದು ಕ್ರಿಮಿನಲ್ ಅಪರಾಧವಾಗಿದ್ದು ಪೊಲೀಸರು ಅದರಲ್ಲಿ ಹಸ್ತಕ್ಷೇಪ ನಡೆಸಬಹುದಾಗಿದೆ.

21. ಸ್ವಂತ ತಾಯಿ ಮತ್ತು ಮಲತಾಯಿಗಳಿಬ್ಬರೂ ತಾಯಿಯ ವ್ಯಾಖ್ಯೆಯಲ್ಲಿ ಬರುತ್ತಾರೆ. ಅಂತೆಯೇ ತಂದೆಯ ತಾಯಿ ಮತ್ತು ತಾಯಿಯ ತಾಯಿ ಕೂಡ.

22. ಪುತ್ರಿ ಎಂದರೆ ಅದರಲ್ಲಿ ಮಗನ ಮಗಳು ಮತ್ತು ಮಗಳ ಮಗಳೂ ಸೇರಿದ್ದಾಳೆ.

23. ಸೋದರಿ ಎಂದರೆ ಒಡಹುಟ್ಟಿದ ಸಹೋದರಿ, ಮಾತೃ ಸಂಬಂಧಿ ಸೋದರಿ ಮತ್ತು ಪಿತೃಸಂಬಂಧಿ ಸೋದರಿ ಮೂವರೂ ಈ ಆದೇಶಕ್ಕೆ ಒಳಪಡುತ್ತಾರೆ.

24. ಈ ಎಲ್ಲಾ ಸಂಬಂಧದಲ್ಲಿ ಸ್ವಂತ ಮತ್ತು ಮಲ ಸಂಬಂಧಗಳೆಂಬ ವ್ಯತ್ಯಾಸವಿಲ್ಲ.

25. ಒಂದು ಮಗು ಗಂಡಾಗಿರಲಿ ಹೆಣ್ಣಾಗಿರಲಿ ಓರ್ವ ಮಹಿಳೆಯ ಹಾಲುಂಡರೆ ಆ ಮಹಿಳೆಯು ಮಗುವಿಗೆ ತಾಯಿಯಂತೆ ಮತ್ತು ಆಕೆಯ ಪತಿಯು ತಂದೆಯಂತೆ ಎಂಬ ಬಗ್ಗೆ ವಿದ್ವಾಂಸರಲ್ಲಿ ಒಮ್ಮತಾಭಿಪ್ರಾಯವಿದೆ. ನೈಜ ತಂದೆ-ತಾಯಿಗಳ ಮೂಲಕ ನಿಷಿದ್ಧವಾಗಿರುವ ಎಲ್ಲಾ ಸಂಬಂಧಗಳೂ ಹಾಲುಂಡ ಸಂಬಂಧವಿರುವ ತಂದೆ-ತಾಯಿಗಳಿಗೂ ಅನ್ವಯಿಸುತ್ತದೆ. ಮಗುವಿನ ಪಾಲಿಗೆ ತನ್ನ ಜತೆಗೆ ಹಾಲುಂಡ ಮಗು ಮಾತ್ರವಲ್ಲ ಅದರ ಎಲ್ಲ ಸೋದರ-ಸೋದರಿಯರೂ ವಿವಾಹ ನಿಷಿದ್ಧ ಸಂಬಂಧ ಹೊಂದಿದ್ದಾರೆ. ಅವರೆಲ್ಲರೂ ಅವನ ಒಡ ಹುಟ್ಟಿದ ಸೋದರ-ಸೋದರಿಯರಿಗೆ ಸಮಾನರಾಗಿದ್ದಾರೆ. ಅವರ ಮಕ್ಕಳು ಅವನ ಪಾಲಿಗೆ ಸ್ವಂತ ಸೋದರ ಪುತ್ರ ಪುತ್ರಿಯರು ಮತ್ತು ಸೋದರಿ ಪುತ್ರ-ಪುತ್ರಿಯರಂತಾಗಿದ್ದಾರೆ.

26. ಆಕೆ ಮಲತಂದೆಯ ಮನೆಯಲ್ಲಿ ಬೆಳೆದಿದ್ದರೆ ಮಾತ್ರ ನಿಷಿದ್ಧಳು ಎಂಬ ಶರತ್ತಿಲ್ಲ. ಮಲಪುತ್ರಿ, ಮಲತಂದೆಯ ಮನೆಯಲ್ಲಿ ಬೆಳೆದಿದ್ದರೂ ಇಲ್ಲದಿದ್ದರೂ ಆಕೆ ಅವನ ಪಾಲಿಗೆ ಎಲ್ಲಾ ಸಂದರ್ಭದಲ್ಲೂ ನಿಷಿದ್ಧಳು ಎಂಬ ಬಗ್ಗೆ ಕರ್ಮಶಾಸ್ತ್ರಜ್ಞರಲ್ಲಿ ಒಮ್ಮತಾಭಿಪ್ರಾಯವಿದೆ.

27. ಮಗನ ಪತ್ನಿಯಂತೆಯೇ ಮೊಮ್ಮಗನ ಪತ್ನಿಯೂ ಅಜ್ಜನ ಪಾಲಿಗೆ ನಿಷಿದ್ಧಳಾಗಿದ್ದಾಳೆ.

28. ತಾಯಿಯ ಸೋದರಿ, ಸೋದರಿ ಪುತ್ರಿ, ಸೋದರತ್ತೆ ಮತ್ತು ಸೋದರ ಪುತ್ರಿಯರನ್ನು ಒಂದೇ ಕಾಲದಲ್ಲಿ ವಿವಾಹ ಬಂಧನದಲ್ಲಿರಿಸುವುದೂ ನಿಷಿದ್ಧವಾಗಿದೆ. ಈ ವಿಷಯದಲ್ಲಿ ಗಮನದಲ್ಲಿರಿಸಬೇಕಾದ ನಿಯಮವೇನೆಂದರೆ ಇಬ್ಬರು ಸ್ತ್ರೀಯ ಪೈಕಿ ಒಬ್ಬಳು ಒಂದು ವೇಳೆ

ಹಿಂದೆ ಆದುದು ಆಗಿ ಹೋಯಿತು. ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಿಸುವವನೂ ಕೃಪೆದೋರುವವನೂ ಆಗಿರುತ್ತಾನೆ.[29]

24. *ಇತರರ ವಿವಾಹ ಬಂಧನದಲ್ಲಿರುವ ಸ್ತ್ರೀಯರೂ (ಮುಹ್ಸನಾತ್) ನಿಮಗೆ ನಿಷಿದ್ಧರಾಗಿದ್ದಾರೆ. ಆದರೆ (ಯುದ್ಧದಲ್ಲಿ) ನಿಮ್ಮ ವಶಕ್ಕೆ ಬಂದ ಸ್ತ್ರೀಯರು ಇದಕ್ಕೆ ಹೊರತಾಗಿರುತ್ತಾರೆ.[30] ಇದು ನಿಮ್ಮ ಮೇಲೆ ಅಲ್ಲಾಹನು ನಿರ್ಬಂಧಗೊಳಿಸಿರುವ ಕಾನೂನು. ಇವರ ಹೊರತಾಗಿರುವ ಸ್ತ್ರೀಯರನ್ನು ನೀವು ನಿಮ್ಮ ಸಂಪತ್ತಿನ ಮೂಲಕ ಗಳಿಸುವುದನ್ನು ಧರ್ಮಬದ್ಧಗೊಳಿಸಲಾಗಿದೆ. ಆದರೆ ಅವರನ್ನು ವಿವಾಹ ಬಂಧನದಲ್ಲಿಡಬೇಕು. ಸ್ವಚ್ಛಂದ ಲೈಂಗಿಕತೆ ಸಲ್ಲದು. ಇನ್ನು ನೀವು ಅವರೊಂದಿಗೆ ದಾಂಪತ್ಯ ಜೀವನದ ಸವಿಯನ್ನುಣ್ಣು ವುದರ ಪ್ರತಿಫಲವಾಗಿ ಅವರ ವಿವಾಹಧನವನ್ನು ಕಡ್ಡಾಯವಾಗಿ ಅವರಿಗೆ ಕೊಡಿರಿ. ಆದರೆ, ವಿವಾಹಧನ ನಿಶ್ಚಯಿಸಿಕೊಂಡ ಅನಂತರ ಪರಸ್ಪರ ಒಮ್ಮತದ ಒಪ್ಪಂದವೇನಾದರೂ ಆಗಿದ್ದರೆ, ಅದರಲ್ಲೇನೂ ದೋಷವಿಲ್ಲ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ಆಗಿರುತ್ತಾನೆ.

وَّالْمُحْصَنٰتُ مِنَ النِّسَآءِ اِلَّا مَا مَلَكَتْ
اَيْمَانُكُمْ ۚ كِتٰبَ اللّٰهِ عَلَيْكُمْ ۚ وَاُحِلَّ لَكُمْ
مَّا وَرَآءَ ذٰلِكُمْ اَنْ تَبْتَغُوْا بِاَمْوَالِكُمْ
مُّحْصِنِيْنَ غَيْرَ مُسٰفِحِيْنَ ۗ فَمَا اسْتَمْتَعْتُمْ
بِهٖ مِنْهُنَّ فَاٰتُوْهُنَّ اُجُوْرَهُنَّ فَرِيْضَةً ۗ وَلَا
جُنَاحَ عَلَيْكُمْ فِيْمَا تَرٰضَيْتُمْ بِهٖ مِنْۢ بَعْدِ
الْفَرِيْضَةِ ۗ اِنَّ اللّٰهَ كَانَ عَلِيْمًا حَكِيْمًا ﴿٢٤﴾

25. ನಿಮ್ಮಲ್ಲಾರಾದರೂ ಕುಲೀನ ಮುಸ್ಲಿಮ್ ಸ್ತ್ರೀ(ಮುಹ್ಸನಾತ್) ಯರೊಂದಿಗೆ ವಿವಾಹ ಮಾಡಿಕೊಳ್ಳುವಷ್ಟು ಸ್ಥಿತಿವಂತನಾಗಿರದಿದ್ದರೆ, ನಿಮ್ಮ ಸ್ವಾಧೀನದಲ್ಲಿರುವ ವಿಶ್ವಾಸಿನಿಯರಾದ ದಾಸಿಯರ ಪೈಕಿ ಯಾರೊಂದಿಗಾದರೂ ವಿವಾಹ ಮಾಡಿಕೊಳ್ಳಲಿ. ಅಲ್ಲಾಹನು ನಿಮ್ಮ ವಿಶ್ವಾಸಗಳನ್ನು ಚೆನ್ನಾಗಿ ಬಲ್ಲವನಾಗಿರುತ್ತಾನೆ. ನೀವೆಲ್ಲರೂ ಒಂದೇ ವರ್ಗಕ್ಕೆ ಸೇರಿದವರು. ಆದುದರಿಂದ ನೀವು ಅವರ ಪೋಷಕರ ಅನುಮತಿಯಿಂದ ಅವರೊಂದಿಗೆ ವಿವಾಹ ಮಾಡಿಕೊಳ್ಳಿರಿ ಮತ್ತು ಅವರು ವಿವಾಹ ಬಂಧನದಲ್ಲಿ ಸುರಕ್ಷಿತೆ (ಮುಹ್ಸನಾತ್)ಯರಾಗಿರುವಂತೆಯೂ ಮುಕ್ತ ಲೈಂಗಿಕ ಸಂಬಂಧ

وَمَنْ لَّمْ يَسْتَطِعْ مِنْكُمْ طَوْلًا اَنْ يَّنْكِحَ
الْمُحْصَنٰتِ الْمُؤْمِنٰتِ فَمِنْ مَّا مَلَكَتْ اَيْمَانُكُمْ
مِّنْ فَتَيٰتِكُمُ الْمُؤْمِنٰتِ ۗ وَاللّٰهُ اَعْلَمُ بِاِيْمَانِكُمْ ۗ
بَعْضُكُمْ مِّنْۢ بَعْضٍ ۚ فَانْكِحُوْهُنَّ بِاِذْنِ اَهْلِهِنَّ
وَاٰتُوْهُنَّ اُجُوْرَهُنَّ بِالْمَعْرُوْفِ مُحْصَنٰتٍ
غَيْرَ مُسٰفِحٰتٍ وَّلَا مُتَّخِذٰتِ اَخْدَانٍ ۚ
فَاِذَآ اُحْصِنَّ فَاِنْ اَتَيْنَ بِفَاحِشَةٍ فَعَلَيْهِنَّ

ಪುರುಷನಾಗಿದ್ದರೆ ಅವನ ವಿವಾಹವು ಇನ್ನೊಬ್ಬಳೊಂದಿಗೆ ನಿಷಿದ್ಧವಾಗುವುದಿದ್ದರೆ ಅಂತಹ ಇಬ್ಬರು ಸ್ತ್ರೀಯರನ್ನು ಜತೆಯಲ್ಲಿ ವಿವಾಹ ಬಂಧನದಲ್ಲಿರಿಸಬಾರದು.

29. ಅರ್ಥಾತ್- ಆ ಕಾರಣಕ್ಕಾಗಿ ಅವನು ವಿಚಾರಣೆಗೆ ಒಳಪಡಲಾರನು. ಆದರೆ ಇಸ್ಲಾಮ್ ಸ್ವೀಕರಿಸಿದ ಬಳಿಕ ಅಜ್ಞಾನ ಕಾಲದಲ್ಲಿ ಅವನು ವಿವಾಹವಾಗಿದ್ದ ಇಬ್ಬರು ಸೋದರಿಯರ ಪೈಕಿ ಒಬ್ಬಳನ್ನು ಇಟ್ಟುಕೊಂಡು ಇನ್ನೊಬ್ಬಳನ್ನು ಬಿಟ್ಟು ಬಿಡಬೇಕಾಗುವುದು.

***ಇಲ್ಲಿಂದ 5ನೆಯ ಕಾಂಡ ಆರಂಭ.**

30. ಅರ್ಥಾತ್- ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ, ಸತ್ಯನಿಷೇಧಿ ಗಂಡಂದಿರು ಶತ್ರು ರಾಷ್ಟ್ರದಲ್ಲಿರುವ ಸ್ತ್ರೀಯರು ನಿಷಿದ್ಧರಲ್ಲ. ಏಕೆಂದರೆ 'ದಾರುಲ್ ಹರಬ್'(ಇಸ್ಲಾಮಿನೊಂದಿಗೆ ಯುದ್ಧ ನಿರತ ರಾಷ್ಟ್ರ)ನಿಂದ 'ದಾರುಲ್ ಇಸ್ಲಾಮ್'(ಇಸ್ಲಾಮೀ ರಾಷ್ಟ್ರ)ಗೆ ಬಂದ ನಂತರ ಅವರ ವೈವಾಹಿಕ ಸಂಬಂಧ ಮುರಿಯುತ್ತದೆ.

ಹೊಂದಿರದಂತೆಯೂ ರಹಸ್ಯ ಕಾಮುಕರನ್ನು ಅರಸದಂತೆಯೂ ಉತ್ತಮ ರೀತಿಯಲ್ಲಿ ಅವರ ವಿವಾಹ ಧನವನ್ನು ಅವರಿಗೆ ಸಲ್ಲಿಸಿರಿ. ಅವರು ವಿವಾಹ ಬಂಧನದಲ್ಲಿ ಸುರಕ್ಷಿತರಾದ ಬಳಿಕ ವ್ಯಭಿಚಾರಕ್ಕಿಳಿದರೆ, ಅವರಿಗೆ ಕುಲೀನ ಸ್ತ್ರೀ(ಮುಹ್ಸನಾತ್)ಯರಿಗೆ ನಿಶ್ಚಯಿಸಲ್ಪಟ್ಟಿರುವ ಶಿಕ್ಷೆಯ ಅರ್ಧಾಂಶ ಶಿಕ್ಷೆಯ ವಿಧಿ ಇದೆ.[31] ನಿಮ್ಮ ಪೈಕಿ, ವಿವಾಹವಾಗದಿರುವ ಕಾರಣ ಸಂಯಮ ಮುರಿದು ಹೋಗಬಹುದೆಂಬ ಆತಂಕವಿರುವವರಿಗಾಗಿ ಈ ಸೌಲಭ್ಯವನ್ನು ಒದಗಿಸಲಾಗಿದೆ. ಆದರೆ ನೀವು ತಾಳ್ಮೆ ವಹಿಸಿದರೆ ಇದು ನಿಮಗೆ ಇನ್ನಷ್ಟು ಉತ್ತಮ. ಅಲ್ಲಾಹನು ಕ್ಷಮಿಸುವಾತನೂ ಕರುಣಾ ನಿಧಿಯೂ ಆಗಿರುತ್ತಾನೆ.

نِصۡفُ مَا عَلَى الۡمُحۡصَنٰتِ مِنَ الۡعَذَابِ ‌ؕ ذٰلِكَ لِمَنۡ خَشِىَ الۡعَنَتَ مِنۡكُمۡ‌ ؕ وَاَنۡ تَصۡبِرُوۡا خَيۡرٌ لَّـكُمۡ‌ ؕ وَاللّٰهُ غَفُوۡرٌ رَّحِيۡمٌ ﴿۲۵﴾ ع

26. ಅಲ್ಲಾಹನು ನಿಮಗಿಂತ ಮುಂಚೆ ಗತಿಸಿಹೋದ ಸಜ್ಜನರು ಅನುಸರಿಸುತ್ತಿದ್ದ ವಿಧಾನಗಳನ್ನು ನಿಮಗೆ ತೋರಿಸಿಕೊಡಲಿಕ್ಕೂ ಅವುಗಳಂತೆ ನಿಮ್ಮನ್ನು ನಡೆಸಲಿಕ್ಕೂ ಇಚ್ಛಿಸುತ್ತಾನೆ. ಅವನು ತನ್ನ ಕೃಪೆಯೊಂದಿಗೆ ನಿಮ್ಮ ಕಡೆಗೆ ಲಕ್ಷ್ಯವಿಡಲು ಉದ್ದೇಶಿಸುತ್ತಾನೆ. ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ಆಗಿರುತ್ತಾನೆ.

يُرِيۡدُ اللّٰهُ لِيُبَيِّنَ لَـكُمۡ وَيَهۡدِيَكُمۡ سُنَنَ الَّذِيۡنَ مِنۡ قَبۡلِكُمۡ وَيَتُوۡبَ عَلَيۡكُمۡ‌ ؕ وَاللّٰهُ عَلِيۡمٌ حَكِيۡمٌ ﴿۲۶﴾

27. ಅಲ್ಲಾಹನಂತೂ ತನ್ನ ಕೃಪೆಯೊಂದಿಗೆ ನಿಮ್ಮ ಕಡೆ ಲಕ್ಷ್ಯವಿಡಲು ಬಯಸುತ್ತಾನೆ. ಆದರೆ, ತನ್ನ ದೇಹೇಚ್ಛೆಗಳನ್ನನುಸರಿಸುವವರು, ನೀವು ಸನ್ಮಾರ್ಗವನ್ನು ಬಿಟ್ಟು ಬಹುದೂರ ತೊಲಗಬೇಕೆಂದು ಇಚ್ಛಿಸುತ್ತಾರೆ.

وَاللّٰهُ يُرِيۡدُ اَنۡ يَّتُوۡبَ عَلَيۡكُمۡ وَيُرِيۡدُ الَّذِيۡنَ يَتَّبِعُوۡنَ الشَّهَوٰتِ اَنۡ تَمِيۡلُوۡا مَيۡلًا عَظِيۡمًا ﴿۲۷﴾

28. ಅಲ್ಲಾಹನು ನಿಮ್ಮ ಮೇಲಿನ ಬಾಧ್ಯತೆಗಳನ್ನು ಹಗುರಗೊಳಿಸ ಬೇಕೆಂದಿಚ್ಛಿಸುತ್ತಾನೆ. ಏಕೆಂದರೆ ಮನುಷ್ಯನು ದುರ್ಬಲನಾಗಿ ಸೃಷ್ಟಿಸಲ್ಪಟ್ಟಿದ್ದಾನೆ.

يُرِيۡدُ اللّٰهُ اَنۡ يُّخَفِّفَ عَنۡكُمۡ‌ ۚ وَخُلِقَ الۡاِنۡسَانُ ضَعِيۡفًا ﴿۲۸﴾

29. ಓ ಸತ್ಯವಿಶ್ವಾಸಿಗಳೇ, ನೀವು ಪರಸ್ಪರರ ಸಂಪತ್ತನ್ನು ಅನುಚಿತ ರೀತಿಯಿಂದ ಕಬಳಿಸಬೇಡಿರಿ. ಲೇವಾದೇವಿಗಳು ಪರಸ್ಪರ

يٰۤـاَيُّهَا الَّذِيۡنَ اٰمَنُوۡا لَا تَاۡكُلُوۡۤا اَمۡوَالَـكُمۡ بَيۡنَكُمۡ بِالۡبَاطِلِ اِلَّاۤ اَنۡ تَكُوۡنَ تِجَارَةً

31. ಈ ರುಕೂಅ್‌ನಲ್ಲಿ ಮುಹ್ಸನಾತ್ ಎಂಬ ಪದವು ಎರಡು ವಿಭಿನ್ನ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಪತಿಯ ರಕ್ಷಣೆ ಪ್ರಾಪ್ತವಿರುವ ವಿವಾಹಿತ ಸ್ತ್ರೀಯರು ಮತ್ತು ವಿವಾಹವಾಗಿರದಿದ್ದರೂ ಕುಟುಂಬದ ರಕ್ಷಣೆ ಪ್ರಾಪ್ತವಿರುವ ಕುಲೀನ ಸ್ತ್ರೀಯರು ಎಂಬುದೇ ಈ ಎರಡು ವಿಭಿನ್ನ ಅರ್ಥಗಳು. 24ನೆಯ ಸೂಕ್ತದಲ್ಲಿ 'ಮುಹ್ಸನಾತ್' ಎಂಬ ಪದ ದಾಸಿಯರಿಗೆ ಪ್ರತಿಯಾಗಿ ಅವಿವಾಹಿತ ಕುಲೀನ ಸ್ತ್ರೀಯರ ಕುರಿತು ಉಪಯೋಗವಾಗಿದೆ. ಸೂಕ್ತದಲ್ಲಿ ಬರುವ ವಿಷಯದಿಂದಲೇ ಇದು ವ್ಯಕ್ತವಾಗುತ್ತದೆ. ತದ್ವಿರುದ್ಧವಾಗಿ ದಾಸಿಯರಿಗೆ ಮುಹ್ಸನಾತ್ ಎಂಬ ಪದ ಮೊದಲನೇ ಅರ್ಥದಲ್ಲಿ (ಅರ್ಥಾತ್ ಪತಿಯ ರಕ್ಷಣೆ ಪಡೆದಿರುವ ವಿವಾಹಿತ ಸ್ತ್ರೀಯರು ಎಂಬ ಅರ್ಥದಲ್ಲಿ) ಪ್ರಯೋಗವಾಗಿದೆ. ಅವರಿಗೆ ವಿವಾಹ ರಕ್ಷಣೆ ದೊರೆತರೆ (ಫ ಇದಾಉಹ್ಸಿನ್ನ) ಅನಂತರ ಅವರು ಎಸಗುವ ವ್ಯಭಿಚಾರಕ್ಕೆ ಮುಹ್ಸನಾತ್ (ಅವಿವಾಹಿತ ಕುಲೀನ ಸ್ತ್ರೀಯರ)ಗಳ ಅರ್ಧಪಾಲು ಶಿಕ್ಷೆ ಕೊಡಲಾಗುವುದೆಂದು ಸ್ಪಷ್ಟವಾಗಿ ಹೇಳಲಾಗಿದೆ.

ಒಪ್ಪಿಗೆಯಿಂದಾಗಬೇಕು.[32] ನಿಮ್ಮನ್ನು ನೀವೇ ವಧಿಸಿಕೊಳ್ಳಬೇಡಿರಿ.[33] ಅಲ್ಲಾಹನು ನಿಮ್ಮ ಮೇಲೆ ಕೃಪೆಯುಳ್ಳವನೆಂಬುದನ್ನು ಖಾತ್ರಿಯಾಗಿ ನಂಬಿರಿ.

عَنْ تَرَاضٍ مِّنْكُمْ ۣ وَلَا تَقْتُلُوْٓا اَنْفُسَكُمْ ۭ
اِنَّ اللّٰهَ كَانَ بِكُمْ رَحِيْمًا ﴿٢٩﴾

30. ಯಾರಾದರೂ ಅಕ್ರಮ ಅತಿರೇಕಗಳೊಂದಿಗೆ ಹಾಗೆ ಮಾಡಿದರೆ ಅವನನ್ನು ನಾವು ಖಂಡಿತವಾಗಿಯೂ ನರಕಾಗ್ನಿಯಲ್ಲಿ ತಳ್ಳಿ ಬಿಡುವೆವು. ಇದು ಅಲ್ಲಾಹನಿಗೆ ಕಷ್ಟ ಸಾಧ್ಯವಾದುದಲ್ಲ.

وَمَنْ يَّفْعَلْ ذٰلِكَ عُدْوَانًا وَّظُلْمًا فَسَوْفَ
نُصْلِيْهِ نَارًا ۭ وَكَانَ ذٰلِكَ عَلَى اللّٰهِ يَسِيْرًا ﴿٣٠﴾

31. ನಿಮಗೆ ಪ್ರತಿಬಂಧಗೊಳಿಸಲಾಗುತ್ತಿರುವ ಆ ಘೋರ ಪಾಪಗಳನ್ನು ನೀವು ವರ್ಜಿಸುತ್ತಲಿದ್ದರೆ, ನಿಮ್ಮ ಚಿಕ್ಕ ಪುಟ್ಟ ಅಪರಾಧಗಳನ್ನು ನಾವು ನಿಮ್ಮ ಲೆಕ್ಕ ಪತ್ರದಿಂದ ನೀಗಿಸಿಬಿಡುವೆವು ಮತ್ತು ನಿಮ್ಮನ್ನು ಗೌರವಪೂರ್ಣ ಸ್ಥಾನದೊಳಗೆ ಸೇರಿಸುವೆವು.

اِنْ تَجْتَنِبُوْا كَبَاۗىِٕرَ مَا تُنْهَوْنَ عَنْهُ نُكَفِّرْ
عَنْكُمْ سَيِّاٰتِكُمْ وَنُدْخِلْكُمْ مُّدْخَلًا كَرِيْمًا ﴿٣١﴾

32. ಅಲ್ಲಾಹನು ನಿಮ್ಮಲ್ಲಿ ಕೆಲವರಿಗೆ ಇನ್ನು ಕೆಲವರಿಗಿಂತ ಅಧಿಕವಾಗಿ ನೀಡಿದ್ದರೆ ಅದಕ್ಕಾಗಿ ಆಶೆ ಪಡಬೇಡಿರಿ. ಪುರುಷರು ಗಳಿಸಿದುದಕ್ಕನು ಸಾರವಾದ ಪಾಲು ಅವರಿಗಿದೆ, ಸ್ತ್ರೀಯರು ಗಳಿಸಿದುದಕ್ಕನುಸಾರ ವಾದ ಪಾಲು ಅವರಿಗಿದೆ. ಅಲ್ಲಾಹನೊಡನೆ ಅವನ ಅನುಗ್ರಹವನ್ನು ಯಾಚಿಸುತ್ತಲಿರಿ. ನಿಶ್ಚಯವಾಗಿಯೂ ಅಲ್ಲಾಹನು ಎಲ್ಲಾ ಸಂಗತಿಗಳ ಅರಿವುಳ್ಳವನಾಗಿರುತ್ತಾನೆ.

وَلَا تَتَمَنَّوْا مَا فَضَّلَ اللّٰهُ بِهٖ بَعْضَكُمْ عَلٰي
بَعْضٍ ۭ لِلرِّجَالِ نَصِيْبٌ مِّمَّا اكْتَسَبُوْا ۭ
وَلِلنِّسَاۗءِ نَصِيْبٌ مِّمَّا اكْتَسَبْنَ ۭ وَسْــَٔـلُوا
اللّٰهَ مِنْ فَضْلِهٖ ۭ اِنَّ اللّٰهَ كَانَ بِكُلِّ
شَيْءٍ عَلِيْمًا ﴿٣٢﴾

33. ಮಾತಾಪಿತರೂ ಸಮೀಪದ ಬಂಧುಗಳೂ ಬಿಟ್ಟಗಲಿದ ಪ್ರತಿಯೊಂದು ವಸ್ತುವಿಗೂ ವಾರೀಸು ಹಕ್ಕುದಾರರನ್ನು ನಾವು ನಿಶ್ಚಯಿಸಿರುತ್ತೇವೆ. ಇನ್ನು ನೀವು ವಚನ ಕೊಟ್ಟವರಿದ್ದರೆ ಅವರ ಪಾಲನ್ನು ಅವರಿಗೆ ಕೊಡಿರಿ. ನಿಶ್ಚಯವಾಗಿಯೂ ಅಲ್ಲಾಹನು ಸಕಲ ವಸ್ತುಗಳ ಬಗ್ಗೆ ಸಾಕ್ಷಿಯಾಗಿರುತ್ತಾನೆ.[34]

وَلِكُلٍّ جَعَلْنَا مَوَالِيَ مِمَّا تَرَكَ الْوَالِدٰنِ
وَالْاَقْرَبُوْنَ ۭ وَالَّذِيْنَ عَقَدَتْ اَيْمَانُكُمْ
فَاٰتُوْهُمْ نَصِيْبَهُمْ ۭ اِنَّ اللّٰهَ كَانَ عَلٰي
كُلِّ شَيْءٍ شَهِيْدًا ﴿٣٣﴾ ع

32. 'ಅನುಚಿತ ರೀತಿಯಿಂದ' ಎಂದರೆ ಸತ್ಯಕ್ಕೆ ವಿರುದ್ಧವಾದ ಧಾರ್ಮಿಕ ಮತ್ತು ನೈತಿಕ ವಿಧಿಗಳಲ್ಲಿ ಸಲ್ಲದ ಎಲ್ಲಾ ಬಗೆಯ ವ್ಯವಹಾರಗಳಾಗಿವೆ. 'ಪರಸ್ಪರ ಒಪ್ಪಿಗೆಯಿಂದ' ಅಂದರೆ ಸ್ವತಂತ್ರ ಮತ್ತು ಸುವ್ಯಕ್ತ ಒಪ್ಪಿಗೆಯಾಗಿದೆ. ಯಾವುದೇ ಒತ್ತಡ, ಮೋಸಗಳಿಂದ ಕೂಡಿದ ಒಪ್ಪಿಗೆಯಲ್ಲ. ಅಂತಹುದನ್ನು ಒಪ್ಪಿಗೆ ಎಂದು ಕರೆಯುವಂತಿಲ್ಲ.

33. ಈ ಉದ್ಧರಣೆ ಹಿಂದಿನ ಉದ್ಧರಣೆಯ ಅನುಬಂಧವಾಗಿರಬಹುದು ಅಥವಾ ಸ್ವತಂತ್ರ ಉದ್ಧರಣೆಯಾಗಿರಲೂಬಹುದು. ಇದು ಹಿಂದಿನ ಉದ್ಧರಣೆಯ ಅನುಬಂಧವಾಗಿದ್ದಲ್ಲಿ ಇದರ ಅರ್ಥ ಅನ್ಯರ ಸೊತ್ತನ್ನು ಅಕ್ರಮವಾಗಿ ಕಬಳಿಸುವುದು ತನ್ನನ್ನೇ ನಾಶ ಮಾಡಿಕೊಂಡಂತೆ ಎಂದಾಗಿದೆ. ಇದು ಸ್ವತಂತ್ರ ಉದ್ಧರಣೆಯಾಗಿದ್ದಲ್ಲಿ ಇದಕ್ಕೆ ಎರಡು ಅರ್ಥಗಳಿವೆ. ಪರಸ್ಪರರನ್ನು ಕೊಲೆ ಮಾಡಬೇಡಿರಿ ಎಂಬುದು ಒಂದು ಅರ್ಥ. ಆತ್ಮಹತ್ಯೆ ಮಾಡಿಕೊಳ್ಳದಿರಿ ಎಂಬುದು ಇನ್ನೊಂದು ಅರ್ಥ.

34. ಸ್ನೇಹ ಮತ್ತು ಸೋದರತೆಯ ಒಪ್ಪಂದ ಮಾಡಿಕೊಂಡವರು ಪರಸ್ಪರರ ಸೊತ್ತುಗಳಿಗೆ ಹಕ್ಕುದಾರರಾಗುತ್ತಿದ್ದ ರೂಢಿ ಅರಬರಲ್ಲಿತ್ತು. ಹೀಗೆ ಸಾಕುಮಗ ಸಾಕುತಂದೆಯ ಉತ್ತರಾಧಿಕಾರಿಯಾಗುತ್ತಿದ್ದ. ಈ ಸೂಕ್ತದ ಮೂಲಕ ಅಜ್ಞಾನ ಕಾಲದ ಈ ನಿಯಮವನ್ನು ರದ್ದು ಪಡಿಸುತ್ತಾ ಆಸ್ತಿಯನ್ನು ಸಂಬಂಧಿಕರ ನಡುವೆ ನಾವು ವಿಧಿಸಿರುವುದಕ್ಕನುಗುಣವಾಗಿಯೇ ವಿತರಿಸಬೇಕು ಎಂದು ಹೇಳಲಾಗಿದೆ. ಆದರೆ ಯಾರೊಂದಿಗೆ ನೀವು ಒಪ್ಪಂದ ಮಾಡಿಕೊಂಡಿದ್ದೀರೋ ಅವರಿಗೆ ನಿಮ್ಮ ಜೀವಿತ ಕಾಲದಲ್ಲಿ ನೀವು ಏನನ್ನು ಬೇಕಾದರೂ ನೀಡಬಹುದು.

34. ಪುರುಷರು ಸ್ತ್ರೀಯರ ಮೇಲೆ 'ಮೇಲ್ವಿಚಾರಕ'[35] ಆಗಿರುತ್ತಾರೆ. ಇದು ಅಲ್ಲಾಹನು ಕೆಲವರಿಗೆ ಕೆಲವರ ಮೇಲೆ ಶ್ರೇಷ್ಠತೆ ಪ್ರದಾನ ಮಾಡಿದುದರಿಂದ ಮತ್ತು ಪುರುಷರು ತಮ್ಮ ಸಂಪತ್ತನ್ನು ಖರ್ಚು ಮಾಡುವುದರಿಂದ. ಸುಶೀಲೆಯರಾದ ಸ್ತ್ರೀಯರು ಅನುಸರಣಶೀಲರಾಗಿರುತ್ತಾರೆ ಮತ್ತು ಅವರು ಪುರುಷರ ಅನುಪಸ್ಥಿತಿಯಲ್ಲಿ ಅಲ್ಲಾಹನ ರಕ್ಷಣೆಯಲ್ಲಿ ಅವರ ಹಕ್ಕು ಬಾಧ್ಯತೆಗಳ ರಕ್ಷಣೆ ಮಾಡುತ್ತಾರೆ. ನಿಮ್ಮ ಸ್ತ್ರೀಯರಿಂದ ಆಜ್ಞೋಲ್ಲಂಘನೆಯ ಆಶಂಕೆ ನಿಮಗಿದ್ದರೆ ಅವರಿಗೆ ನೀವು ಉಪದೇಶ ನೀಡಿರಿ. ಮಲಗುವಲ್ಲಿಂದ ಅವರಿಂದ ದೂರವಿರಿ ಮತ್ತು ಅವರಿಗೆ ಹೊಡೆಯಿರಿ.[36] ಅನಂತರ ಅವರು ನಿಮಗೆ ವಿಧೇಯರಾಗಿ ನಡೆದರೆ, ಅವರ ಮೇಲೆ ಕೈಯೆತ್ತಲು ಬೇಕು ಬೇಕೆಂದೇ ನೆಪ ಹುಡುಕಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹನು ಅತ್ಯುನ್ನತನೂ ಮಹಾನನೂ ಆಗಿರುತ್ತಾನೆ.

اَلرِّجَالُ قَوّٰمُوْنَ عَلَى النِّسَآءِ بِمَا فَضَّلَ
اللّٰهُ بَعْضَهُمْ عَلٰى بَعْضٍ وَّ بِمَآ اَنْفَقُوْا مِنْ
اَمْوَالِهِمْ ؕ فَالصّٰلِحٰتُ قٰنِتٰتٌ حٰفِظٰتٌ لِّلْغَيْبِ
بِمَا حَفِظَ اللّٰهُ ؕ وَالّٰتِىْ تَخَافُوْنَ نُشُوْزَهُنَّ
فَعِظُوْهُنَّ وَاهْجُرُوْهُنَّ فِى الْمَضَاجِعِ
وَاضْرِبُوْهُنَّ ۚ فَاِنْ اَطَعْنَكُمْ فَلَا تَبْغُوْا
عَلَيْهِنَّ سَبِيْلًا ؕ اِنَّ اللّٰهَ كَانَ
عَلِيًّا كَبِيْرًا ﴿٣٤﴾

35. ಪತಿ- ಪತ್ನಿಯರ ಸಂಬಂಧ ಕೆಡುವುದೆಂಬುದು ನಿಮಗೆ ಆತಂಕ ವಾದಾಗ ಒಬ್ಬ ಮಧ್ಯಸ್ತನನ್ನು ಪುರುಷನ ಕಡೆಯವರಿಂದಲೂ ಒಬ್ಬನನ್ನು ಸ್ತ್ರೀಯ ಕಡೆಯವರಿಂದಲೂ ನಿಯುಕ್ತಗೊಳಿಸಿರಿ. ಅವರಿಬ್ಬರೂ[37] ಸುಧಾರಿಸಲು ಬಯಸಿದರೆ, ಅಲ್ಲಾಹನು ಅವರ ನಡುವೆ ಸಾಮರಸ್ಯದ ಹಾದಿಯನ್ನು ತೆರೆಯುವನು. ನಿಶ್ಚಯ ವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.

وَاِنْ خِفْتُمْ شِقَاقَ بَيْنِهِمَا فَابْعَثُوْا
حَكَمًا مِّنْ اَهْلِهٖ وَحَكَمًا مِّنْ اَهْلِهَا ۚ
اِنْ يُّرِيْدَآ اِصْلَاحًا يُّوَفِّقِ اللّٰهُ بَيْنَهُمَا ؕ
اِنَّ اللّٰهَ كَانَ عَلِيْمًا خَبِيْرًا ﴿٣٥﴾

36. ನೀವೆಲ್ಲರೂ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತ ರೊಂದಿಗೆ ಸೌಜನ್ಯದಿಂದ ವರ್ತಿಸಿರಿ. ಸಂಬಂಧಿಕರೊಂದಿಗೂ ಅನಾಥರೊಂದಿಗೂ ನಿರ್ಗತಿಕರೊಂದಿಗೂ ಆಪ್ತರಾದ ನೆರೆ

وَاعْبُدُوا اللّٰهَ وَلَا تُشْرِكُوْا بِهٖ شَيْـًٔا
وَّبِالْوَالِدَيْنِ اِحْسَانًا وَّبِذِى الْقُرْبٰى
وَالْيَتٰمٰى وَالْمَسٰكِيْنِ وَالْجَارِ ذِى الْقُرْبٰى

35. ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ವ್ಯವಸ್ಥೆಯ ವ್ಯವಹಾರಗಳನ್ನು ಸರಿಯಾಗಿ ನಡೆಸುವ, ಅದನ್ನು ಸಂರಕ್ಷಿಸುವ ಮತ್ತು ಅದರ ಮೇಲ್ವಿಚಾರಣೆ ನಡೆಸುವ ಹಾಗೂ ಅವರ ಅವಶ್ಯಕತೆಗಳನ್ನು ಪೂರೈಸುವ ವ್ಯಕ್ತಿಗೆ 'ಕವ್ವಾಮ್'(ಮೇಲ್ವಿಚಾರಕ) ಎನ್ನಲಾಗುತ್ತದೆ.

36. ಮೂರೂ ಕೆಲಸಗಳನ್ನು ಏಕಕಾಲಕ್ಕೆ ಮಾಡಬೇಕೆಂದು ಇದರ ಅರ್ಥವಲ್ಲ. ಬದಲಾಗಿ ವೈಮನಸ್ಸು ಉಂಟಾದಾಗ ಈ ಮೂರೂ ಉಪಾಯಗಳನ್ನು ಪಾಲಿಸಬಹುದು. ಇನ್ನು ಅದನ್ನು ಪ್ರಯೋಗಿಸುವಾಗ ತಪ್ಪು ಮತ್ತು ಶಿಕ್ಷೆಯ ನಡುವೆ ಸಮತೋಲನ ಇರಬೇಕು. ಸರಳೋಪಾಯದಿಂದ ಸುಧಾರಣೆ ಸಾಧ್ಯವೆಂದಾದರೆ ಅಲ್ಲಿ ಕಠಿಣೋಪಾಯವನ್ನು ವರ್ಜಿಸಬೇಕು. ಪ್ರವಾದಿವರ್ಯರು(ಸ) ಒಲ್ಲದ ಮನಸ್ಸಿನಿಂದಲೇ ಪತ್ನಿಯರನ್ನು ಥಳಿಸುವ ಅನುಮತಿ ನೀಡಿದ್ದಾರೆ. ಆದರೂ ಥಳಿಸುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

37. 'ಅವರಿಬ್ಬರು' ಎಂದರೆ ಮಧ್ಯಸ್ತಿಕೆದಾರರೂ ಆಗಿದ್ದಾರೆ. ಅಂತೆಯೇ 'ದಂಪತಿಗಳೂ' ಕಕ್ಷಿಗಳಿಬ್ಬರೂ ಸುಧಾರಣೆಯನ್ನು ಬಯಸುವವರಾಗಿದ್ದರೆ ಮತ್ತು ಮಧ್ಯಸ್ತಿಕೆದಾರರೂ ಹೇಗಾದರೂ ಉಭಯತ್ರರ ನಡುವೆ ಸಂಧಾನವಾಗಬೇಕು ಎಂದು ಬಯಸುವವರಾಗಿದ್ದರೆ ಯಾವುದೇ ರೀತಿಯ ಜಗಳ, ಸಂಧಾನದಲ್ಲಿ ಪರ್ಯವಸಾನವಾಗುವ ಸಾಧ್ಯತೆ ಇದ್ದೇ ಇರುತ್ತದೆ.

ಹೊರೆಯವರೊಂದಿಗೂ ಅಪರಿಚಿತ ನೆರೆಹೊರೆಯವರೊಂದಿಗೂ ಅನುಚರರೊಂದಿಗೂ[38] ಪ್ರಯಾಣಿಕರೊಂದಿಗೂ ನಿಮ್ಮ ಅಧೀನದಲ್ಲಿರುವ ದಾಸ ದಾಸಿಯರೊಂದಿಗೂ ಉತ್ತಮ ರೀತಿಯಿಂದ ವರ್ತಿಸಿರಿ. ದುರಹಂಕಾರ ಹೊಂದಿರುವ ಗರ್ವಿಷ್ಠನನ್ನೂ ಆತ್ಮಸ್ತುತಿಗೈಯ್ಯುವವನನ್ನೂ ಅಲ್ಲಾಹನು ಮೆಚ್ಚುವುದಿಲ್ಲ.

وَالْجَارِ الْجُنُبِ وَالصَّاحِبِ بِالْجَنْۢبِ
وَابْنِ السَّبِيْلِ ۙ وَمَا مَلَكَتْ اَيْمَانُكُمْ ؕ اِنَّ
اللّٰهَ لَا يُحِبُّ مَنْ كَانَ مُخْتَالًا فَخُوْرَا ۙ ﴿٣٦﴾

37. ಸ್ವತಃ ಜಿಪುಣತೆ ತೋರುವವರನ್ನೂ ಇತರರನ್ನು ಜಿಪುಣತೆಗೆ ಪ್ರೇರೇಪಿಸುವವರನ್ನೂ ಅಲ್ಲಾಹನು ತನ್ನ ಅನುಗ್ರಹದಿಂದ ತಮಗೆ ದಯಪಾಲಿಸಿದುದನ್ನು ಬಚ್ಚಿಡುವವರನ್ನೂ ಅಲ್ಲಾಹನು ಮೆಚ್ಚುವುದಿಲ್ಲ. ಅಂತಹ ಕೃತಘ್ನರಿಗಾಗಿ ನಾವು ಅಪಮಾನಕರ ಶಿಕ್ಷೆಯನ್ನು ಸಿದ್ಧಗೊಳಿಸಿಟ್ಟಿರುತ್ತೇವೆ.

الَّذِيْنَ يَبْخَلُوْنَ وَيَاْمُرُوْنَ النَّاسَ
بِالْبُخْلِ وَيَكْتُمُوْنَ مَاۤ اٰتٰهُمُ اللّٰهُ مِنْ
فَضْلِهٖ ؕ وَاَعْتَدْنَا لِلْكٰفِرِيْنَ عَذَابًا مُّهِيْنًا ۚ ﴿٣٧﴾

38. ಜನರಿಗೆ ತೋರಿಸುವ ಸಲುವಾಗಿ ಮಾತ್ರ ತಮ್ಮ ಸಂಪತ್ತನ್ನು ಖರ್ಚು ಮಾಡುವವರೂ ಅಲ್ಲಾಹನಿಗೆ ಮೆಚ್ಚುಗೆಯವರಲ್ಲ. ವಾಸ್ತವದಲ್ಲಿ ಅವರು ಅಲ್ಲಾಹನ ಮೇಲಾಗಲಿ ಅಂತಿಮ ದಿವಸದ ಮೇಲಾಗಲಿ ವಿಶ್ವಾಸವಿರಿಸುವುದಿಲ್ಲ. ಶೈತಾನನು ಯಾರ ಗೆಳೆಯನಾಗಿ ಬಿಟ್ಟನೋ ಅವನಿಗೆ ಅತಿ ನಿಕೃಷ್ಟ ಗೆಳೆತನ ಪ್ರಾಪ್ತವಾದಂತೆಯೇ ಸರಿ.

وَالَّذِيْنَ يُنْفِقُوْنَ اَمْوَالَهُمْ رِئَآءَ النَّاسِ
وَلَا يُؤْمِنُوْنَ بِاللّٰهِ وَلَا بِالْيَوْمِ الْاٰخِرِ ؕ
وَمَنْ يَّكُنِ الشَّيْطٰنُ لَهٗ قَرِيْنًا فَسَآءَ قَرِيْنًا ﴿٣٨﴾

39. ಇವರು ಅಲ್ಲಾಹ್ ಮತ್ತು ಅಂತಿಮ ದಿವಸದ ಮೇಲೆ ವಿಶ್ವಾಸವಿಡುತ್ತಿದ್ದರೆ ಹಾಗೂ ಅಲ್ಲಾಹನು ಇವರಿಗೆ ನೀಡಿದುದರಿಂದ ಖರ್ಚು ಮಾಡುತ್ತಿದ್ದರೆ ಇವರಿಗೇನಾಗುತ್ತಿತ್ತು? ಇವರು ಹೀಗೆ ಮಾಡುತ್ತಿದ್ದರೆ ಇವರ ಪುಣ್ಯ ಕಾರ್ಯವು ಅಲ್ಲಾಹನಿಗೆ ತಿಳಿಯದಿರುತ್ತಿರಲಿಲ್ಲ.

وَمَاذَا عَلَيْهِمْ لَوْ اٰمَنُوْا بِاللّٰهِ وَالْيَوْمِ
الْاٰخِرِ وَاَنْفَقُوْا مِمَّا رَزَقَهُمُ اللّٰهُ ؕ وَكَانَ
اللّٰهُ بِهِمْ عَلِيْمًا ﴿٣٩﴾

40. ವಾಸ್ತವದಲ್ಲಿ ಅಲ್ಲಾಹನು ಯಾರ ಮೇಲೂ ಕಿಂಚಿತ್ತೂ ಅಕ್ರಮವೆಸಗುವುದಿಲ್ಲ. ಯಾರಾದರೂ ಒಂದು ಪುಣ್ಯ ಕಾರ್ಯ ಮಾಡಿದರೆ ಅದನ್ನು ಅಲ್ಲಾಹನು, ಹಲವು ಪಟ್ಟು ವರ್ಧಿಸುತ್ತಾನೆ ಮತ್ತು ತನ್ನ ಕಡೆಯಿಂದಲೂ ಹೇರಳ ಪ್ರತಿಫಲ ಪ್ರದಾನ ಮಾಡುತ್ತಾನೆ.

اِنَّ اللّٰهَ لَا يَظْلِمُ مِثْقَالَ ذَرَّةٍ ۚ وَاِنْ
تَكُ حَسَنَةً يُّضٰعِفْهَا وَيُؤْتِ مِنْ لَّدُنْهُ
اَجْرًا عَظِيْمًا ﴿٤٠﴾

38. ಇದರ ಅರ್ಥ ಒಡನಾಟದಲ್ಲಿ ಸ್ನೇಹಿತ ಅಥವಾ ಎಲ್ಲಾದರೂ ಹೇಗಾದರೂ ಜತೆ ಸೇರುವವನು ಎಂದಾಗಿದೆ. ಉದಾಹರಣೆಗೆ ಮಾರುಕಟ್ಟೆಗೆ ಹೋಗುವಾಗ ನಿಮ್ಮ ಜತೆಗೆ ಒಬ್ಬನು ನಡೆಯುತ್ತಿರಬಹುದು, ಅಂಗಡಿಯಲ್ಲಿ ಖರೀದಿಸುವಾಗ ಇನ್ನೊಬ್ಬ ಗ್ರಾಹಕನೂ ನಿಮ್ಮ ಜತೆಗಿರಬಹುದು, ಯಾತ್ರೆಯಲ್ಲಿ ಇನ್ನೋರ್ವ ಸಹಯಾತ್ರಿ ನಿಮ್ಮ ಜತೆಗಿರಬಹುದು. ಈ ತಾತ್ಕಾಲಿಕ ಒಡನಾಟದ ಸಂದರ್ಭದಲ್ಲೂ ಅವನೊಡನೆ ಉತ್ತಮ ವರ್ತನೆ ತೋರುವುದು ಮತ್ತು ಅವನಿಗೆ ಉಪದ್ರವ ನೀಡದಿರುವುದು ಪ್ರತಿಯೊಬ್ಬ ಸುಸಂಸ್ಕೃತ ಮತ್ತು ನಾಗರಿಕ ವ್ಯಕ್ತಿಯ ಕರ್ತವ್ಯವಾಗಿದೆ.

41. ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತರುವಾಗಲೂ ಇವರ ಮೇಲೆ ನಿಮ್ಮನ್ನು [ಮುಹಮ್ಮದ್‌ರನ್ನು(ಸ)] ಸಾಕ್ಷಿಯಾಗಿ ನಿಲ್ಲಿಸುವಾಗಲೂ ಇವರೇನು ಮಾಡುವರೆಂದು ಯೋಚಿಸಿರಿ.

فَكَيْفَ إِذَا جِئْنَا مِن كُلِّ أُمَّةٍ بِشَهِيدٍ
وَجِئْنَا بِكَ عَلَىٰ هَٰؤُلَاءِ شَهِيدًا ﴿٤١﴾

42. ಆಗ ಧಿಕ್ಕರಿಸಿ ನಡೆದವರು ಹಾಗೂ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದವರು, "ಅಕಟ! ಭೂಮಿ ಬಿರುಕು ಬಿಡುತ್ತಿದ್ದರೆ! ಮತ್ತು ನಾವು ಅದರೊಳಗೆ ಸೇರಿ ಹೋಗುತ್ತಿದ್ದರೆ!" ಎಂದು ಇಚ್ಛೆಪಡುವರು. ಅವರು ಅಲ್ಲಿ ಯಾವುದನ್ನೂ ಅಲ್ಲಾಹನಿಂದ ಅಡಗಿಸಲಾರರು.

يَوْمَئِذٍ يَوَدُّ الَّذِينَ كَفَرُوا وَعَصَوُا الرَّسُولَ
لَوْ تُسَوَّىٰ بِهِمُ الْأَرْضُ وَلَا يَكْتُمُونَ
اللَّهَ حَدِيثًا ﴿٤٢﴾

43. ಓ ಸತ್ಯವಿಶ್ವಾಸಿಗಳೇ, ನೀವು ಅಮಲಿನಲ್ಲಿದ್ದಾಗ ನಮಾಝನ್ನು ಸಮೀಪಿಸಬೇಡಿರಿ.[39] ನೀವು ಹೇಳುತ್ತಿರುವುದೇನೆಂಬ ಬೋಧವಿರುವಾಗ ನಮಾಝ್ ಮಾಡಬೇಕು.[40] ಅದೇ ರೀತಿಯಲ್ಲಿ ಜನಾಬತ್‌ನ[41] ಸ್ಥಿತಿಯಲ್ಲಿಯೂ ಸ್ನಾನ ಮಾಡಿಕೊಳ್ಳದೆ ನಮಾಝನ್ನು ಸಮೀಪಿಸಬೇಡಿರಿ, ನೀವು ದಾರಿಗರಾಗಿರುವಾಗ ಹೊರತು.[42] ನೀವು ಅನಾರೋಗ್ಯದಿಂದಿದ್ದಾಗ ಅಥವಾ ಪ್ರಯಾಣದಲ್ಲಿದ್ದಾಗ ಅಥವಾ ನಿಮ್ಮಲ್ಲಾರಾದರೂ ಶೌಚ್ಯಕ್ಕೆ ಹೋಗಿ ಬಂದಾಗ ಅಥವಾ ನೀವು ಸ್ತ್ರೀಯರನ್ನು ಸ್ಪರ್ಶಿಸಿರುವಾಗ[43] ನಿಮಗೆ ನೀರು ಸಿಗದೆ ಹೋದರೆ, ಶುದ್ಧ ಮಣ್ಣನ್ನು ಉಪಯೋಗಿಸಿಕೊಳ್ಳಿರಿ ಮತ್ತು ಅದರಿಂದ ಮುಖಗಳನ್ನೂ ಕೈಗಳನ್ನೂ ಸವರಿಕೊಳ್ಳಿರಿ.[44] ನಿಶ್ಚಯವಾಗಿಯೂ ಅಲ್ಲಾಹನು ಮೃದು ನೀತಿಯನ್ನನುಸರಿಸುವವನೂ ಅತ್ಯಂತ ಕ್ಷಮಾ ಶೀಲನೂ ಆಗಿರುತ್ತಾನೆ.

يَا أَيُّهَا الَّذِينَ آمَنُوا لَا تَقْرَبُوا الصَّلَاةَ
وَأَنتُمْ سُكَارَىٰ حَتَّىٰ تَعْلَمُوا مَا تَقُولُونَ
وَلَا جُنُبًا إِلَّا عَابِرِي سَبِيلٍ حَتَّىٰ
تَغْتَسِلُوا وَإِن كُنتُم مَّرْضَىٰ أَوْ عَلَىٰ
سَفَرٍ أَوْ جَاءَ أَحَدٌ مِّنكُم مِّنَ الْغَائِطِ
أَوْ لَامَسْتُمُ النِّسَاءَ فَلَمْ تَجِدُوا مَاءً
فَتَيَمَّمُوا صَعِيدًا طَيِّبًا فَامْسَحُوا بِوُجُوهِكُمْ
وَأَيْدِيكُمْ إِنَّ اللَّهَ كَانَ عَفُوًّا غَفُورًا ﴿٤٣﴾

39. ಇದು ಮದ್ಯಪಾನದ ಬಗೆಗಿನ ಎರಡನೆಯ ಆದೇಶವಾಗಿದೆ. ಮೊದಲನೆಯ ಆದೇಶ ಅಲ್‌ಬಕರಃ ಅಧ್ಯಾಯದಲ್ಲಿ (ಸೂಕ್ತ- 219) ಬಂದಿದೆ.

40. ಅರ್ಥಾತ್- ನಮಾಝ್‌ನಲ್ಲಿ ತಾನು ನಾಲಗೆಯಿಂದ ಏನನ್ನು ಪಠಿಸುತ್ತಿದ್ದೇನೆ ಎಂಬುದನ್ನು ಅರಿಯುವಷ್ಟು ಪ್ರಜ್ಞೆ ಅವನಿಗಿರಬೇಕು. ನಮಾಝ್ ನಿರ್ವಹಿಸಲು ನಿಂತು ಯಾವುದಾದರೂ ಪದ್ಯವನ್ನು ಹಾಡಲು ಶುರು ಮಾಡಬಾರದು.

41. 'ಜನಾಬತ್' ಎಂದರೆ ಸಂಸರ್ಗ ಅಥವಾ ಸ್ವಪ್ನಸ್ಖಲನದಿಂದ ಉಂಟಾಗುವ ಮಾಲಿನ್ಯವಾಗಿದೆ.

42. ಕರ್ಮಶಾಸ್ತ್ರಜ್ಞರು ಮತ್ತು ವ್ಯಾಖ್ಯಾನಕಾರರ ಒಂದು ವಿಭಾಗದ ಪ್ರಕಾರ ಈ ಸೂಕ್ತದ ಅರ್ಥ ಜನಾಬತ್‌ನ ಸ್ಥಿತಿಯಲ್ಲಿ ಮಸೀದಿಯನ್ನು ಪ್ರವೇಶಿಸಬಾರದು. ಆದರೆ ಮಸೀದಿಯ ಮೂಲಕ ಹಾದು ಹೋಗಬಹುದು. ಇನ್ನೊಂದು ವಿಭಾಗದ ಪ್ರಕಾರ ಇದರ ಅರ್ಥ ಪ್ರವಾಸ. ಅರ್ಥಾತ್ ವ್ಯಕ್ತಿ ಪ್ರವಾಸದಲ್ಲಿದ್ದಾಗ 'ಜನಾಬತ್' ಸಂಭವಿಸಿದರೆ ಅದನ್ನು ನೀಗಿಸಲಿಕ್ಕಾಗಿ ಅವನು 'ತಯಮ್ಮುಮ್' ಮಾಡಿಕೊಳ್ಳಬಹುದು.

43. 'ಲಮಸ್' ಅರ್ಥಾತ್ ಸ್ಪರ್ಶಿಸುವುದು ಎಂದರೇನೆಂಬ ಬಗ್ಗೆಯೂ ಭಿನ್ನಾಭಿಪ್ರಾಯವಿದೆ. ಬಹುತೇಕ ಇಮಾಮ್‌ಗಳ ಪ್ರಕಾರ ಇದರ ಅರ್ಥ ಸಂಸರ್ಗವಾಗಿದೆ. ಇಮಾಮ್ ಅಬೂಹನೀಫಾ ಮತ್ತು ಅವರ ಅನುಯಾಯಿಗಳು ಈ ಅರ್ಥವನ್ನೇ ಅಳವಡಿಸಿದ್ದಾರೆ. ಇನ್ನಿತರ ಕೆಲವು ಕರ್ಮಶಾಸ್ತ್ರಜ್ಞರ ಪ್ರಕಾರ ಇದರ ಅರ್ಥ ಸ್ಪರ್ಶಿಸುವುದು ಎಂದಾಗಿದೆ. ಇಮಾಮ್ ಶಾಫೀ(ರ) ಈ ಅರ್ಥವನ್ನೇ ಮಾನ್ಯ ಮಾಡಿದ್ದಾರೆ. ಇಮಾಮ್ ಮಾಲಿಕ್‌ರ(ರ) ಪ್ರಕಾರ ಸ್ತ್ರೀ ಪುರುಷರು ವಿಷಯಾಸಕ್ತಿಯೊಂದಿಗೆ ಪರಸ್ಪರ ಸ್ಪರ್ಶಿಸಿದರೆ ಅವರ ವುಝೂ ಮುರಿಯುತ್ತದೆ. ಆದರೆ ವಿಷಯಾಸಕ್ತಿಯಿಲ್ಲದೆ ಪರಸ್ಪರ ಮೈ ತಾಗಿದರೆ ಅಭ್ಯಂತರವಿಲ್ಲ.

44. ಈ ಆದೇಶದ ವಿವರಣೆಯೇನೆಂದರೆ ವ್ಯಕ್ತಿಯು 'ವುಝೂ'ವಿನಲ್ಲಿಲ್ಲದ ಸಂದರ್ಭದಲ್ಲಿ ಅಥವಾ ಅವನಿಗೆ ಸ್ನಾನದ ಅವಶ್ಯಕತೆ

44. ಗ್ರಂಥ ಜ್ಞಾನದ ಒಂದಂಶ ನೀಡಲ್ಪಟ್ಟಿದ್ದವರನ್ನೂ ನೀವು ನೋಡಿದಿರಾ? ಅವರು ಸ್ವತಃ ಪಥಭ್ರಷ್ಟತೆಯನ್ನು ಖರೀದಿಸಿಕೊಳ್ಳುವವರಾಗಿದ್ದಾರೆ ಮತ್ತು ನೀವೂ ಪಥಭ್ರಷ್ಟರಾಗಬೇಕೆಂದು ಬಯಸುತ್ತಾರೆ.

أَلَمْ تَرَ إِلَى الَّذِينَ أُوتُوا نَصِيبًا مِّنَ الْكِتَابِ
يَشْتَرُونَ الضَّلَالَةَ وَيُرِيدُونَ أَن
تَضِلُّوا السَّبِيلَ ﴿٤٤﴾

45. ಅಲ್ಲಾಹನು ನಿಮ್ಮ ಶತ್ರುಗಳನ್ನು ಚೆನ್ನಾಗಿ ಅರಿತಿರುವವನು ಮತ್ತು ನಿಮ್ಮ ಸಂರಕ್ಷಣೆ ಹಾಗೂ ಸಹಾಯಕ್ಕೆ ಅಲ್ಲಾಹನೇ ಸಾಕು.

وَاللَّهُ أَعْلَمُ بِأَعْدَائِكُمْ ۚ وَكَفَىٰ بِاللَّهِ
وَلِيًّا وَكَفَىٰ بِاللَّهِ نَصِيرًا ﴿٤٥﴾

46. ಯಹೂದಿಯರಾದವರಲ್ಲಿ ಕೆಲವರು ಮಾತುಗಳನ್ನು ಅವುಗಳ ಸ್ಥಾನದಿಂದ ಬದಲಾಯಿಸಿ ಬಿಡುವವರೂ ಇದ್ದಾರೆ.[45] ಸತ್ಯಧರ್ಮದ ವಿರುದ್ಧ ಕೇಡುಂಟುಮಾಡಲು ತಮ್ಮ ನಾಲಗೆಗಳನ್ನು ತಿರುಚಿ, 'ಸಮಿಅ್‌ನಾ ವ ಅಸೈನಾ'[46], 'ಇಸ್ಮಅ್ ಗೈರ ಮುಸ್ಮಇನ್'[47] ಮತ್ತು 'ರಾಇನಾ'[48] ಎಂದು ಹೇಳುತ್ತಾರೆ. ಇಷ್ಟಾಗಿ ಅವರು, 'ಸಮಿಅ್‌ನಾ ವ ಅತಅ್‌ನಾ' (ನಾವು ಆಲಿಸಿದೆವು ಮತ್ತು ಅನುಸರಿಸಿದೆವು) 'ಇಸ್ಮಅ್' (ಆಲಿಸು) ಮತ್ತು 'ಉನ್‌ಝುರ್ನಾ' (ನಮ್ಮ ಕಡೆ ಗಮನಿಸಿರಿ) ಎಂದು ಹೇಳುತ್ತಿದ್ದರೆ ಅದು ಅವರಿಗೇ ಉತ್ತಮವೂ ನೇರ ಮಾರ್ಗವೂ ಆಗಿತ್ತು. ಆದರೆ, ಅವರ ಮಿಥ್ಯಾರಾಧನೆಯ ಕಾರಣದಿಂದ ಅವರ ಮೇಲೆ ಅಲ್ಲಾಹನ ಶಾಪ ಬಿದ್ದಿರುತ್ತದೆ. ಆದುದರಿಂದ ಅವರು ಸ್ವಲ್ಪ ಮಾತ್ರವೇ ವಿಶ್ವಾಸ ವಿಡುತ್ತಾರೆ.

مِّنَ الَّذِينَ هَادُوا يُحَرِّفُونَ الْكَلِمَ عَن
مَّوَاضِعِهِ وَيَقُولُونَ سَمِعْنَا وَعَصَيْنَا
وَاسْمَعْ غَيْرَ مُسْمَعٍ وَرَاعِنَا لَيًّا بِأَلْسِنَتِهِمْ
وَطَعْنًا فِي الدِّينِ ۚ وَلَوْ أَنَّهُمْ قَالُوا سَمِعْنَا
وَأَطَعْنَا وَاسْمَعْ وَانظُرْنَا لَكَانَ خَيْرًا لَّهُمْ
وَأَقْوَمَ وَلَٰكِن لَّعَنَهُمُ اللَّهُ بِكُفْرِهِمْ
فَلَا يُؤْمِنُونَ إِلَّا قَلِيلًا ﴿٤٦﴾

ತಲೆದೋರಿದ್ದು ನೀರು ಇಲ್ಲದಾಗ ಅವನು 'ತಯಮ್ಮುಮ್' ಮಾಡಿ ನಮಾಝ್ ನಿರ್ವಹಿಸಬಹುದು. ಅವನು ರೋಗಿಯಾಗಿದ್ದು ವುಝೂ ಅಥವಾ ಸ್ನಾನದಿಂದ ಅವನಿಗೆ ಹಾನಿ ಸಂಭವಿಸುವುದಾದರೆ ನೀರು ಇದ್ದಾಗಲೂ ತಯಮ್ಮುಮ್‌ನ ಅನುಮತಿಯಿಂದ ಪ್ರಯೋಜನ ಪಡೆಯಬಹುದು.

45. ಇದಕ್ಕೆ ಮೂರು ಅರ್ಥಗಳಿವೆ. ಮೊದನೆಯದಾಗಿ ಅಲ್ಲಾಹನ ಗ್ರಂಥದ ಪದಗಳನ್ನು ಮಾರ್ಪಡಿಸುತ್ತಾರೆ. ಎರಡನೆಯದಾಗಿ ತಮ್ಮದೇ ಆದ ವ್ಯಾಖ್ಯಾನಗಳಿಂದ ಗ್ರಂಥದ ಬಗ್ಗೆ ಒಂದಕ್ಕೊಂದು ಅರ್ಥ ಕಲ್ಪಿಸುತ್ತಾರೆ. ಮೂರನೆಯಯದಾಗಿ ಅವರು ಪ್ರವಾದಿ ಮುಹಮ್ಮದ್(ಸ) ಮತ್ತವರ ಅನುಯಾಯಿಗಳ ಜೊತೆ ಅವರ ಮಾತುಗಳನ್ನು ಆಲಿಸುತ್ತಾರೆ ಮತ್ತು ಅಲ್ಲಿಂದ ಮರಳಿದ ನಂತರ ಜನರೊಡನೆ ಅದನ್ನು ತಪ್ಪಾಗಿ ವಿವರಿಸುತ್ತಾರೆ. ಒಂದು ವಿಚಾರವನ್ನು ಪ್ರಸ್ತಾಪಿಸಲಾಗಿದ್ದರೆ ಅವರು ತಮ್ಮ ಕುತಂತ್ರದಿಂದ ಅದಕ್ಕೆ ಬೇರೆಯೇ ಬಣ್ಣಕೊಟ್ಟು ಜನರಲ್ಲಿ ಪ್ರಚುರ ಪಡಿಸುತ್ತಾರೆ.

46. ಅರ್ಥಾತ್- ಅವರಿಗೆ ಅಲ್ಲಾಹನ ಆದೇಶವನ್ನು ಕೊಡಲಾದಾಗ ಅವರು ಜೋರಾಗಿ 'ಸಮಿಅ್‌ನಾ' (ನಾವು ಆಲಿಸಿದೆವು) ಎನ್ನುತ್ತಾರೆ ಮತ್ತು ಮೆಲ್ಲನೆ 'ಅಸೈನಾ' (ನಾವು ಒಪ್ಪಲಿಲ್ಲ) ಎನ್ನುತ್ತಾರೆ. ಅಥವಾ 'ಅತಅ್‌ನಾ' (ನಾವು ಸಮ್ಮತಿಸಿದೆವು) ಎಂಬ ಪದವನ್ನು 'ಅಸೈನಾ' (ನಾವು ಒಪ್ಪಲಿಲ್ಲ) ಎಂಬ ಅರ್ಥ ಬರುವ ಧಾಟಿಯಲ್ಲಿ ಉಚ್ಚರಿಸುತ್ತಾರೆ.

47. ಅರ್ಥಾತ್- ಮಾತನಾಡುವಾಗ ಅವರು ಪ್ರವಾದಿವರ್ಯರೊಡನೆ(ಸ) ಏನಾದರೂ ಹೇಳಬಯಸಿದರೆ 'ಇಸ್ಮಅ್' (ಇತ್ತ ಕೇಳಿರಿ) ಎನ್ನುತ್ತಾರೆ. ಅದರ ಜೊತೆಗೆ ದ್ವಯಾರ್ಥಉಳ್ಳ 'ಗೈರಮುಸ್‌ಮಇನ್' ಎಂಬ ಪದವನ್ನೂ ಹೇಳಿ ಬಿಡುತ್ತಾರೆ. ಅರ್ಥಾತ್ ತಾವು ಎಷ್ಟು ಶ್ರೇಷ್ಠರೆಂದರೆ ತಮ್ಮಿಚ್ಚೆಗೆ ವಿರುದ್ಧ ಯಾವುದೇ ಮಾತನ್ನೂ ನಾವು ಹೇಳುವಂತಿಲ್ಲ. ಇನ್ನೊಂದು ಅರ್ಥ ನಿಮಗೆ ಯಾವುದನ್ನೂ ಹೇಳಲು ನೀವು ಅರ್ಹರಲ್ಲ ಎಂದಾಗುತ್ತದೆ. ಮತ್ತೊಂದು ಅರ್ಥ ದೇವನು ನಿಮ್ಮನ್ನು ಕಿವುಡನಾಗಿ ಮಾಡಲಿ ಎಂದಾಗಿದೆ.

48. ಇದರ ವಿವರಣೆ ಅಲ್‌ಬಕರಃ ಅಧ್ಯಾಯದ 36ನೆಯ ಟಿಪ್ಪಣಿಯಲ್ಲಿ ಬಂದಿದೆ.

47. ಓ ಗ್ರಂಥ ನೀಡಲ್ಪಟ್ಟವರೇ, ನಾವೀಗ ಅವತೀರ್ಣಗೊಳಿಸಿರುವ ಹಾಗೂ ನಿಮ್ಮ ಬಳಿ ಮೊದಲೇ ಇದ್ದ ಗ್ರಂಥವನ್ನು ಸಮರ್ಥಿಸುವ ಈ ಗ್ರಂಥವನ್ನು ಮಾನ್ಯ ಮಾಡಿರಿ. ನಾವು ಮುಖಗಳನ್ನು ವಿರೂಪಗೊಳಿಸಿ ಹಿಂದಕ್ಕೆ ತಿರುಗಿಸಿ ಬಿಡುವ ಅಥವಾ 'ಸಬ್ತ್'ನ ವರನ್ನು ಶಪಿಸಿದಂತೆಯೇ ಅವರನ್ನೂ ಶಪಿಸಿ ಬಿಡುವ ಮುಂಚೆಯೇ ವಿಶ್ವಾಸವಿಡಿರಿ. ಅಲ್ಲಾಹನ ಆಜ್ಞೆಯು ಅನುಷ್ಠಾನಕ್ಕೆ ಬಂದೇ ತೀರುವುದೆಂಬುದನ್ನು ನೆನಪಿಡಿರಿ.

يٰۤاَيُّهَا الَّذِيْنَ اُوْتُوا الْكِتٰبَ اٰمِنُوْا بِمَا نَزَّلْنَا
مُصَدِّقًا لِّمَا مَعَكُمْ مِّنْ قَبْلِ اَنْ نَّطْمِسَ
وُجُوْهًا فَنَرُدَّهَا عَلٰۤى اَدْبَارِهَاۤ اَوْ نَلْعَنَهُمْ
كَمَا لَعَنَّاۤ اَصْحٰبَ السَّبْتِ ؕ وَكَانَ
اَمْرُ اللّٰهِ مَفْعُوْلًا ﴿٤٧﴾

48. ಅಲ್ಲಾಹನು ತನ್ನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು ಅವನು ಕ್ಷಮಿಸಲಿಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು. ಅಲ್ಲಾಹನೊಂದಿಗೆ ಇತರ ಯಾರನ್ನಾದರೂ ಸಹಭಾಗಿಯನ್ನಾಗಿ ಮಾಡಿದವನು ಅತಿ ದೊಡ್ಡ ಸುಳ್ಳನ್ನು ಸೃಷ್ಟಿಸಿದನು ಮತ್ತು ಅತ್ಯಂತ ಘೋರ ಪಾಪವೆಸಗಿದನು.

اِنَّ اللّٰهَ لَا يَغْفِرُ اَنْ يُّشْرَكَ بِهٖ وَيَغْفِرُ
مَا دُوْنَ ذٰلِكَ لِمَنْ يَّشَآءُ ۚ وَمَنْ يُّشْرِكْ
بِاللّٰهِ فَقَدِ افْتَرٰۤى اِثْمًا عَظِيْمًا ﴿٤٨﴾

49. ತಮ್ಮ ಪಾವಿತ್ರ್ಯದ ಕುರಿತು ಅತಿಯಾಗಿ ಹಿಗ್ಗುವವರನ್ನು ನೀವು ನೋಡಿದಿರಾ? ವಸ್ತುತಃ ಪಾವಿತ್ರ್ಯವನ್ನು ಅಲ್ಲಾಹನೇ ತಾನಿಚ್ಛಿಸಿದವರಿಗೆ ದಯಪಾಲಿಸುತ್ತಾನೆ ಮತ್ತು (ಇವರಿಗೆ ಪಾವಿತ್ರ್ಯ ಒದಗುತ್ತಿಲ್ಲವಾದರೆ ವಾಸ್ತವದಲ್ಲಿ) ಇವರ ಮೇಲೆ ಕಿಂಚಿತ್ತೂ ಅನ್ಯಾಯವಾಗುತ್ತಿಲ್ಲ.

اَلَمْ تَرَ اِلَى الَّذِيْنَ يُزَكُّوْنَ اَنْفُسَهُمْ ؕ بَلِ
اللّٰهُ يُزَكِّيْ مَنْ يَّشَآءُ وَلَا يُظْلَمُوْنَ فَتِيْلًا ﴿٤٩﴾

50. ಇವರು ಅಲ್ಲಾಹನ ಮೇಲೂ ಮಿಥ್ಯಾಪಾದನೆ ಹೊರಿಸಲು ಹೇಸದಿರುವುದನ್ನು ನೋಡಿಕೊಳ್ಳಿರಿ. ಇವರು ಸ್ಪಷ್ಟವಾದ ಪಾಪಿಗಳಾಗಿರುತ್ತಾರೆಂಬುದಕ್ಕೆ ಈ ಒಂದು ಪಾಪವೇ ಸಾಕು.

اُنْظُرْ كَيْفَ يَفْتَرُوْنَ عَلَى اللّٰهِ الْكَذِبَ ؕ
وَكَفٰى بِهٖۤ اِثْمًا مُّبِيْنًا ﴿٥٠﴾

51. ಗ್ರಂಥ ಜ್ಞಾನದಿಂದ ಒಂದಂಶ ನೀಡಲ್ಪಟ್ಟವರನ್ನು ನೀವು ಕಾಣಲಿಲ್ಲವೇ? ಅವರು 'ಜಿಬ್ತ್'[49] ಮತ್ತು 'ತಾಗೂತ್'[50]ಗಳನ್ನು ನಂಬುತ್ತಾರೆ. ಅವರು ಸತ್ಯನಿಷೇಧಿಗಳ ಕುರಿತು, ಸತ್ಯವಿಶ್ವಾಸಿಗಳಿ

اَلَمْ تَرَ اِلَى الَّذِيْنَ اُوْتُوْا نَصِيْبًا مِّنَ الْكِتٰبِ
يُؤْمِنُوْنَ بِالْجِبْتِ وَالطَّاغُوْتِ وَيَقُوْلُوْنَ
لِلَّذِيْنَ كَفَرُوْا هٰۤؤُلَآءِ اَهْدٰى مِنَ

49. 'ಜಿಬ್ತ್'ನ ನಿಜಾರ್ಥ ಅವಾಸ್ತವಿಕ, ಕ್ಷುದ್ರ ಮತ್ತು ನಿರರ್ಥಕ ವಿಷಯಗಳು ಎಂದಾಗಿದೆ. ಇಸ್ಲಾಮೀ ಪಾರಿಭಾಷಿಕದಲ್ಲಿ ಜ್ಯೋತಿಷ್ಯ, ಶಕುನ, ಅದೃಷ್ಟ ಪರೀಕ್ಷೆ, ಜಾದೂ, ಮಂತ್ರ, ಮುಹೂರ್ತ ಇತ್ಯಾದಿ ಭ್ರಾಮಕ ವಿಷಯಗಳು 'ಜಿಬ್ತ್'ನಲ್ಲಿ ಸೇರಿವೆ.

50. ವಿವರಣೆಗಾಗಿ ಅಲ್‌ಬಕರಃ ಅಧ್ಯಾಯದ ಟಿಪ್ಪಣಿ 89-90 ನೋಡಿರಿ.

ಗಿಂತ ಇವರೇ ಹೆಚ್ಚು ನೇರಮಾರ್ಗದಲ್ಲಿದ್ದಾರೆಂದು ಹೇಳುತ್ತಾರೆ.[51]

الَّذِينَ آمَنُوا سَبِيلًا ﴿٥١﴾

52. ಅಲ್ಲಾಹನು ಶಪಿಸಿರುವುದು ಇಂತಹವರನ್ನೇ. ಅಲ್ಲಾಹ್ ಯಾರನ್ನಾದರೂ ಶಪಿಸಿಬಿಟ್ಟರೆ ನೀವು ಅವನಿಗೆ ಯಾವ ಸಹಾಯಕನನ್ನೂ ಕಾಣಲಾರಿರಿ.

أُولَٰئِكَ الَّذِينَ لَعَنَهُمُ اللَّهُ ۖ وَمَن يَلْعَنِ
اللَّهُ فَلَن تَجِدَ لَهُ نَصِيرًا ﴿٥٢﴾

53. ಅಧಿಕಾರದಲ್ಲಿ ಇವರಿಗೇನಾದರೂ ಪಾಲು ಇದೆಯೇ? ಹಾಗಿರುತ್ತಿದ್ದರೆ ಇವರು ಇತರರಿಗೆ ಚಿಕ್ಕಾಸನ್ನೂ ಕೊಡುತ್ತಿರಲಿಲ್ಲ.

أَمْ لَهُمْ نَصِيبٌ مِّنَ الْمُلْكِ فَإِذًا لَّا يُؤْتُونَ
النَّاسَ نَقِيرًا ﴿٥٣﴾

54. ಮತ್ತೇನು ಅಲ್ಲಾಹನು ಇತರರಿಗೆ ತನ್ನ ಅನುಗ್ರಹ ಪ್ರದಾನ ಮಾಡಿದುದಕ್ಕಾಗಿ ಇವರು ಅವರ ಬಗ್ಗೆ ಅಸೂಯೆ ಪಡುತ್ತಾರೆಯೇ? ಹಾಗಿದ್ದರೆ ಇವರು ತಿಳಿದಿರಲಿ, ನಾವು ಇಬ್‌ರಾಹೀಮರ ಸಂತತಿಗೆ ಗ್ರಂಥ ಮತ್ತು ದಿವ್ಯಯುಕ್ತಿಯನ್ನು ದಯಪಾಲಿಸಿದ್ದೆವು ಮತ್ತು ಅವರಿಗೆ ಮಹಾ ಸಾಮ್ರಾಜ್ಯವನ್ನು ಕರುಣಿಸಿದ್ದೆವು.

أَمْ يَحْسُدُونَ النَّاسَ عَلَىٰ مَا آتَاهُمُ
اللَّهُ مِن فَضْلِهِ ۖ فَقَدْ آتَيْنَا آلَ إِبْرَاهِيمَ
الْكِتَابَ وَالْحِكْمَةَ وَآتَيْنَاهُم مُّلْكًا عَظِيمًا ﴿٥٤﴾

55. ಆದರೆ ಅವರಲ್ಲಿ ಕೆಲವರು ಅವರ ಮೇಲೆ ವಿಶ್ವಾಸವಿರಿಸಿದರು ಇನ್ನು ಕೆಲವರು ವಿಮುಖರಾದರು. ವಿಮುಖರಾದವರಿಗಂತು ಧಗಧಗಿಸುವ ನರಕಾಗ್ನಿಯೇ ಸಾಕು.[52]

فَمِنْهُم مَّنْ آمَنَ بِهِ وَمِنْهُم مَّن صَدَّ
عَنْهُ ۚ وَكَفَىٰ بِجَهَنَّمَ سَعِيرًا ﴿٥٥﴾

56. ನಮ್ಮ ನಿದರ್ಶನಗಳನ್ನು ನಿಷೇಧಿಸಿದವರನ್ನು ನಾವು ನಿಶ್ಚಯವಾಗಿಯೂ ನರಕಾಗ್ನಿಗೆ ತಳ್ಳಿಬಿಡುವೆವು. ಅವರ ಮೈಚರ್ಮ ಕರಟಿ ಹೋದಾಗಲೆಲ್ಲ ಅವರು ಶಿಕ್ಷೆಯನ್ನು ಚೆನ್ನಾಗಿ ಸವಿಯುವಂತಾಗಲು ನಾವು ಅದರ ಸ್ಥಾನದಲ್ಲಿ ಬೇರೆ ಚರ್ಮವನ್ನು ಸೃಷ್ಟಿಸುತ್ತ ಹೋಗುವೆವು. ಅಲ್ಲಾಹನು ಮಹಾ ಪ್ರತಾಪಿಯಾಗಿದ್ದು ತನ್ನ ತೀರ್ಮಾನಗಳನ್ನು ಕಾರ್ಯಾಚರಣೆಗೆ ತರುವ ಯುಕ್ತಿಯನ್ನು ಚೆನ್ನಾಗಿ ಬಲ್ಲವನಾಗಿರುತ್ತಾನೆ.

إِنَّ الَّذِينَ كَفَرُوا بِآيَاتِنَا سَوْفَ نُصْلِيهِمْ
نَارًا كُلَّمَا نَضِجَتْ جُلُودُهُم بَدَّلْنَاهُمْ
جُلُودًا غَيْرَهَا لِيَذُوقُوا الْعَذَابَ ۗ إِنَّ
اللَّهَ كَانَ عَزِيزًا حَكِيمًا ﴿٥٦﴾ ع

57. ನಮ್ಮ ನಿದರ್ಶನಗಳನ್ನು ಮಾನ್ಯ ಮಾಡಿಕೊಂಡು ಸತ್ಕರ್ಮ ಮಾಡಿದವರಿಗೆ ನಾವು ತಳ ಭಾಗದಲ್ಲಿ ಕಾಲುವೆಗಳು

وَالَّذِينَ آمَنُوا وَعَمِلُوا الصَّالِحَاتِ سَنُدْخِلُهُمْ
جَنَّاتٍ تَجْرِي مِن تَحْتِهَا الْأَنْهَارُ خَالِدِينَ

51. ಇಲ್ಲಿ ಸತ್ಯನಿಷೇಧಕರು ಎಂದರೆ ಅರೇಬಿಯಾದ ಬಹುದೇವಾರಾಧಕರು.

52. ಇಲ್ಲಿ ಬನೀ ಇಸ್ರಾಈಲರ ಅಸೂಯೆಯ ಮಾತುಗಳಿಗೆ ಉತ್ತರಿಸಲಾಗಿದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಅರ್ಥಾತ್ ನೀವು ಅಸೂಯೆ ಪಡುವುದಾದರೂ ಯಾವ ಕಾರಣಕ್ಕಾಗಿ? ನೀವೂ ಇಬ್‌ರಾಹೀಮರ ಸಂತತಿಯೇ ಆಗಿದ್ದೀರಿ. ಅಂತೆಯೇ ಬನೀ ಇಸ್ಮಾಈಲ್ ಕೂಡ ಇಬ್‌ರಾಹೀಮರ ಸಂತತಿಯಾಗಿದ್ದಾರೆ. ಇಬ್‌ರಾಹೀಮರಿಂದ ನಾವು ಪಡೆದಿದ್ದ ನಾಯಕತ್ವದ ಕರಾರು ಇಬ್‌ರಾಹೀಮರ ಸಂತತಿಯ ಪೈಕಿ, ನಾವು ಕಳುಹಿಸಿದ ಗ್ರಂಥ ಮತ್ತು ಯುಕ್ತಿಯನ್ನು ಅನುಸರಿಸುವವರಿಗೆ ಮಾತ್ರ ಅನ್ವಯವಾಗುತ್ತಿತ್ತು. ಈ ಗ್ರಂಥ ಮತ್ತು ಯುಕ್ತಿಯನ್ನು ನಾವು ಮೊದಲು ನಿಮ್ಮೆಡೆಗೆ ಕಳುಹಿಸಿದೆವು. ಆದರೆ ನೀವು ನಿಮ್ಮ ಅನರ್ಹತೆಯಿಂದಾಗಿ ಅದರಿಂದ ವಿಮುಖರಾದಿರಿ. ಈಗ ಅದನ್ನೇ ನಾವು ಬನೀಇಸ್ಮಾಈಲರಿಗೆ ದಯಪಾಲಿಸಿದ್ದೇವೆ. ಅವರು ಅದರ ಮೇಲೆ ವಿಶ್ವಾಸವಿಟ್ಟಿರುವುದು ಅವರ ಪಾಲಿನ ಸೌಭಾಗ್ಯವಾಗಿದೆ.

ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಕೊಡುವೆವು. ಅಲ್ಲಿ ಅವರು ಅನಂತ ಕಾಲ ನೆಲೆಸುವರು. ಅಲ್ಲಿ ಅವರಿಗೆ ಪರಿಶುದ್ಧ ಜೊತೆಗಾರರು ಸಿಗುವರು ಮತ್ತು ನಾವು ಅವರನ್ನು ದಟ್ಟವಾದ ನೆರಳಲ್ಲಿರಿಸುವೆವು.

فِيْهَآ اَبَدًا ۭ لَهُمْ فِيْهَآ اَزْوَاجٌ مُّطَهَّرَةٌ ۡ
وَّنُدْخِلُهُمْ ظِلًّا ظَلِيْلًا ﴿٥٧﴾

58. ಮುಸ್ಲಿಮರೇ, ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ಒಪ್ಪಿಸಿಕೊಡಿರೆಂದೂ ಜನರೊಳಗೆ ತೀರ್ಪು ನೀಡುವಾಗ ನ್ಯಾಯದೊಂದಿಗೆ ತೀರ್ಪು ನೀಡಿರೆಂದೂ[53] ಅಲ್ಲಾಹನು ನಿಮಗೆ ಆಜ್ಞೆ ವಿಧಿಸುತ್ತಾನೆ. ಅಲ್ಲಾಹನು ನಿಮಗೆ ಅತ್ಯುತ್ತಮ ಉಪದೇಶವನ್ನೀಯುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹ್ ಸರ್ವಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ.

اِنَّ اللّٰهَ يَاْمُرُكُمْ اَنْ تُؤَدُّوا الْاَمٰنٰتِ اِلٰٓى
اَهْلِهَا ۙ وَاِذَا حَكَمْتُمْ بَيْنَ النَّاسِ اَنْ
تَحْكُمُوْا بِالْعَدْلِ ۭ اِنَّ اللّٰهَ نِعِمَّا يَعِظُكُمْ
بِهٖ ۭ اِنَّ اللّٰهَ كَانَ سَمِيْعًۢا بَصِيْرًا ﴿٥٨﴾

59. ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಆಜ್ಞಾಪಾಲನೆ ಮಾಡಿರಿ, ಸಂದೇಶವಾಹಕರ ಮತ್ತು ನಿಮ್ಮೊಳಗಿನ 'ಉಲುಲ್ ಅಮ್ರ್'ರ (ಆಜ್ಞಾಧಿಕಾರ ಹೊಂದಿದವರ) ಆಜ್ಞಾಪಾಲನೆ ಮಾಡಿರಿ. ಅನಂತರ ನಿಮ್ಮೊಳಗೆ ಯಾವುದಾದರೊಂದು ವಿಷಯದಲ್ಲಿ ವಿವಾದವುಂಟಾದರೆ ನೀವು ನಿಜಕ್ಕೂ ಅಲ್ಲಾಹನ ಮತ್ತು ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸುತ್ತೀರಾದರೆ ಆ ವಿವಾದವನ್ನು ಅಲ್ಲಾಹ್ ಮತ್ತು ಸಂದೇಶವಾಹಕರ ಕಡೆಗೆ ತಿರುಗಿಸಿರಿ.[54] ಇದುವೇ ಅತ್ಯಂತ ಸರಿಯಾದ ಕರ್ಮ ವಿಧಾನ. ಇದು ಪರಿಣಾಮದ ದೃಷ್ಟಿಯಿಂದಲೂ ಉತ್ತಮವಾಗಿದೆ.

يٰٓاَيُّهَا الَّذِيْنَ اٰمَنُوْٓا اَطِيْعُوا اللّٰهَ وَاَطِيْعُوا
الرَّسُوْلَ وَاُولِي الْاَمْرِ مِنْكُمْ ۚ فَاِنْ
تَنَازَعْتُمْ فِيْ شَيْءٍ فَرُدُّوْهُ اِلَى اللّٰهِ وَالرَّسُوْلِ
اِنْ كُنْتُمْ تُؤْمِنُوْنَ بِاللّٰهِ وَالْيَوْمِ الْاٰخِرِ ۭ
ذٰلِكَ خَيْرٌ وَّاَحْسَنُ تَاْوِيْلًا ﴿٥٩﴾ ع ٥

53. ಅರ್ಥಾತ್- ಬನೀಇಸ್ರಾಈಲರು ನಿರತವಾಗಿರುವಂತಹ ಕೆಡುಕುಗಳಿಂದ ನೀವು ಮುಕ್ತವಾಗಿರಬೇಕು. ತಮ್ಮ ಪತನ ಕಾಲದಲ್ಲಿ ಅವರು ತಮ್ಮ ಅಮಾನತ್ತುಗಳನ್ನು ಅರ್ಥಾತ್ ಹೊಣೆಗಾರಿಕೆಯ ಪದವಿಗಳು, ಧಾರ್ಮಿಕ ನೇತೃತ್ವ ಮತ್ತು ಸಾಮುದಾಯಿಕ ನಾಯಕತ್ವವನ್ನು ಅಯೋಗ್ಯರು, ಸಂಕುಚಿತಮತಿಗಳು, ನೀತಿ ಬಾಹಿರರು, ಅಪ್ರಾಮಾಣಿಕರು ಮತ್ತು ದುರಾಚಾರಿಗಳಿಗೆ ನೀಡಿದ್ದರು. ಇದು ಅವರಲ್ಲಿದ್ದ ಮೂಲಭೂತ ಕೆಡುಕುಗಳಲ್ಲಿ ಒಂದಾಗಿತ್ತು. ಹೀಗೆ ಕೆಟ್ಟ ವ್ಯಕ್ತಿಗಳ ನಾಯಕತ್ವದಿಂದ ಸಮಸ್ತ ಸಮುದಾಯದಲ್ಲಿ ಕೆಡುಕು ಆವರಿಸುತ್ತಾ ಹೋಯಿತು. ನೀವು ಈ ರೀತಿ ಮಾಡಬಾರದು ಎಂದು ಇಲ್ಲಿ ಮುಸ್ಲಿಮರಿಗೆ ಮಾರ್ಗದರ್ಶನ ಕೊಡಲಾಗುತ್ತಿದೆ. ಬನೀ ಇಸ್ರಾಈಲರ ಇನ್ನೊಂದು ದೌರ್ಬಲ್ಯ ಅವರು ನ್ಯಾಯದ ಸ್ಫೂರ್ತಿಯಿಂದ ಮುಕ್ತರಾದುದಾಗಿತ್ತು. ವೈಯಕ್ತಿಕ ಮತ್ತು ಸಾಮುದಾಯಿಕ ಉದ್ದೇಶಗಳಿಗಾಗಿ ಅವರು ತಮ್ಮ ವಿಶ್ವಾಸವನ್ನು ನುಂಗಿ ಬಿಡಲು ಅಂಜುತ್ತಿರಲಿಲ್ಲ. ಸುವ್ಯಕ್ತವಾದ ಹಟಮಾರಿತನ ಪ್ರದರ್ಶಿಸುತ್ತಿದ್ದರು. ನ್ಯಾಯವನ್ನು ಬಹಿರಂಗವಾಗಿ ಕೊಲೆ ಮಾಡಲು ಅವರು ಹೇಸುತ್ತಿರಲಿಲ್ಲ. ನೀವು ಈ ರೀತಿ ನ್ಯಾಯಬಾಹಿರರಾಗಿ ಮಾರ್ಪಡಬಾರದು ಎಂದು ಅಲ್ಲಾಹನು ಇಲ್ಲಿ ಮುಸ್ಲಿಮರಿಗೆ ಮಾರ್ಗದರ್ಶನ ನೀಡುತ್ತಿದ್ದಾನೆ. ನಿಮ್ಮ ಮಿತ್ರತ್ವ ಮತ್ತು ಶತ್ರುತ್ವ ಯಾರೊಂದಿಗಿದ್ದರೂ ಸರಿಯೇ. ಎಲ್ಲಾ ಸಂದರ್ಭಗಳಲ್ಲೂ ಮಾತನಾಡುವಾಗ ನೀವು ನ್ಯಾಯಪೂರ್ಣ ಮಾತನ್ನೇ ಆಡಬೇಕು. ತೀರ್ಪು ನೀಡುವಾಗ ನ್ಯಾಯಯುತವಾಗಿಯೇ ನೀಡಬೇಕು.

54. ಆ ಸೂಕ್ತ ಇಸ್ಲಾಮಿನ ಸಮಸ್ತ ಧಾರ್ಮಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವ್ಯವಸ್ಥೆಯ ಬುನಾದಿಯಾಗಿದೆ. ಇದು ಇಸ್ಲಾಮೀ ವ್ಯವಸ್ಥೆಯ ಸಂವಿಧಾನದ ಮೊದಲ ಪರಿಚ್ಛೇದವಾಗಿದೆ. ಇದರಲ್ಲಿ ಈ ಕೆಳಗಿನ ನಾಲ್ಕು ತತ್ವಗಳನ್ನು ಶಾಶ್ವತವಾಗಿ ನೆಲೆಗೊಳಿಸಲಾಗಿದೆ-

1. ಇಸ್ಲಾಮೀ ವ್ಯವಸ್ಥೆಯಲ್ಲಿ ಅನುಸರಣಾರ್ಹ ಕೇವಲ ಅಲ್ಲಾಹನಾಗಿದ್ದಾನೆ. ಮುಸ್ಲಿಮನು ಮೊಟ್ಟ ಮೊದಲು ಅಲ್ಲಾಹನ ದಾಸನಾಗಿದ್ದಾನೆ, ಬೇರೇನಿದ್ದರೂ ಅನಂತರ.
2. ಪ್ರವಾದಿಯ ಅನುಸರಣೆ ಇಸ್ಲಾಮೀ ವ್ಯವಸ್ಥೆಯ ಎರಡನೆಯ ಬುನಾದಿಯಾಗಿದೆ.
3. ಪೂರ್ವೋಕ್ತ ಎರಡು ಅನುಸರಣೆಗಳ ನಂತರ ಮುಸ್ಲಿಮರ ಪೈಕಿಯ 'ಉಲುಲ್ ಅಮ್ರ್' ಅರ್ಥಾತ್ ನಾಯಕರ ಅನುಸರಣೆ

60. ಓ ಪೈಗಂಬರರೇ, ನಿಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟ ಗ್ರಂಥದ ಮೇಲೂ ನಿಮಗಿಂತ ಮೊದಲು ಅವತೀರ್ಣಗೊಳಿಸಲ್ಪಟ್ಟ ಗ್ರಂಥಗಳ ಮೇಲೂ ನಾವು ವಿಶ್ವಾಸವಿಟ್ಟೆವೆಂದು ಕಂಠೋಕ್ತವಾದಿಸುವವರನ್ನು ನೀವು ನೋಡಿಲ್ಲವೇ? ಆದರೆ ಅವರು ತಮ್ಮ ವ್ಯವಹಾರಗಳ ತೀರ್ಮಾನ ಮಾಡಿಸಲು 'ತಾಗೂತ'ನ್ನು ಸಮೀಪಿಸುತ್ತಾರೆ. ವಸ್ತುತಃ ಅವರಿಗೆ ತಾಗೂತನ್ನು ನಿರಾಕರಿಸಲು ಆಜ್ಞಾಪಿಸಲಾಗಿತ್ತು.[55] ಶೈತಾನನು ಅವರನ್ನು ದಾರಿತಪ್ಪಿಸಿ, ನೇರ ಮಾರ್ಗದಿಂದ ಬಹುದೂರ ಕೊಂಡೊಯ್ಯಲಿಚ್ಛಿಸುತ್ತಾನೆ.

أَلَمْ تَرَ إِلَى الَّذِينَ يَزْعُمُونَ أَنَّهُمْ آمَنُوا بِمَا
أُنزِلَ إِلَيْكَ وَمَا أُنزِلَ مِن قَبْلِكَ يُرِيدُونَ
أَن يَتَحَاكَمُوا إِلَى الطَّاغُوتِ وَقَدْ أُمِرُوا
أَن يَكْفُرُوا بِهِ وَيُرِيدُ الشَّيْطَانُ أَن
يُضِلَّهُمْ ضَلَالًا بَعِيدًا ﴿٦٠﴾

61. ಅಲ್ಲಾಹನು ಅವತೀರ್ಣಗೊಳಿಸಿದುದರ ಕಡೆಗೆ ಬನ್ನಿರಿ ಮತ್ತು ಸಂದೇಶವಾಹಕರ ಕಡೆಗೆ ಬನ್ನಿರಿ ಎಂದು ಅವರೊಡನೆ ಹೇಳಿದಾಗ ಈ ಕಪಟವಿಶ್ವಾಸಿಗಳು ನಿಮ್ಮ ಬಳಿಗೆ ಬರುವುದರಿಂದ ಜಾರಿಕೊಳ್ಳುತ್ತಿರುವುದನ್ನು ನೀವು ನೋಡುತ್ತೀರಿ.

وَإِذَا قِيلَ لَهُمْ تَعَالَوْا إِلَىٰ مَا أَنزَلَ اللَّهُ
وَإِلَى الرَّسُولِ رَأَيْتَ الْمُنَافِقِينَ يَصُدُّونَ
عَنكَ صُدُودًا ﴿٦١﴾

62. ಇವರು ತಮ್ಮ ಸ್ವಹಸ್ತಗಳಿಂದ ತಂದ ವಿಪತ್ತು ಇವರ ಮೇಲೆರಗಿದಾಗ ಏನಾಗುತ್ತದೆ? ಆಗ ಇವರು ನಿಮ್ಮ ಬಳಿ ಪ್ರಮಾಣ ಮಾಡುತ್ತ ಬಂದು, "ನಾವಂತು ದೇವನಾಣೆಗೂ ಒಳಿತನ್ನೇ ಬಯಸುತ್ತಿದ್ದೆವು ಮತ್ತು ನಮ್ಮ ಉದ್ದೇಶವು ಉಭಯತ್ರರೊಳಗೆ ಹೇಗಾದರೂ ಸಾಮರಸ್ಯವೇರ್ಪಡಿಸುವುದೇ ಆಗಿತ್ತು" ಎಂದು ಹೇಳುತ್ತಾರೆ.

فَكَيْفَ إِذَا أَصَابَتْهُم مُّصِيبَةٌ بِمَا قَدَّمَتْ
أَيْدِيهِمْ ثُمَّ جَاءُوكَ يَحْلِفُونَ بِاللَّهِ
إِنْ أَرَدْنَا إِلَّا إِحْسَانًا وَتَوْفِيقًا ﴿٦٢﴾

63. ಅವರ ಮನಸ್ಸಿನಲ್ಲಿರುವುದೆಲ್ಲಾ ಅಲ್ಲಾಹನಿಗೆ ತಿಳಿದಿದೆ. ಅವರೊಂದಿಗೆ ಪ್ರತಿರೋಧಿಸಬೇಡಿರಿ. ಅವರಿಗೆ ತಿಳಿಯ ಹೇಳಿರಿ ಮತ್ತು ಅವರ ಮನಸ್ಸಿಗೆ ನಾಟುವಂತಹ ಉಪದೇಶ ಕೊಡಿರಿ.

أُولَٰئِكَ الَّذِينَ يَعْلَمُ اللَّهُ مَا فِي قُلُوبِهِمْ
فَأَعْرِضْ عَنْهُمْ وَعِظْهُمْ وَقُل لَّهُمْ فِي
أَنفُسِهِمْ قَوْلًا بَلِيغًا ﴿٦٣﴾

ಮೂರನೆಯದಾಗಿದೆ. 'ಉಲುಲ್ ಅಮ್ರ್' ಎಂದರೆ ಮುಸ್ಲಿಮರ ಸಾಮೂಹಿಕ ವ್ಯವಹಾರಗಳ ನಾಯಕತ್ವ ವಹಿಸುವವರೆಲ್ಲರೂ ಆಗಿದ್ದಾರೆ. ಅವರು ವಿದ್ವಾಂಸರಾಗಿರಬಹುದು, ರಾಜಕೀಯ ಮಾರ್ಗದರ್ಶನ ನೀಡುವ ನಾಯಕರಾಗಿರಬಹುದು, ದೇಶದ ವ್ಯವಸ್ಥೆಯನ್ನು ಕಾಪಾಡುವ ಅಧಿಕಾರಿಗಳಾಗಿರಬಹುದು, ನ್ಯಾಯ ತೀರ್ಮಾನ ಮಾಡುವ ನ್ಯಾಯಾಧೀಶರಾಗಿರಬಹುದು, ನಾಗರಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಗೋತ್ರಗಳು, ಜನವಾಸ ಪ್ರದೇಶಗಳು ಮತ್ತು ಮೊಹಲ್ಲಾಗಳ ನೇತೃತ್ವ ವಹಿಸುವ ಸರದಾರರಾಗಿರಬಹುದು.

4. ದೇವಾದೇಶ ಮತ್ತು ಪ್ರವಾದಿಚರ್ಯೆ, ಮೂಲಭೂತ ಕಾನೂನು ಮತ್ತು ಅಂತಿಮ ಪ್ರಮಾಣಗಳಾಗಿವೆ. ಮುಸ್ಲಿಮರ ಮಧ್ಯೆ ಅಥವಾ ಸರ್ಕಾರ ಮತ್ತು ಜನರ ನಡುವೆ ಯಾವುದೇ ವಿಷಯದಲ್ಲಿ ಸಮಸ್ಯೆ ತಲೆದೋರಿದರೆ ತೀರ್ಮಾನಕ್ಕಾಗಿ ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಮೊರೆ ಹೋಗಬೇಕಾಗುವುದು. ಅಲ್ಲಿಂದ ಸಿಗುವ ಯಾವುದೇ ತೀರ್ಮಾನವನ್ನು ಎಲ್ಲರೂ ಶಿರಸಾವಹಿಸಿ ಪಾಲಿಸಬೇಕಾಗುವುದು.

55. ಇಲ್ಲಿ 'ತಾಗೂತ್' ಎಂದರೆ ಅಲ್ಲಾಹನ ಕಾನೂನಿನ ವಿನಾ ಇತರರ ಕಾನೂನುಗಳ ಆಧಾರದಲ್ಲಿ ತೀರ್ಮಾನಿಸುವ ಅಧಿಕಾರಿ ಮತ್ತು ಅಲ್ಲಾಹನ ಸಾರ್ವಭೌಮತೆಯನ್ನು ಮತ್ತು ಪ್ರವಾದಿಚರ್ಯೆಯೇ ಅಂತಿಮ ಪ್ರಮಾಣ ಎಂಬುದನ್ನು ಸಮ್ಮತಿಸದ ನ್ಯಾಯಾಂಗವಾಗಿದೆ ಎಂದು ಸ್ಪಷ್ಟವಾಗುತ್ತದೆ.

64. ನಾವು ಪ್ರತಿಯೊಬ್ಬ ಸಂದೇಶವಾಹಕನನ್ನೂ ಅಲ್ಲಾಹನ ಆಜ್ಞೆ ಪ್ರಕಾರ ಅನುಸರಿಸಲ್ಪಡಲಿಕ್ಕಾಗಿಯೇ ಕಳುಹಿಸಿರುತ್ತೇವೆ (ಎಂದು ಅವರಿಗೆ ತಿಳಿಯಹೇಳಿರಿ.) ಅವರು ತಮ್ಮ ಮೇಲೆ ತಾವೇ ಅಕ್ರಮವೆಸಗಿದಾಗ ನಿಮ್ಮ ಬಳಿಗೆ ಬಂದು ಅಲ್ಲಾಹನೊಡನೆ ಕ್ಷಮಾಯಾಚನೆ ಮಾಡುತ್ತಿದ್ದರೆ ಮತ್ತು ಸಂದೇಶವಾಹಕರೂ ಅವರಿಗಾಗಿ ಕ್ಷಮೆ ಬೇಡುತ್ತಿದ್ದರೆ, ಖಂಡಿತವಾಗಿಯೂ ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುವುದನ್ನು ಅವರು ಕಾಣುತ್ತಿದ್ದರು.

وَمَآ أَرْسَلْنَا مِن رَّسُولٍ إِلَّا لِيُطَاعَ بِإِذْنِ ٱللَّهِ ۚ وَلَوْ أَنَّهُمْ إِذ ظَّلَمُوٓا۟ أَنفُسَهُمْ جَآءُوكَ فَٱسْتَغْفَرُوا۟ ٱللَّهَ وَٱسْتَغْفَرَ لَهُمُ ٱلرَّسُولُ لَوَجَدُوا۟ ٱللَّهَ تَوَّابًا رَّحِيمًا ﴿٦٤﴾

65. ಓ ಮುಹಮ್ಮದರೇ! ನಿಮ್ಮ ಪ್ರಭುವಿನಾಣೆ, ಇವರು ತಮ್ಮೊಳಗಿನ ಭಿನ್ನಾಭಿಪ್ರಾಯಗಳಲ್ಲಿ ನಿಮ್ಮನ್ನು ತೀರ್ಪು ನೀಡುವವರೆಂದು ಒಪ್ಪಿಕೊಂಡು ಆ ಬಳಿಕ ನೀವು ಕೊಟ್ಟ ತೀರ್ಪಿನ ಬಗ್ಗೆ ತಮ್ಮ ಮನಸ್ಸಿನಲ್ಲೂ ಯಾವುದೇ ಸಂಕೋಚ ಪಡದೆ ಅದನ್ನು ಸರ್ವ ಸಂಪೂರ್ಣವಾಗಿ ಒಪ್ಪಿಕೊಳ್ಳುವವರೆಗೂ ಅವರು ಖಂಡಿತ ಸತ್ಯವಿಶ್ವಾಸಿಗಳಾಗಲಾರರು.

فَلَا وَرَبِّكَ لَا يُؤْمِنُونَ حَتَّىٰ يُحَكِّمُوكَ فِيمَا شَجَرَ بَيْنَهُمْ ثُمَّ لَا يَجِدُوا۟ فِىٓ أَنفُسِهِمْ حَرَجًا مِّمَّا قَضَيْتَ وَيُسَلِّمُوا۟ تَسْلِيمًا ﴿٦٥﴾

66. ನೀವು ಪ್ರಾಣಾರ್ಪಣೆ ಮಾಡಿಕೊಳ್ಳಿರಿ ಅಥವಾ ನಿಮ್ಮ ಮನೆಗಳನ್ನು ಬಿಟ್ಟು ಹೊರ ನಡೆಯಿರಿ ಎಂದು ನಾವು ಅವರಿಗೆ ಆಜ್ಞಾಪಿಸಿರುತ್ತಿದ್ದರೆ, ಅವರಲ್ಲಿ ಕೆಲವೇ ಮಂದಿ ಹಾಗೆ ಮಾಡುತ್ತಿದ್ದರು. ವಸ್ತುತಃ ಅವರಿಗೆ ಉಪದೇಶಿಸಲ್ಪಟ್ಟಂತೆ ಅವರು ನಡೆಯುತ್ತಿದ್ದರೆ ಅದು ಅವರ ಮಟ್ಟಿಗೆ ಅತ್ಯುತ್ತಮವೂ ಹೆಚ್ಚು ಸ್ಥಿರತೆಗೆ ಕಾರಣವೂ ಆಗುತ್ತಿತ್ತು.

وَلَوْ أَنَّا كَتَبْنَا عَلَيْهِمْ أَنِ ٱقْتُلُوٓا۟ أَنفُسَكُمْ أَوِ ٱخْرُجُوا۟ مِن دِيَٰرِكُم مَّا فَعَلُوهُ إِلَّا قَلِيلٌ مِّنْهُمْ ۖ وَلَوْ أَنَّهُمْ فَعَلُوا۟ مَا يُوعَظُونَ بِهِۦ لَكَانَ خَيْرًا لَّهُمْ وَأَشَدَّ تَثْبِيتًا ﴿٦٦﴾

67. ಅವರು ಹಾಗೆ ಮಾಡುತ್ತಿದ್ದರೆ ನಾವು ಅವರಿಗೆ ನಮ್ಮ ಕಡೆಯಿಂದ ಮಹಾ ಪ್ರತಿಫಲ ನೀಡುತ್ತಿದ್ದೆವು-

وَإِذًا لَّءَاتَيْنَٰهُم مِّن لَّدُنَّآ أَجْرًا عَظِيمًا ﴿٦٧﴾

68. ಮತ್ತು ನಾವು ಅವರಿಗೆ ನೇರ ಮಾರ್ಗ ತೋರಿಸುತ್ತಿದ್ದೆವು.

وَلَهَدَيْنَٰهُمْ صِرَٰطًا مُّسْتَقِيمًا ﴿٦٨﴾

69. ಅಲ್ಲಾಹ್ ಮತ್ತು ಸಂದೇಶವಾಹಕರನ್ನು ಅನುಸರಿಸುವವರು ಅಲ್ಲಾಹನಿಂದ ಸಕಲ ಸೌಭಾಗ್ಯಗಳನ್ನು ಹೊಂದಿದ ಪ್ರವಾದಿಗಳ, ಸತ್ಯಸಂಧರ, ಹುತಾತ್ಮರ ಮತ್ತು ಸಜ್ಜನರ[56] ಸಹವಾಸದಲ್ಲಿರುವರು. ಅದೆಂತಹ ಉತ್ತಮ ಸಂಗಾತಿಗಳವರು!

وَمَن يُطِعِ ٱللَّهَ وَٱلرَّسُولَ فَأُو۟لَٰٓئِكَ مَعَ ٱلَّذِينَ أَنْعَمَ ٱللَّهُ عَلَيْهِم مِّنَ ٱلنَّبِيِّۦنَ وَٱلصِّدِّيقِينَ وَٱلشُّهَدَآءِ وَٱلصَّٰلِحِينَ ۚ وَحَسُنَ أُو۟لَٰٓئِكَ رَفِيقًا ﴿٦٩﴾

56. ಅರ್ಥಾತ್- ಪರಲೋಕದಲ್ಲಿ ಅವರು ಅಂತಹವರ ಜತೆಗಿರುವರು. ತಮ್ಮ ಕರ್ಮದ ನಿಮಿತ್ತ ಅವರ ಪೈಕಿ ಯಾರಾದರೂ ಪ್ರವಾದಿಯಾಗಿ ಮಾರ್ಪಡುವನೆಂದು ಸರ್ವಥಾ ಇದರ ಅರ್ಥವಲ್ಲ.

70. ಇದು ಅಲ್ಲಾಹನ ಕಡೆಯಿಂದ ಒದಗುವ ನೈಜ ಅನುಗ್ರಹವಾಗಿರುತ್ತದೆ. ನಿಜಸ್ಥಿತಿಯನ್ನರಿಯಲು ಅಲ್ಲಾಹನ ದಿವ್ಯ ಜ್ಞಾನವೇ ಸಾಕು.

ذٰلِكَ الْفَضْلُ مِنَ اللّٰهِ ۭ وَكَفٰى بِاللّٰهِ عَلِيْمًا ﴿٧٠﴾

71. ಓ ಸತ್ಯವಿಶ್ವಾಸಿಗಳೇ, ಪ್ರತಿರೋಧಕ್ಕೆ ಸದಾ ಸಜ್ಜಾಗಿರಿ. ಅನಂತರ ಸಂದರ್ಭಕ್ಕನುಸಾರವಾಗಿ ಪ್ರತ್ಯಪ್ರತ್ಯೇಕ ಸೇನಾ ತುಕಡಿಗಳಾಗಿ ಅಥವಾ ಒಟ್ಟಾಗಿ ಹೊರಡಿರಿ.[57]

يٰٓاَيُّهَا الَّذِيْنَ اٰمَنُوْا خُذُوْا حِذْرَكُمْ فَانْفِرُوْا
ثُبَاتٍ اَوِ انْفِرُوْا جَمِيْعًا ﴿٧١﴾

72. ನಿಶ್ಚಯವಾಗಿಯೂ ನಿಮ್ಮಲ್ಲಿ ಯುದ್ಧದಿಂದ ತಪ್ಪಿಸಿಕೊಳ್ಳುವವನೂ ಇದ್ದಾನೆ. ನಿಮ್ಮ ಮೇಲೆ ವಿಪತ್ತೇನಾದರೂ ಬಂದರೆ ಅವನು, "ನಾನು ಇವರ ಸಂಗಡ ಹೋಗದಿದ್ದುದು ನನ್ನ ಮೇಲೆ ಅಲ್ಲಾಹನ ಮಹಾ ಅನುಗ್ರಹವಾಯಿತು" ಎಂದು ಹೇಳುತ್ತಾನೆ.

وَاِنَّ مِنْكُمْ لَمَنْ لَّيُبَطِّئَنَّ ۚ فَاِنْ اَصَابَتْكُمْ
مُّصِيْبَةٌ قَالَ قَدْ اَنْعَمَ اللّٰهُ عَلَيَّ اِذْ لَمْ
اَكُنْ مَّعَهُمْ شَهِيْدًا ﴿٧٢﴾

73. ಅಲ್ಲಾಹನ ಕಡೆಯಿಂದ ನಿಮ್ಮ ಮೇಲೆ ಅನುಗ್ರಹವುಂಟಾದರೆ, ಈ ಮುಂಚೆ ನಿಮ್ಮ ಮತ್ತು ಅವನ ನಡುವೆ ಗೆಳೆತನದ ಸಂಬಂಧವೇ ಇರಲಿಲ್ಲವೋ ಎಂಬಂತೆ, "ಅಕಟ! ನಾನೂ ಅವರ ಜೊತೆ ಸೇರಿರುತ್ತಿದ್ದರೆ ನನಗೂ ಹಿರಿದಾದ ಯಶಸ್ಸು ಪ್ರಾಪ್ತವಾಗುತ್ತಿತ್ತು" ಎಂದು ಹೇಳುತ್ತಾನೆ.

وَلَىِٕنْ اَصَابَكُمْ فَضْلٌ مِّنَ اللّٰهِ لَيَقُوْلَنَّ
كَاَنْ لَّمْ تَكُنْۢ بَيْنَكُمْ وَبَيْنَهٗ مَوَدَّةٌ يّٰلَيْتَنِيْ
كُنْتُ مَعَهُمْ فَاَفُوْزَ فَوْزًا عَظِيْمًا ﴿٧٣﴾

74. (ಇಂತಹವರು ತಿಳಿದಿರಬೇಕು) ಪರಲೋಕ ಜೀವನದ ಬದಲಿಗೆ ಇಹಜೀವನವನ್ನು ಮಾರಿದವರು ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕು. ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವವನು ವಧಿಸಲ್ಪಡಲಿ ಅಥವಾ ವಿಜಯಗಳಿಸಲಿ - ಅವನಿಗೆ ನಾವು ಖಂಡಿತವಾಗಿಯೂ ಉನ್ನತವಾದ ಪ್ರತಿಫಲ ನೀಡುವೆವು.

فَلْيُقَاتِلْ فِيْ سَبِيْلِ اللّٰهِ الَّذِيْنَ يَشْرُوْنَ
الْحَيٰوةَ الدُّنْيَا بِالْاٰخِرَةِ ۭ وَمَنْ يُّقَاتِلْ
فِيْ سَبِيْلِ اللّٰهِ فَيُقْتَلْ اَوْ يَغْلِبْ فَسَوْفَ
نُؤْتِيْهِ اَجْرًا عَظِيْمًا ﴿٧٤﴾

75. "ಓ ನಮ್ಮ ಪ್ರಭೂ, ಅಕ್ರಮಿಗಳು ವಾಸಿಸುವ ಈ ನಾಡಿನಿಂದ ನಮ್ಮನ್ನು ಹೊರ ತೆಗೆ. ನೀನು ನಿನ್ನ ಕಡೆಯಿಂದ ನಮಗೊಬ್ಬ ಮೇಲ್ವಿಚಾರಕನನ್ನು ಮತ್ತು ಒಬ್ಬ ಸಹಾಯಕನನ್ನು ನಿಯೋಜಿಸು"[58]

وَمَا لَكُمْ لَا تُقَاتِلُوْنَ فِيْ سَبِيْلِ اللّٰهِ
وَالْمُسْتَضْعَفِيْنَ مِنَ الرِّجَالِ وَالنِّسَاۗءِ
وَالْوِلْدَانِ الَّذِيْنَ يَقُوْلُوْنَ رَبَّنَآ اَخْرِجْنَا

57. ಉಹುದ್ ಯುದ್ಧದಲ್ಲಿ ಮುಸ್ಲಿಮರು ಸೋಲನುಭವಿಸಿದ ಕಾರಣ ಸುತ್ತಮುತ್ತಲಿನ ಗೋತ್ರಗಳು ಹೆಚ್ಚು ಧೈರ್ಯ ತಾಳಿದ್ದರು. ಮುಸ್ಲಿಮರು ನಾಲ್ಕು ನಿಟ್ಟಿನಿಂದ ಅಪಾಯವನ್ನು ಎದುರಿಸುತ್ತಿದ್ದರು. ಆ ಕಾಲದಲ್ಲೇ ಈ ಆದೇಶ ಅವತೀರ್ಣಗೊಂಡಿತ್ತು.

58. ಇದು ಮಕ್ಕಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಸ್ಲಾಮ್ ಸ್ವೀಕರಿಸಿದ್ದ ಮಹಿಳೆಯರು, ಮಕ್ಕಳು ಮತ್ತು ಪುರುಷರ ಕಡೆಗಿರುವ ಸೂಚನೆ. ಅವರು ವಲಸೆ ಹೋಗಲಿಕ್ಕೂ ಶಕ್ತರಿರಲಿಲ್ಲ. ಅಂತೆಯೇ ಶೋಷಣೆಯಿಂದ ತಪ್ಪಿಸಿಕೊಳ್ಳಲಿಕ್ಕೂ ಅವರಿಗೆ ಸಾಧ್ಯವಿರಲಿಲ್ಲ. ಅವರು ನಾನಾ ರೀತಿಯ ಚಿತ್ರಹಿಂಸೆಗೆ ಒಳಗಾಗಿದ್ದರು. ಯಾರಾದರೂ ತಮ್ಮನ್ನು ಈ ಅನ್ಯಾಯದಿಂದ ರಕ್ಷಿಸಲಿ ಎಂದು ಅವರು ಮೊರೆಯಿಡುತ್ತಿದ್ದರು.

ಎಂದು ಮೊರೆಯಿಡುತ್ತಿರುವ ಮರ್ದನಕ್ಕೊಳಗಾದ ಪುರುಷರು, ಸ್ತ್ರೀಯರು ಮತ್ತು ಮಕ್ಕಳಿಗಾಗಿ, ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡದಿರಲು ಕಾರಣವೇನು?

مِنْ هٰذِهِ الْقَرْيَةِ الظَّالِمِ اَهْلُهَا ۚ
وَاجْعَلْ لَّنَا مِنْ لَّدُنْكَ وَلِيًّا ۚ وَّاجْعَلْ
لَّنَا مِنْ لَّدُنْكَ نَصِيْرًا ۝٧٥

76 ಸತ್ಯವಿಶ್ವಾಸ ಕೈಗೊಂಡವರು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುತ್ತಾರೆ ಮತ್ತು ಸತ್ಯನಿಷೇಧವನ್ನು ಕೈಗೊಂಡವರು 'ತಾಗೂತ್'(ಬಂಡುಕೋರ)ನ ಮಾರ್ಗದಲ್ಲಿ ಯುದ್ಧ ಮಾಡುತ್ತಾರೆ. ಆದುದರಿಂದ ನೀವು ಶೈತಾನನ ಸಂಗಡಿಗರೊಡನೆ ಹೋರಾಡಿರಿ. ಶೈತಾನನ ಕುತಂತ್ರಗಳು ವಾಸ್ತವದಲ್ಲಿ ಬಹಳ ದುರ್ಬಲವೆಂಬುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ.

اَلَّذِيْنَ اٰمَنُوْا يُقَاتِلُوْنَ فِيْ سَبِيْلِ اللّٰهِ ۚ
وَالَّذِيْنَ كَفَرُوْا يُقَاتِلُوْنَ فِيْ سَبِيْلِ
الطَّاغُوْتِ فَقَاتِلُوْٓا اَوْلِيَآءَ الشَّيْطٰنِ ۚ اِنَّ
كَيْدَ الشَّيْطٰنِ كَانَ ضَعِيْفًا ۝٧٦

77. "ನಿಮ್ಮ ಕೈಗಳನ್ನು ತಡೆಹಿಡಿದುಕೊಳ್ಳಿರಿ. ನಮಾಝನ್ನು ಸಂಸ್ಥಾಪಿಸಿರಿ ಮತ್ತು ಝಕಾತ್ ಕೊಡಿರಿ" ಎಂದು ಆದೇಶಿಸಲ್ಪಟ್ಟವರನ್ನು ನೀವು ಕಂಡಿರಾ? ಈಗ ಅವರಿಗೆ ಯುದ್ಧದ ಆಜ್ಞೆ ಕೊಡಲ್ಪಟ್ಟಾಗ ಅವರಲ್ಲೊಂದು ಪಂಗಡವು ಅಲ್ಲಾಹನನ್ನು ಭಯಪಡಬೇಕಾದ ರೀತಿಯಲ್ಲಿ ಅಥವಾ ಅದಕ್ಕಿಂತಲೂ ತುಸು ಹೆಚ್ಚೇ ಜನರನ್ನು ಭಯಪಡುತ್ತದೆ. "ಪ್ರಭೂ, ನಮ್ಮ ಮೇಲೆ ನೀನೇಕೆ ಯುದ್ಧವನ್ನು ನಿರ್ಬಂಧಗೊಳಿಸಿದೆ? ನಮಗೆ ಇನ್ನೂ ಸ್ವಲ್ಪ ಕಾಲಾವಕಾಶವನ್ನೇಕೆ ನೀಡಲಿಲ್ಲ?" ಎಂದು ಕೇಳುತ್ತಾರೆ. ಅವರೊಡನೆ ಹೇಳಿರಿ, "ಐಹಿಕ ಜೀವನದ ಬಂಡವಾಳವು ಅತ್ಯಲ್ಪವಾಗಿದೆ ಮತ್ತು ದೇವಭಯವುಳ್ಳವನಿಗೆ ಪರಲೋಕವು ಹೆಚ್ಚು ಉತ್ತಮವಾಗಿದೆ ಮತ್ತು ನಿಮ್ಮ ಮೇಲೆ ಕಿಂಚಿತ್ತೂ ಅಕ್ರಮ ನಡೆಯದು.[59]

اَلَمْ تَرَ اِلَى الَّذِيْنَ قِيْلَ لَهُمْ كُفُّوْٓا اَيْدِيَكُمْ
وَاَقِيْمُوا الصَّلٰوةَ وَاٰتُوا الزَّكٰوةَ ۚ فَلَمَّا
كُتِبَ عَلَيْهِمُ الْقِتَالُ اِذَا فَرِيْقٌ مِّنْهُمْ
يَخْشَوْنَ النَّاسَ كَخَشْيَةِ اللّٰهِ اَوْ اَشَدَّ
خَشْيَةً ۚ وَقَالُوْا رَبَّنَا لِمَ كَتَبْتَ عَلَيْنَا
الْقِتَالَ ۚ لَوْلَآ اَخَّرْتَنَآ اِلٰٓى اَجَلٍ قَرِيْبٍ ۗ
قُلْ مَتَاعُ الدُّنْيَا قَلِيْلٌ ۚ وَالْاٰخِرَةُ خَيْرٌ
لِّمَنِ اتَّقٰى ۗ وَلَا تُظْلَمُوْنَ فَتِيْلًا ۝٧٧

78. ಇನ್ನು ಮರಣವಂತು ನೀವು ಎಂತಹ ಭದ್ರ ಕೋಟೆಯೊಳಗಿದ್ದರೂ ನಿಮಗೆ ಬಂದೇ ತೀರುವುದು." ಅವರಿಗೇನಾದರೂ ಲಾಭವುಂಟಾದರೆ, "ಇದು ಅಲ್ಲಾಹನ ಕಡೆಯಿಂದ" ಎನ್ನುತ್ತಾರೆ. ನಷ್ಟವುಂಟಾದರೆ, "ಓ ಪೈಗಂಬರರೇ, ಇದು ನಿಮ್ಮಿಂದಾಗಿ ಉಂಟಾಗಿರುತ್ತದೆ" ಎನ್ನುತ್ತಾರೆ. ಎಲ್ಲವೂ ಅಲ್ಲಾಹನ ಕಡೆಯಿಂದಲೇ ಆಗಿದೆ ಎಂದು ಹೇಳಿರಿ. ಇವರಿಗೆ ಏನಾಗಿ ಬಿಟ್ಟಿದೆ? ಇವರಿಗೆ ಯಾವ ವಿಷಯವೂ ತಿಳಿಯುವುದಿಲ್ಲವಲ್ಲ!

اَيْنَ مَا تَكُوْنُوْا يُدْرِكْكُّمُ الْمَوْتُ وَلَوْ كُنْتُمْ
فِيْ بُرُوْجٍ مُّشَيَّدَةٍ ۗ وَاِنْ تُصِبْهُمْ حَسَنَةٌ
يَّقُوْلُوْا هٰذِهٖ مِنْ عِنْدِ اللّٰهِ ۚ وَاِنْ تُصِبْهُمْ
سَيِّئَةٌ يَّقُوْلُوْا هٰذِهٖ مِنْ عِنْدِكَ ۗ قُلْ كُلٌّ
مِّنْ عِنْدِ اللّٰهِ ۗ فَمَالِ هٰٓؤُلَآءِ الْقَوْمِ لَا
يَكَادُوْنَ يَفْقَهُوْنَ حَدِيْثًا ۝٧٨

79. ಓ ಮಾನವಾ, ನಿನಗೊದಗುವ ಪ್ರತಿಯೊಂದು ಒಳಿತೂ ಅಲ್ಲಾಹನ ಕೃಪೆಯಿಂದ ಒದಗುತ್ತದೆ ಮತ್ತು ನಿನಗೊದಗುವ ಪ್ರತಿಯೊಂದು

مَآ اَصَابَكَ مِنْ حَسَنَةٍ فَمِنَ اللّٰهِ ۫ وَمَآ
اَصَابَكَ مِنْ سَيِّئَةٍ فَمِنْ نَّفْسِكَ ۗ وَاَرْسَلْنٰكَ

59. ಅರ್ಥಾತ್- ನೀವು ಅಲ್ಲಾಹನ ಧರ್ಮದ ಸೇವೆಗೈದರೆ ಮತ್ತು ಅವನ ಮಾರ್ಗದಲ್ಲಿ ಜೀವದ ಹಂಗು ತೊರೆದು ಹೋರಾಡಿದರೆ ಅಲ್ಲಾಹನ ಬಳಿಯಿಂದ ನಿಮಗಿರುವ ಪ್ರತಿಫಲವೇನೂ ನಷ್ಟವಾಗುವುದಿಲ್ಲ.

لِلنَّاسِ رَسُولًا ۚ وَكَفَىٰ بِاللَّهِ شَهِيدًا ﴿٧٩﴾

ವಿಪತ್ತೂ ನಿನ್ನ ಕರ್ಮದಿಂದಾಗಿರುತ್ತದೆ. ಓ ಮುಹಮ್ಮದ್‌ರೇ, ನಾವು ನಿಮ್ಮನ್ನು ಮಾನವರಿಗಾಗಿ ಸಂದೇಶವಾಹಕರಾಗಿ ರವಾನಿಸಿರುತ್ತೇವೆ. ಇದರ ಬಗ್ಗೆ ಅಲ್ಲಾಹನ ಸಾಕ್ಷ್ಯವೇ ಸಾಕು.

مَّن يُطِعِ الرَّسُولَ فَقَدْ أَطَاعَ اللَّهَ ۖ وَمَن
تَوَلَّىٰ فَمَا أَرْسَلْنَاكَ عَلَيْهِمْ حَفِيظًا ﴿٨٠﴾

80. ಸಂದೇಶವಾಹಕನನ್ನು ಅನುಸರಿಸಿದವನು ವಾಸ್ತವದಲ್ಲಿ ಅಲ್ಲಾಹನನ್ನು ಅನುಸರಿಸಿದನು. ಯಾವನಾದರೂ ವಿಮುಖನಾಗಿ ಬಿಟ್ಟರೆ, ನಾವು ನಿಮ್ಮನ್ನು ಅವರ ಮೇಲೆ ರಕ್ಷಕರನ್ನಾಗಿ ಮಾಡಿಯಂತು ಕಳುಹಿಸಿರುವುದಿಲ್ಲ.

وَيَقُولُونَ طَاعَةٌ فَإِذَا بَرَزُوا مِنْ عِندِكَ
بَيَّتَ طَائِفَةٌ مِّنْهُمْ غَيْرَ الَّذِي تَقُولُ ۖ وَاللَّهُ
يَكْتُبُ مَا يُبَيِّتُونَ ۖ فَأَعْرِضْ عَنْهُمْ وَتَوَكَّلْ
عَلَى اللَّهِ ۚ وَكَفَىٰ بِاللَّهِ وَكِيلًا ﴿٨١﴾

81. ಅವರು ಮುಖತಃ, "ನಾವು ಆಜ್ಞಾಪಾಲಕರು" ಎನ್ನುತ್ತಾರೆ. ಆದರೆ ನಿಮ್ಮನ್ನು ಬಿಟ್ಟಗಲಿದಾಗ ಅವರಲ್ಲೊಂದು ಪಂಗಡವು ರಾತ್ರಿ ಕಾಲದಲ್ಲಿ ಒಟ್ಟು ಸೇರಿ ನಿಮ್ಮ ಮಾತುಗಳಿಗೆ ವಿರುದ್ಧ ಒಳಸಂಚು ನಡೆಸುತ್ತದೆ. ಅಲ್ಲಾಹ್ ಅವರ ಈ ಎಲ್ಲಾ ಗುಪ್ತ ಮಾತುಗಳನ್ನು ಬರೆದಿಡುತ್ತಾನೆ. ನೀವು ಅವರನ್ನು ನಿರ್ಲಕ್ಷಿಸಿರಿ ಮತ್ತು ಅಲ್ಲಾಹನ ಮೇಲೆ ಭರವಸೆ ಇಡಿರಿ. ಭರವಸೆಗೆ ಅವನೇ ಸಾಕು.

أَفَلَا يَتَدَبَّرُونَ الْقُرْآنَ ۚ وَلَوْ كَانَ مِنْ
عِندِ غَيْرِ اللَّهِ لَوَجَدُوا فِيهِ اخْتِلَافًا كَثِيرًا ﴿٨٢﴾

82. ಇವರೇನು ಕುರ್‌ಆನಿನ ಬಗ್ಗೆ ಚಿಂತನೆ ನಡೆಸುವುದಿಲ್ಲವೇ? ಇದು ಅಲ್ಲಾಹನ ಹೊರತು ಇನ್ನಾರ ಕಡೆಯಿಂದಾದರೂ ಆಗಿರುತ್ತಿದ್ದರೆ ಇದರಲ್ಲಿ ಅನೇಕ ವಿರೋಧಾಭಾಸಗಳು ಕಂಡು ಬರುತ್ತಿದ್ದುವು.[60]

وَإِذَا جَاءَهُمْ أَمْرٌ مِّنَ الْأَمْنِ أَوِ الْخَوْفِ
أَذَاعُوا بِهِ ۖ وَلَوْ رَدُّوهُ إِلَى الرَّسُولِ وَإِلَىٰ
أُولِي الْأَمْرِ مِنْهُمْ لَعَلِمَهُ الَّذِينَ يَسْتَنبِطُونَهُ
مِنْهُمْ ۗ وَلَوْلَا فَضْلُ اللَّهِ عَلَيْكُمْ وَرَحْمَتُهُ
لَاتَّبَعْتُمُ الشَّيْطَانَ إِلَّا قَلِيلًا ﴿٨٣﴾

83. ಇವರು ಯಾವುದಾದರೂ ಶಾಂತಿ ಅಥವಾ ಭೀತಿಯ ವಾರ್ತೆ ಕೇಳಿದಾಗ ಅದನ್ನೆತ್ತಿಕೊಂಡು ಪ್ರಚಾರ ಮಾಡುತ್ತಾರೆ. ನಿಜವಾಗಿ ಇವರು, ಅದನ್ನು ಸಂದೇಶವಾಹಕರಿಗೆ ಅಥವಾ ತಮ್ಮ ಸಂಘಟನೆಯ ಹೊಣೆಗಾರ ವ್ಯಕ್ತಿಗಳಿಗೆ ತಲಪಿಸುತ್ತಿದ್ದರೆ, ಅದರ ಬಗ್ಗೆ ಸರಿಯಾದ ಫಲಿತಾಂಶ ಗ್ರಹಿಸುವ ಅರ್ಹತೆ ಹೊಂದಿದವರು ಅದನ್ನು ಗ್ರಹಿಸಿಕೊಳ್ಳುತ್ತಿದ್ದರು.[61] ನಿಮ್ಮ ಮೇಲೆ ಅಲ್ಲಾಹನ ಅನುಗ್ರಹವೂ ಕೃಪೆಯೂ ಇಲ್ಲದಿರುತ್ತಿದ್ದರೆ ಕೇವಲ ಕೆಲವೇ ಮಂದಿಯ ಹೊರತು (ನಿಮ್ಮ ದೌರ್ಬಲ್ಯಗಳ ಕಾರಣದಿಂದ) ನೀವೆಲ್ಲ ಶೈತಾನನನ್ನು ಅನುಸರಿಸುತ್ತಿದ್ದಿರಿ.

60. ಇವು ಅಲ್ಲಾಹನ ಹೊರತು ಇನ್ನಾರ ವಚನಗಳಾಗಿರಲು ಸಾಧ್ಯವಿಲ್ಲವೆಂದು ಸ್ವತಃ ಈ ವಚನಗಳೇ ಸಾಕ್ಷ್ಯ ನುಡಿಯುತ್ತಿವೆ. ಅನೇಕ ವರ್ಷಗಳ ಕಾಲ ವಿವಿಧ ಕಾಲ ಮತ್ತು ಸಂದರ್ಭಗಳಲ್ಲಿ ಅನೇಕ ವಿಷಯಗಳ ಬಗ್ಗೆ ಭಾಷಣ ಮಾಡುತ್ತಾ ಹೋಗುವ ಯಾವುದೇ ವ್ಯಕ್ತಿಯ ಭಾಷಣ ಸಾದ್ಯಂತ ಸಮಾನ ಮತ್ತು ತದ್ರೂಪವಾಗಿರುವ ಸಂಕಲನವಾಗಲು ಸಾಧ್ಯವೇ ಇಲ್ಲ. ಅದರಲ್ಲೂ ವ್ಯತ್ಯಸ್ತ ಅಭಿಪ್ರಾಯದ ಲಕ್ಷಣಗಳಿಲ್ಲದ, ವಚನಕಾರನ ಮನದಿಂಗಿತ ಭಿನ್ನ ವರ್ಣಗಳಲ್ಲಿ ಗೋಚರಿಸದ, ಮರುಪರಿಶೀಲನೆಯ ಅಗತ್ಯವೇ ಕಂಡು ಬರದ ವಚನಗಳ ಸಂಕಲನವನ್ನು ಯಾರೂ ರಚಿಸಲಾರ.

61. ಅದು ಗೊಂದಲ ವ್ಯಾಪಕವಾಗಿದ್ದ ಕಾಲ. ಆದ್ದರಿಂದ ನಾಲ್ದೆಸೆಯಲ್ಲೂ ಊಹಾಪೋಹಗಳು ಹರಡಿದ್ದವು. ಕೆಲವೊಮ್ಮೆ ಅಪಾಯ ಎದುರಾಗಿರುವ ಬಗ್ಗೆ ನಿರಾಧಾರ ಮತ್ತು ಉತ್ಪ್ರೇಕ್ಷಿತ ಸುದ್ದಿಗಳು ಬರುತ್ತಿದ್ದವು. ಇದರಿಂದ ಮದೀನಾ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಗೊಂದಲ ಹರಡುತ್ತಿತ್ತು. ಕೆಲವೊಮ್ಮೆ ನಿಜವಾದ ಅಪಾಯ ಎದುರಾಗಿದ್ದರೂ ಚಾಣಾಕ್ಷ ಶತ್ರುಗಳು ಸಮಾಧಾನಕರ

84. ಆದುದರಿಂದ ಓ ಪೈಗಂಬರರೇ, ನೀವು ಅಲ್ಲಾಹನ ಮಾರ್ಗದಲ್ಲಿ ಸಮರ ನಡೆಸಿರಿ. ನೀವು ನಿಮ್ಮ ಸ್ವಂತದ ಹೊರತು ಇತರರ ಬಗ್ಗೆ ಹೊಣೆಗಾರರಲ್ಲ. ಸತ್ಯವಿಶ್ವಾಸಿಗಳನ್ನು ಯುದ್ಧ ಮಾಡಲು ಪ್ರೇರೇಪಿಸಿರಿ. ಅಲ್ಲಾಹನು ಸತ್ಯನಿಷೇಧಿಗಳ ಬಲವನ್ನು ಮುರಿಯುವ ಕಾಲ ದೂರವಿಲ್ಲ. ಅಲ್ಲಾಹನ ಬಲ ಅತಿ ಹೆಚ್ಚು ಮತ್ತು ಅವನ ಶಿಕ್ಷೆ ಅತ್ಯಂತ ಕಠಿಣ.

فَقَاتِلْ فِي سَبِيلِ اللَّهِ ۚ لَا تُكَلَّفُ إِلَّا نَفْسَكَ ۚ وَحَرِّضِ الْمُؤْمِنِينَ ۚ عَسَى اللَّهُ أَن يَكُفَّ بَأْسَ الَّذِينَ كَفَرُوا ۚ وَاللَّهُ أَشَدُّ بَأْسًا وَأَشَدُّ تَنكِيلًا ﴿٨٤﴾

85. ಒಳಿತಿನ ಶಿಫಾರಸು ಮಾಡುವವನು ಅದರಿಂದ ಪಾಲು ಪಡೆಯುವನು. ಕೆಡುಕಿನ ಶಿಫಾರಸು ಮಾಡುವವನು ಅದರಿಂದ ಪಾಲು ಪಡೆಯುವನು ಮತ್ತು ಅಲ್ಲಾಹನು ಪ್ರತಿಯೊಂದು ವಸ್ತುವಿನ ಮೇಲೆ ದೃಷ್ಟಿಯನ್ನಿಡುವವನಾಗಿರುತ್ತಾನೆ.

مَّن يَشْفَعْ شَفَاعَةً حَسَنَةً يَكُن لَّهُ نَصِيبٌ مِّنْهَا ۖ وَمَن يَشْفَعْ شَفَاعَةً سَيِّئَةً يَكُن لَّهُ كِفْلٌ مِّنْهَا ۗ وَكَانَ اللَّهُ عَلَىٰ كُلِّ شَيْءٍ مُّقِيتًا ﴿٨٥﴾

86. ನಿಮಗೆ ಯಾರಾದರೂ ಸಾದರದಿಂದ ಸಲಾಮ್ ಹೇಳಿದರೆ ಅದಕ್ಕಿಂತಲೂ ಉತ್ತಮ ರೀತಿಯಿಂದ ಅಥವಾ ಕನಿಷ್ಠಪಕ್ಷ ಅದೇ ರೀತಿಯಲ್ಲಿ ಪ್ರತಿ ಸಲಾಮ್ ಹೇಳಿರಿ. ನಿಶ್ಚಯವಾಗಿಯೂ ಅಲ್ಲಾಹನು ಸಕಲ ವಿಷಯಗಳ ಲೆಕ್ಕ ಪರಿಶೋಧಿಸುವವನಾಗಿರುತ್ತಾನೆ.

وَإِذَا حُيِّيتُم بِتَحِيَّةٍ فَحَيُّوا بِأَحْسَنَ مِنْهَا أَوْ رُدُّوهَا ۗ إِنَّ اللَّهَ كَانَ عَلَىٰ كُلِّ شَيْءٍ حَسِيبًا ﴿٨٦﴾

87. ಅಲ್ಲಾಹ್; ಆತನ ಹೊರತು ಇನ್ನಾವ ಆರಾಧ್ಯನೂ ಇಲ್ಲ. ನಿಸ್ಸಂದೇಹವಾಗಿ ಬಂದೇ ತೀರಲಿರುವ ಪುನರುತ್ಥಾನ ದಿನದಂದು ಅವನು ನಿಮ್ಮನ್ನೆಲ್ಲ ಒಟ್ಟುಗೂಡಿಸುವನು. ಅಲ್ಲಾಹನ ಮಾತಿಗಿಂತ ಅಧಿಕ ಸತ್ಯ ಮಾತು ಇನ್ನಾರದಾಗಿರಲು ಸಾಧ್ಯ?

اللَّهُ لَا إِلَٰهَ إِلَّا هُوَ ۚ لَيَجْمَعَنَّكُمْ إِلَىٰ يَوْمِ الْقِيَامَةِ لَا رَيْبَ فِيهِ ۗ وَمَنْ أَصْدَقُ مِنَ اللَّهِ حَدِيثًا ﴿٨٧﴾

88. ಕಪಟವಿಶ್ವಾಸಿಗಳ ವಿಷಯದಲ್ಲಿ ನಿಮ್ಮೊಳಗೆ ಎರಡಭಿಪ್ರಾಯಗಳು ಕಂಡುಬರಲು ಕಾರಣವಾದರೂ ಏನು? ವಸ್ತುತಃ ಅವರು ಗಳಿಸಿದ ಕೇಡುಗಳ ಕಾರಣವಾಗಿ ಅಲ್ಲಾಹನು ಅವರನ್ನು ಹೊರಳಿಸಿ ಬಿಟ್ಟಿರುತ್ತಾನೆ. ಅಲ್ಲಾಹನು ಸನ್ಮಾರ್ಗ ನೀಡದಾತನಿಗೆ ನೀವು ಸನ್ಮಾರ್ಗ ನೀಡಲಿಚ್ಛಿಸುತ್ತೀರಾ? ವಸ್ತುತಃ ಅಲ್ಲಾಹನು ಸನ್ಮಾರ್ಗದಿಂದ ತಪ್ಪಿಸಿದಾತನಿಗಾಗಿ ನೀವು ಯಾವ ದಾರಿಯನ್ನೂ ಕಾಣಲಾರಿರಿ.

فَمَا لَكُمْ فِي الْمُنَافِقِينَ فِئَتَيْنِ وَاللَّهُ أَرْكَسَهُم بِمَا كَسَبُوا ۚ أَتُرِيدُونَ أَن تَهْدُوا مَنْ أَضَلَّ اللَّهُ ۖ وَمَن يُضْلِلِ اللَّهُ فَلَن تَجِدَ لَهُ سَبِيلًا ﴿٨٨﴾

ಸುದ್ದಿಗಳನ್ನು ಕಳುಹಿಸುತ್ತಿದ್ದರು. ಇದರಿಂದಾಗಿ ಜನರು ನಿಶ್ಚಿಂತರಾಗಿ ಬಿಡುತ್ತಿದ್ದರು. ಇಂತಹ ಬೇಜವಾಬ್ದಾರಿಯುತ ವದಂತಿಗಳನ್ನು ಹರಡುವುದರ ದೂರಗಾಮಿ ಪರಿಣಾಮವೇನೆಂದು ಜನಸಾಮಾನ್ಯರಿಗೆ ತಿಳಿದಿರಲಿಲ್ಲ. ಎಲ್ಲಾದರೊಂದು ಗಾಳಿ ಸುದ್ದಿ ಸಿಕ್ಕರೆ ಅದನ್ನು ಇತರರ ಕಿವಿಗೂ ಊದುತ್ತಾ ಹೋಗುತ್ತಿದ್ದರು. ಈ ಸೂಕ್ತದಲ್ಲಿ ಇಂತಹವರನ್ನೇ ತರಾಟೆಗೆ ತೆಗೆದುಕೊಳ್ಳಲಾಗಿದೆ. ವದಂತಿಗಳನ್ನು ಹರಡದಂತೆ ಮತ್ತು ಅವರ ಬಳಿಗೆ ತಲಪುವ ವದಂತಿಗಳನ್ನು ಜವಾಬ್ದಾರಿಯುತ ವ್ಯಕ್ತಿಗಳಿಗೆ ಮುಟ್ಟಿಸಿ ಸುಮ್ಮನಾಗುವಂತೆ ಅವರಿಗೆ ಎಚ್ಚರಿಕೆ ನೀಡಲಾಗಿದೆ.

89. ನೀವೂ ಅವರೂ ಸಮಾನರಾಗಲೆಂದು ಅವರು ಸತ್ಯನಿಷೇಧಿಗಳಾ
ದಂತೆಯೇ ನೀವೂ ಸತ್ಯನಿಷೇಧಿಗಳಾಗಬೇಕೆಂದು ಅವರಿಚ್ಛಿಸುತ್ತಾರೆ.
ಆದುದರಿಂದ ಅವರು ಅಲ್ಲಾಹನ ಮಾರ್ಗದಲ್ಲಿ ವಲಸೆ
ಬರುವವರೆಗೂ ನೀವು ಅವರಲ್ಲಿ ಯಾರನ್ನೂ ನಿಮ್ಮ ಮಿತ್ರರನ್ನಾಗಿ
ಮಾಡಿಕೊಳ್ಳಬೇಡಿರಿ. ಅವರು ವಲಸೆಯಿಂದ ಹಿಂಜರಿದರೆ ಅವರನ್ನು
ಸಿಕ್ಕಿದಲ್ಲೆಲ್ಲಾ ಹಿಡಿಯಿರಿ ಮತ್ತು ವಧಿಸಿರಿ.[62] ಅವರಲ್ಲಿ ಯಾರನ್ನೂ
ನಿಮ್ಮ ಮಿತ್ರ ಹಾಗೂ ಸಹಾಯಕನನ್ನಾಗಿ ಮಾಡಬೇಡಿರಿ.

ودوا لو تكفرون كما كفروا فتكونون سواء
فلا تتخذوا منهم أولياء حتى يهاجروا في
سبيل الله فإن تولوا فخذوهم واقتلوهم
حيث وجدتموهم ولا تتخذوا منهم
وليا ولا نصيرا ﴿٨٩﴾

90. ಆದರೆ ನಿಮ್ಮೊಂದಿಗೆ ಒಪ್ಪಂದ ಮಾಡಿಕೊಂಡಿರುವ ಜನಾಂಗ
ದೊಂದಿಗೆ ಹೋಗಿ ಸೇರಿಕೊಂಡ ಕಪಟವಿಶ್ವಾಸಿಗಳು ಈ ಆಜ್ಞೆಗೆ
ಹೊರತಾಗಿರುತ್ತಾರೆ.[63] ಅದೇ ರೀತಿಯಲ್ಲಿ ಯುದ್ಧದಿಂದ ಜಿಗುಪ್ಸೆ
ಹೊಂದಿ ನಿಮ್ಮ ಬಳಿಗೆ ಬರುವ, ನಿಮ್ಮ ವಿರುದ್ಧವಾಗಲೀ ತಮ್ಮ
ಜನಾಂಗದ ವಿರುದ್ಧವಾಗಲೀ ಯುದ್ಧ ಮಾಡಲು ಇಚ್ಛಿಸದಂತಹ
ಕಪಟವಿಶ್ವಾಸಿಗಳೂ (ಈ ಆದೇಶದಿಂದ) ಹೊರತಾಗಿರುತ್ತಾರೆ.
ಅಲ್ಲಾಹನು ಇಚ್ಛಿಸುತ್ತಿದ್ದರೆ ಅವರನ್ನು ನಿಮ್ಮ ಮೇಲೆ ಎರಗಿಸುತ್ತಿ
ದ್ದನು ಮತ್ತು ಅವರೂ ನಿಮ್ಮ ವಿರುದ್ಧ ಹೋರಾಡುತ್ತಿದ್ದರು.
ಆದುದರಿಂದ ಅವರು ನಿಮ್ಮ ವಿರುದ್ಧ ಯುದ್ಧ ಮಾಡದೆ
ದೂರವುಳಿದು ಬಿಡುವುದಾದರೆ ಮತ್ತು ನಿಮ್ಮೆದುರು ಸಂಧಿ
ಸಮಾಧಾನಗಳ ಹಸ್ತ ಚಾಚಿದರೆ ಅಲ್ಲಾಹನು ನಿಮಗೆ ಅವರ
ಮೇಲೆ ಕೈ ಮಾಡುವ ಯಾವ ಮಾರ್ಗವನ್ನೂ ಇರಿಸಿರುವುದಿಲ್ಲ.

إلا الذين يصلون إلى قوم بينكم وبينهم
ميثاق أو جاءوكم حصرت صدورهم
أن يقاتلوكم أو يقاتلوا قومهم ولو
شاء الله لسلطهم عليكم فلقاتلوكم
فإن اعتزلوكم فلم يقاتلوكم وألقوا
إليكم السلم فما جعل الله لكم
عليهم سبيلا ﴿٩٠﴾

91. ನಿಮ್ಮೊಂದಿಗೂ ಶಾಂತಿಯಿಂದಿರಲು ಮತ್ತು ತಮ್ಮ ಜನಾಂಗ
ದೊಂದಿಗೂ ನೆಮ್ಮದಿಯಿಂದಿರಲು ಬಯಸುವ ಇನ್ನೊಂದು
ತರದ ಕಪಟವಿಶ್ವಾಸಿಗಳು ನಿಮಗೆ ಸಿಗುವರು. ಆದರೆ ಎಂದಾದರೂ
ಕ್ಷೋಭೆಯ ಸಂದರ್ಭವೊದಗಿದರೆ ಅವರು ಅದರಲ್ಲಿ ಧುಮುಕು
ವರು. ಇಂತಹವರು ನಿಮ್ಮೊಡನೆ ಹೋರಾಟ ನಡೆಸುವುದರಿಂದ
ಹಿಂಜರಿಯದಿದ್ದರೆ ಮತ್ತು ಶಾಂತಿ ಸಂಧಾನಗಳನ್ನು ನಿಮ್ಮ

ستجدون آخرين يريدون أن يأمنوكم
ويأمنوا قومهم كلما ردوا إلى الفتنة
أركسوا فيها فإن لم يعتزلوكم ويلقوا
إليكم السلم ويكفوا أيديهم فخذوهم

62. ಯುದ್ಧ ನಿರತರಾಗಿದ್ದ ಸತ್ಯನಿಷೇಧಿಗಳ ಕೂಟದೊಂದಿಗೆ ಸೇರಿ ಇಸ್ಲಾಮೀ ಸರಕಾರದ ವಿರುದ್ಧ ಹಗೆತನ ಸಾಧಿಸುವ ಕೆಲಸಗಳಲ್ಲಿ ಸಕ್ರಿಯವಾಗಿದ್ದ ಕಪಟವಿಶ್ವಾಸಿಗಳ ಕುರಿತಂತೆ ಈ ಆಜ್ಞೆ ಬಂದಿದೆ.

63. ಅಂತಹ ಕಪಟವಿಶ್ವಾಸಿಗಳನ್ನು ಮಿತ್ರರು ಅಥವಾ ಸಹಾಯಕರಾಗಿ ಮಾಡಿಕೊಳ್ಳಬಹುದು ಎಂಬುದು ಇದರ ಅರ್ಥವಲ್ಲ. ಅವರು ಇಸ್ಲಾಮೀ ಸರಕಾರದ ಜತೆಗೆ ಒಪ್ಪಂದವಿರುವ ಜನಾಂಗದವರೊಡನೆ ಸೇರಿರುವುದರಿಂದ ಅವರನ್ನು ಹಿಡಿದು ವಧಿಸುವಂತಿಲ್ಲ ಎಂದು ಇದರ ಅರ್ಥವಾಗಿದೆ.

وَاقْتُلُوْهُمْ حَيْثُ ثَقِفْتُمُوْهُمْ ۚ وَاُولٰٓئِكُمْ جَعَلْنَا لَكُمْ عَلَيْهِمْ سُلْطٰنًا مُّبِيْنًا ﴿٩١﴾

ಮುಂದಿರಿಸದಿದ್ದರೆ ಮತ್ತು ತಮ್ಮ ಕೈಗಳನ್ನು ತಡೆದಿರಿಸಿ ಕೊಳ್ಳದಿದ್ದರೆ ಅವರನ್ನು ಕಂಡ ಕಂಡಲ್ಲಿ ಹಿಡಿಯಿರಿ ಮತ್ತು ವಧಿಸಿರಿ. ಅವರ ಮೇಲೆ ಕೈ ಮಾಡಲು ನಾವು ನಿಮಗೆ ವ್ಯಕ್ತವಾದ ಆಧಾರವನ್ನು ನೀಡಿರುತ್ತೇವೆ.

وَمَا كَانَ لِمُؤْمِنٍ اَنْ يَّقْتُلَ مُؤْمِنًا اِلَّا خَطَـًٔا ۚ وَمَنْ قَتَلَ مُؤْمِنًا خَطَـًٔا فَتَحْرِيْرُ رَقَبَةٍ مُّؤْمِنَةٍ وَّدِيَةٌ مُّسَلَّمَةٌ اِلٰٓى اَهْلِهٖٓ اِلَّآ اَنْ يَّصَّدَّقُوْا ۚ فَاِنْ كَانَ مِنْ قَوْمٍ عَدُوٍّ لَّكُمْ وَهُوَ مُؤْمِنٌ فَتَحْرِيْرُ رَقَبَةٍ مُّؤْمِنَةٍ ۚ وَاِنْ كَانَ مِنْ قَوْمٍۢ بَيْنَكُمْ وَبَيْنَهُمْ مِّيْثَاقٌ فَدِيَةٌ مُّسَلَّمَةٌ اِلٰٓى اَهْلِهٖ وَتَحْرِيْرُ رَقَبَةٍ مُّؤْمِنَةٍ ۚ فَمَنْ لَّمْ يَجِدْ فَصِيَامُ شَهْرَيْنِ مُتَتَابِعَيْنِ ۖ تَوْبَةً مِّنَ اللّٰهِ ۗ وَكَانَ اللّٰهُ عَلِيْمًا حَكِيْمًا ﴿٩٢﴾

92. ಸತ್ಯವಿಶ್ವಾಸಿಯೊಬ್ಬನು ಇನ್ನೊಬ್ಬ ಸತ್ಯವಿಶ್ವಾಸಿಯನ್ನು ಪ್ರಮಾದ ದಿಂದಾಗಿ ಹೊರತು ವಧಿಸುವುದು ಸರಿಯಲ್ಲ. ಯಾರಾದರೂ ಪ್ರಮಾದವಶಾತ್ ಸತ್ಯವಿಶ್ವಾಸಿಯೊಬ್ಬನನ್ನು ವಧಿಸಿಬಿಟ್ಟರೆ ಅದರ ಪ್ರಾಯಶ್ಚಿತ್ತವು ಒಬ್ಬ ಸತ್ಯವಿಶ್ವಾಸಿ ವ್ಯಕ್ತಿಯನ್ನು ದಾಸ್ಯದಿಂದ ಮುಕ್ತಗೊಳಿಸುವುದು ಮತ್ತು[64] ಹತ ವ್ಯಕ್ತಿಯ ವಾರೀಸುದಾರರು ಪರಿಹಾರಧನವನ್ನು ಕ್ಷಮಿಸದಿದ್ದರೆ ಅದನ್ನು ಅವರಿಗೆ ಕೊಡುವುದು.[65] ಆದರೆ ಹತನಾದ ಈ ಮುಸ್ಲಿಮನು ನಿಮ್ಮ ಶತ್ರು ಜನಾಂಗದವನಾಗಿದ್ದರೆ, ಅದರ ಪ್ರಾಯಶ್ಚಿತ್ತವು ಓರ್ವ ಸತ್ಯವಿಶ್ವಾಸಿ ಗುಲಾಮನನ್ನು ಮುಕ್ತಗೊಳಿಸುವುದು. ಅವನು ನಿಮ್ಮೊಂದಿಗೆ ಒಪ್ಪಂದ ಮಾಡಿಕೊಂಡ ಮುಸ್ಲಿಮೇತರ ಜನಾಂಗದ ವ್ಯಕ್ತಿಯಾಗಿದ್ದರೆ ಅವನ ವಾರೀಸುದಾರರಿಗೆ ಪರಿಹಾರ ಧನ ಕೊಡಲಾಗುವುದು ಮತ್ತು ಒಬ್ಬ ಸತ್ಯವಿಶ್ವಾಸಿ ವ್ಯಕ್ತಿಯನ್ನು ದಾಸ್ಯ ವಿಮೋಚನೆ ಗೊಳಿಸಬೇಕಾಗುವುದು.[66] ಗುಲಾಮನನ್ನು ಪಡೆಯಲಾಗದವನು ನಿರಂತರ ಎರಡು ತಿಂಗಳು ಉಪವಾಸ ವ್ರತವನ್ನಾಚರಿಸಬೇಕು.[67] ಈ ಪಾಪಕ್ಕಾಗಿ ಅಲ್ಲಾಹನೊಡನೆ

64. ಹತನಾಗಿರುವವನು ಸತ್ಯವಿಶ್ವಾಸಿಯಾಗಿರುವುದರಿಂದ ಅದರ ಪ್ರಾಯಶ್ಚಿತ್ತವು ಓರ್ವ ಸತ್ಯವಿಶ್ವಾಸಿ ಗುಲಾಮನ ಬಿಡುಗಡೆ ಎಂದು ಸಾರಲಾಗಿದೆ.

65. ರಕ್ತ ಪರಿಹಾರದ ಪ್ರಮಾಣ ನೂರು ಒಂಟೆಗಳು, ಇನ್ನೂರು ಹಸುಗಳು, ಅಥವಾ ಎರಡು ಸಾವಿರ ಆಡುಗಳೆಂದು ಪ್ರವಾದಿವರ್ಯರು(ಸ) ನಿಶ್ಚಯಿಸಿದ್ದಾರೆ. ಯಾರಾದರೂ ಬೇರೆ ರೂಪದಲ್ಲಿ ರಕ್ತ ಪರಿಹಾರ ನೀಡಬಯಸಿದರೆ ಅದು ಪ್ರಸ್ತುತ ಪ್ರಮಾಣದ ಮಾರುಕಟ್ಟೆ ಮೌಲ್ಯಕ್ಕೆ ಅನುಗುಣವಾಗಿ ನಿಶ್ಚಯಿಸಲ್ಪಡುತ್ತದೆ. ಉದಾಹರಣೆಗೆ ನಗದಿನ ರೂಪದಲ್ಲಿ ರಕ್ತ ಪರಿಹಾರ ನೀಡಬಯಸುವವರಿಗೆ ಪ್ರವಾದಿವರ್ಯರು(ಸ) ಎಂಟುನೂರು ದೀನಾರ್ ಅಥವಾ ಎಂಟು ಸಾವಿರ ದಿರ್‌ಹಮ್ ನಿಶ್ಚಯಿಸುತ್ತಿದ್ದರು. ಹ. ಉಮರ್‌ರ(ರ) ಕಾಲ ಬಂದಾಗ ಅವರು ಹೇಳಿದರು; ಈಗ ಒಂಟೆಗಳ ಬೆಲೆ ಏರಿರುವುದರಿಂದ ಚಿನ್ನದ ದೀನಾರ್ ಆದರೆ ಒಂದು ಸಾವಿರ ಅಥವಾ ಬೆಳ್ಳಿಯ ನಾಣ್ಯಗಳಾದರೆ ಹನ್ನೆರಡು ಸಾವಿರ ದಿರ್‌ಹಮ್ ರಕ್ತ ಪರಿಹಾರ ನೀಡಬೇಕಾಗುವುದು. ಈ ರಕ್ತ ಪರಿಹಾರವು ಅನಿರೀಕ್ಷಿತವಾಗಿ ನಡೆದ ವಧೆಗೆ ಅನ್ವಯಿಸುತ್ತದೆಯೇ ಹೊರತು ಉದ್ದೇಶ ಪೂರ್ವಕ ನಡೆಸಲಾದ ಕೊಲೆಗೆ ಅಲ್ಲ ಎಂಬುದು ಉಲ್ಲೇಖನೀಯ.

66. ಈ ಆದೇಶಗಳ ತಾತ್ಪರ್ಯವೇನೆಂದರೆ ಹತನಾದವನು ದಾರುಲ್ ಇಸ್ಲಾಮ್(ಇಸ್ಲಾಮಿ ರಾಷ್ಟ್ರ)ನ ಪ್ರಜೆಯಾಗಿದ್ದರೆ ಹಂತಕನು ರಕ್ತ ಪರಿಹಾರವನ್ನೂ ನೀಡಬೇಕು. ತನ್ನ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ಓರ್ವ ಗುಲಾಮನನ್ನೂ ಸ್ವತಂತ್ರಗೊಳಿಸಬೇಕು. ಹತನಾದವನು ಶತ್ರು ರಾಷ್ಟ್ರದ ಪ್ರಜೆಯಾಗಿದ್ದರೆ ಹಂತಕನು ಗುಲಾಮನೊಬ್ಬನನ್ನು ಸ್ವತಂತ್ರಗೊಳಿಸಿದರೆ ಸಾಕು. ಅದಕ್ಕಾಗಿ ಅವನು ರಕ್ತ ಪರಿಹಾರವನ್ನು ನೀಡಬೇಕಾಗಿಲ್ಲ. ಇಸ್ಲಾಮಿ ರಾಷ್ಟ್ರದೊಂದಿಗೆ ಒಪ್ಪಂದವಿರುವ ಇಸ್ಲಾಮೇತರ ರಾಷ್ಟ್ರದ ಪ್ರಜೆಯಾಗಿದ್ದರೆ ಹಂತಕನು ಓರ್ವ ಗುಲಾಮನನ್ನೂ ಸ್ವತಂತ್ರಗೊಳಿಸಬೇಕು. ಅಂತೆಯೇ ರಕ್ತ ಪರಿಹಾರವನ್ನೂ ನೀಡಬೇಕು. ಆದರೆ ಪರಿಹಾರದ ಪ್ರಮಾಣ ಒಪ್ಪಂದ ಮಾಡಲ್ಪಟ್ಟ ರಾಷ್ಟ್ರದ ಮುಸ್ಲಿಮೇತರನೊಬ್ಬನ ವಧೆಗೆ ಪ್ರತಿಯಾಗಿ ಕೊಡಬೇಕಾದ ಪೂರ್ವ ನಿರ್ಧಾರಿತ ಪರಿಹಾರಕ್ಕೆ ಸಮಾನವಾಗಿರುತ್ತದೆ.

67. ಅರ್ಥಾತ್- ನಿರಂತರ ಉಪವಾಸ ಆಚರಿಸಬೇಕು. ಮಧ್ಯದಲ್ಲಿ ಉಪವಾಸ ತೊರೆಯಬಾರದು. ನ್ಯಾಯಸಮ್ಮತವಾದ ಕಾರಣವಿಲ್ಲದೆ

ಪಶ್ಚಾತ್ತಾಪ ಪಡುವ ಕ್ರಮವಿದು.[68] ಅಲ್ಲಾಹ್ ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

93. ಒಬ್ಬ ಸತ್ಯವಿಶ್ವಾಸಿಯನ್ನು ಉದ್ದೇಶ ಪೂರ್ವಕವಾಗಿ ವಧಿಸಿದವನಿಗೆ ಅದರ ಪ್ರತಿಫಲ ನರಕವೇ ಆಗಿದ್ದು ಅವನು ಅದರಲ್ಲಿ ಸದಾಕಾಲ ವಾಸಿಸುವನು. ಅವನ ಮೇಲೆ ಅಲ್ಲಾಹನ ಕ್ರೋಧ ಮತ್ತು ಶಾಪವಿದೆ. ಅಲ್ಲಾಹನು ಅವನಿಗಾಗಿ ಘೋರ ಶಿಕ್ಷೆಯನ್ನು ಸಿದ್ಧ ಗೊಳಿಸಿಟ್ಟಿರುತ್ತಾನೆ.

وَمَنْ يَّقْتُلْ مُؤْمِنًا مُّتَعَمِّدًا فَجَزَآؤُهٗ
جَهَنَّمُ خٰلِدًا فِيْهَا وَغَضِبَ اللّٰهُ عَلَيْهِ
وَلَعَنَهٗ وَاَعَدَّ لَهٗ عَذَابًا عَظِيْمًا ۝٩٣

94. ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನ ಮಾರ್ಗದಲ್ಲಿ ಜಿಹಾದ್‌ಗೆ ನಡೆದಾಗ ಮಿತ್ರ ಮತ್ತು ಶತ್ರುಗಳಲ್ಲಿ ಭೇದವರಿಯಿರಿ ಮತ್ತು ನಿಮ್ಮನ್ನು ಮುಂದಾಗಿ ಅಭಿವಂದಿಸಿದವನಿಗೆ ತಕ್ಷಣ, "ನೀನು ಸತ್ಯವಿಶ್ವಾಸಿಯಲ್ಲ" ಎನ್ನಬೇಡಿರಿ. ನೀವು ಐಹಿಕ ಜೀವನ ಸಾಧನಗಳನ್ನು ಬಯಸುವಿರಾದರೆ, ಅಲ್ಲಾಹನ ಬಳಿ ನಿಮಗೆ ಬೇಕಾದ ವಿಪುಲ ಸಮರಾರ್ಜಿತ ಸೊತ್ತುಗಳಿವೆ. ನೀವು ಸಹ ಹಿಂದೆ ಇದೇ ಅವಸ್ಥೆಯಲ್ಲಿ ಸಿಲುಕಿದ್ದಿರಷ್ಟೆ. ಅನಂತರ ಅಲ್ಲಾಹನು ನಿಮಗೆ ಉಪಕಾರ ಮಾಡಿದನು. ಆದುದರಿಂದ ಚೆನ್ನಾಗಿ ಪರ್ಯಾಲೋಚಿಸಿರಿ.[69] ನೀವು ಮಾಡುತ್ತಿರುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ.

يٰۤاَيُّهَا الَّذِيْنَ اٰمَنُوْۤا اِذَا ضَرَبْتُمْ فِيْ
سَبِيْلِ اللّٰهِ فَتَبَيَّنُوْا وَلَا تَقُوْلُوْا لِمَنْ
اَلْقٰۤى اِلَيْكُمُ السَّلٰمَ لَسْتَ مُؤْمِنًا ۚ تَبْتَغُوْنَ
عَرَضَ الْحَيٰوةِ الدُّنْيَا ۫ فَعِنْدَ اللّٰهِ مَغَانِمُ
كَثِيْرَةٌ ؕ كَذٰلِكَ كُنْتُمْ مِّنْ قَبْلُ فَمَنَّ اللّٰهُ
عَلَيْكُمْ فَتَبَيَّنُوْا ؕ اِنَّ اللّٰهَ كَانَ بِمَا
تَعْمَلُوْنَ خَبِيْرًا ۝٩٤

ನಡುವೆ ಒಂದು ಉಪವಾಸವನ್ನು ತೊರೆದರೆ ಪುನಃ ಉಪವಾಸದ ಸರದಿಯನ್ನು ಆರಂಭಿಸಬೇಕಾಗುವುದು.

68. ಅರ್ಥಾತ್- ಇದು ದಂಡವಲ್ಲ. ಬದಲಾಗಿ ಇದು ತೌಬಃ(ಪಶ್ಚಾತ್ತಾಪ) ಮತ್ತು ಕಫ್ಫಾರಃ(ಪ್ರಾಯಶ್ಚಿತ್ತ)ವಾಗಿದೆ. ದಂಡದಲ್ಲಿ ವಿಷಾದ, ಸಂಕೋಚ ಮತ್ತು ಆತ್ಮಶುದ್ಧಿಯ ಸ್ಫೂರ್ತಿಯೇ ಇರುವುದಿಲ್ಲ. ಸಾಧಾರಣವಾಗಿ ಅದನ್ನು ಒಲ್ಲದ ಮನಸ್ಸಿನಿಂದ ಅಸಮಾಧಾನಪೂರ್ವಕ ಕೊಡಲಾಗುತ್ತದೆ. ಅದು ಬೇಸರ ಮತ್ತು ಅರೋಚಕ ಭಾವನೆಯನ್ನುಂಟು ಮಾಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಅಲ್ಲಾಹನು ತಪ್ಪು ಸಂಭವಿಸಿದಂತಹ ದಾಸನ ಮನಸ್ಸಿನಿಂದ ಅದರ ಪ್ರಭಾವವನ್ನು ಅಳಿಸಿಬಿಡಲು ಆರಾಧನೆ, ಸತ್ಕರ್ಮ ಮತ್ತು ಇತರರ ಹಕ್ಕುಗಳನ್ನು ಕೊಡುವ ವಿಧಾನವನ್ನು ಅಳವಡಿಸಬೇಕೆಂದು ಬಯಸುತ್ತಾನೆ. ಆ ಮೂಲಕ ಸಂಕೋಚ ಮತ್ತು ವಿಷಾದಗಳೊಂದಿಗೆ ಅವನು ಅಲ್ಲಾಹನೆಡೆಗೆ ಮರಳುತ್ತಾನೆ. ಇದರಿಂದ ಅವನ ತಪ್ಪು ಕ್ಷಮಿಸಲ್ಪಡುವುದರ ಜತೆಗೆ ಅವನ ಮನಸ್ಸು ಇಂತಹ ತಪ್ಪುಗಳ ಪುನರಾವರ್ತನೆಯಿಂದ ಸಂಪೂರ್ಣವಾಗಿ ಮುಕ್ತವಾಗಿರುತ್ತದೆ.

69. ಇಸ್ಲಾಮಿನ ಆರಂಭ ಕಾಲದಲ್ಲಿ 'ಅಸ್ಸಲಾಮು ಅಲೈಕುಮ್' ಎಂಬ ಪದ ಒಂದು ಸಂಕೇತ ಮತ್ತು ಚಿಹ್ನೆಯಾಗಿತ್ತು. ನಾನೂ ನಿಮ್ಮ ಗುಂಪಿಗೆ ಸೇರಿದವನು ಹಾಗೂ ನಿಮ್ಮ ಮಿತ್ರ ಮತ್ತು ಹಿತೈಷಿ ಆಗಿದ್ದೇನೆ, ನಿಮ್ಮ ಶತ್ರುವಲ್ಲ ಎಂದು ಸೂಚಿಸಲಿಕ್ಕಾಗಿ ಒಬ್ಬ ಇನ್ನೊಬ್ಬನಿಗೆ ಈ ಪದವನ್ನು ಉಪಯೋಗಿಸುತ್ತಿದ್ದನು. ಆ ಕಾಲದಲ್ಲಿ ಅರೇಬಿಯಾದ ನವ ಮುಸ್ಲಿಮರು ಮತ್ತು ಸತ್ಯನಿಷೇಧಿಗಳ ನಡುವೆ ಭಾಷೆ, ಉಡುಪು ಮತ್ತಿತರ ವಿಷಯಗಳಲ್ಲಿ ಮೊದಲ ನೋಟದಲ್ಲೇ ಓರ್ವ ಮುಸ್ಲಿಮ್ ಇನ್ನೋರ್ವ ಮುಸ್ಲಿಮನನ್ನು ಗುರುತಿಸಬಲ್ಲಂತಹ ಸ್ಪಷ್ಟವಾದ ಯಾವುದೇ ಅಂತರವಿರಲಿಲ್ಲ. ಆದ್ದರಿಂದ ಈ ಸಾಂಕೇತಿಕ ಪದದ ಪ್ರಾಮುಖ್ಯತೆ ಇನ್ನೂ ಹೆಚ್ಚಿತ್ತು. ಆದ್ದರಿಂದ ಯುದ್ಧದ ಸಂದರ್ಭದಲ್ಲಿ ಅವರಿಗೆ ಪೇಚಿಗೀಡಾಗಬೇಕಾಗಿ ಬರುತ್ತಿತ್ತು. ಮುಸ್ಲಿಮರು ಯಾವುದಾದರೂ ಶತ್ರು ಪಾಳಯದ ಮೇಲೆ ಹಲ್ಲೆ ನಡೆಸುವಾಗ ಯಾವನಾದರೊಬ್ಬ ಮುಸ್ಲಿಮನು ನಡುವೆ ಸಿಕ್ಕಿಬಿದ್ದರೆ, ಅವನು ಹಲ್ಲೆನಡೆಸಿದ ಮುಸ್ಲಿಮರೊಡನೆ ನಾನೂ ನಿಮ್ಮ ಧರ್ಮ ಸಂಬಂಧಿ ಸೋದರನೇ ಆಗಿದ್ದೇನೆಂದು ರುಜುಪಡಿಸಲು 'ಅಸ್ಸಲಾಮು ಅಲೈಕುಮ್' ಅಥವಾ 'ಲಾಇಲಾಹ ಇಲ್ಲಲ್ಲಾಹ್' ಎಂದು ಕೂಗಿ

95. ಮುಸ್ಲಿಮರ ಪೈಕಿ ಯಾವ ಕಾರಣವೂ ಇಲ್ಲದೆ ಮನೆಯೊಳಗೆ ಕುಳಿತಿರುವವರೂ ಅಲ್ಲಾಹನ ಮಾರ್ಗದಲ್ಲಿ ತನು ಧನಗಳಿಂದ ಹೋರಾಡುತ್ತಿರುವವರೂ ಸಮಾನರಾಗಲಾರರು. ಕುಳಿತಿರುವವರಿಗಿಂತ ತನು ಧನಗಳಿಂದ ಹೋರಾಟ ನಡೆಸುವವರ ಸ್ಥಾನವನ್ನು ಅಲ್ಲಾಹನು ಉನ್ನತಗೊಳಿಸಿರುತ್ತಾನೆ. ಅಲ್ಲಾಹನು ಪ್ರತಿಯೊಬ್ಬನಿಗೂ ಒಳಿತಿನ ವಾಗ್ದಾನವನ್ನೇ ಮಾಡಿರುವನಾದರೂ ಅವನ ಬಳಿ ಧರ್ಮಯೋಧರ ಸೇವೆಗಳ ಪ್ರತಿಫಲವು ಕುಳಿತಿರುವವರಿಗಿಂತ ಅತಿ ಹೆಚ್ಚಾಗಿರುತ್ತದೆ.

لَا يَسْتَوِي الْقٰعِدُوْنَ مِنَ الْمُؤْمِنِيْنَ غَيْرُ أُولِي الضَّرَرِ وَالْمُجٰهِدُوْنَ فِيْ سَبِيْلِ اللّٰهِ بِأَمْوَالِهِمْ وَأَنْفُسِهِمْ ۚ فَضَّلَ اللّٰهُ الْمُجٰهِدِيْنَ بِأَمْوَالِهِمْ وَأَنْفُسِهِمْ عَلَى الْقٰعِدِيْنَ دَرَجَةً ۚ وَكُلًّا وَّعَدَ اللّٰهُ الْحُسْنٰى ۚ وَفَضَّلَ اللّٰهُ الْمُجٰهِدِيْنَ عَلَى الْقٰعِدِيْنَ أَجْرًا عَظِيْمًا ﴿٩٥﴾

96. ಅವರಿಗೆ ಅಲ್ಲಾಹನ ವತಿಯಿಂದ ಉನ್ನತ ಸ್ಥಾನಗಳೂ ಕ್ಷಮೆಯೂ ಕೃಪೆಯೂ ಇವೆ. ಅಲ್ಲಾಹ್ ಮಹಾ ಕ್ಷಮಾದಾನಿಯೂ ಕರುಣಾ ನಿಧಿಯೂ ಆಗಿರುತ್ತಾನೆ.

دَرَجٰتٍ مِّنْهُ وَمَغْفِرَةً وَّرَحْمَةً ۚ وَكَانَ اللّٰهُ غَفُوْرًا رَّحِيْمًا ﴿٩٦﴾

97. ತಮ್ಮ ಮೇಲೆ ತಾವೇ ಅಕ್ರಮವೆಸಗುತ್ತಿದ್ದವರ[70] ಪ್ರಾಣವನ್ನು ದೇವಚರರು ವಶಪಡಿಸಿಕೊಂಡಾಗ ಅವರೊಡನೆ, "ನೀವು ಯಾವ ಸ್ಥಿತಿಯಲ್ಲಿದ್ದಿರಿ?" ಎಂದು ಕೇಳಿದರು. ಅವರು, "ನಾವು ಭೂಮಿಯಲ್ಲಿ ಅಶಕ್ತರೂ ವಿವಶರೂ ಆಗಿದ್ದೆವು" ಎಂದು ಉತ್ತರ ಕೊಟ್ಟರು. ಆಗ ದೇವಚರರು, "ನಿಮಗೆ ವಲಸೆ ಹೋಗಲು ಭೂಮಿಯು ವಿಶಾಲವಿರಲಿಲ್ಲವೇ?" ಎಂದು ಕೇಳಿದರು. ಇಂತಹವರ ವಾಸಸ್ಥಳವು ನರಕವೇ ಆಗಿದೆ. ಅದು ಅತ್ಯಂತ ಕೆಟ್ಟ ವಾಸಸ್ಥಾನ.

إِنَّ الَّذِيْنَ تَوَفّٰىهُمُ الْمَلٰٓئِكَةُ ظَالِمِيْٓ أَنْفُسِهِمْ قَالُوْا فِيْمَ كُنْتُمْ ۚ قَالُوْا كُنَّا مُسْتَضْعَفِيْنَ فِي الْأَرْضِ ۚ قَالُوْٓا أَلَمْ تَكُنْ أَرْضُ اللّٰهِ وَاسِعَةً فَتُهَاجِرُوْا فِيْهَا ۚ فَأُولٰٓئِكَ مَأْوٰىهُمْ جَهَنَّمُ ۚ وَسَآءَتْ مَصِيْرًا ﴿٩٧﴾

98. ಆದರೆ ನಿಜಕ್ಕೂ ವಿವಶರಾಗಿರುವ ಮತ್ತು ಹೊರಟು ಹೋಗಿಬಿಡಲು ದಾರಿ ಹಾಗೂ ಸಾಧನವಿಲ್ಲದ ಪುರುಷರೂ ಸ್ತ್ರೀಯರೂ ಮಕ್ಕಳೂ ಇದಕ್ಕೆ ಹೊರತಾಗಿದ್ದಾರೆ.

إِلَّا الْمُسْتَضْعَفِيْنَ مِنَ الرِّجَالِ وَالنِّسَآءِ وَالْوِلْدَانِ لَا يَسْتَطِيْعُوْنَ حِيْلَةً وَّلَا يَهْتَدُوْنَ سَبِيْلًا ﴿٩٨﴾

ಹೇಳುತ್ತಿದ್ದನು. ಆದರೆ ಮುಸ್ಲಿಮರಿಗೆ ಇವನು ಸತ್ಯನಿಷೇಧಿಯೇ ಆಗಿರಬಹುದು, ಬರೇ ಜೀವ ಉಳಿಸುವ ಉದ್ದೇಶದಿಂದ ಹೀಗೆ ನೆಪ ಮಾಡಿಕೊಳ್ಳುತ್ತಿರಬಹುದು ಎಂಬ ಸಂಶಯ ಉಂಟಾಗುತ್ತಿತ್ತು. ಅನೇಕ ಸಂದರ್ಭದಲ್ಲಿ ಅಂತಹವರನ್ನು ಅವರು ವಧಿಸುತ್ತಿದ್ದರು. ಆದ್ದರಿಂದಲೇ ಈ ಸೂಕ್ತದಲ್ಲಿ, ಯಾರಾದರೂ ತನ್ನನ್ನು ಮುಸ್ಲಿಮನೆಂದು ಹೇಳಿಕೊಂಡರೆ, ಅವನು ಕೇವಲ ಜೀವ ಉಳಿಸಲಿಕ್ಕಾಗಿ ಸುಳ್ಳಾಡುತ್ತಿರುವವನಾಗಿರಬಹುದು. ಏನಿದ್ದರೂ ವಿಚಾರಣೆಯ ಬಳಿಕವೇ ಸತ್ಯ ಬಯಲಾಗುತ್ತದೆ. ವಿಚಾರಣೆಯಿಲ್ಲದೆ ಅವನನ್ನು ಬಿಟ್ಟುಬಿಟ್ಟರೆ ಸತ್ಯನಿಷೇಧಿಯೊಬ್ಬ ಸುಳ್ಳು ಹೇಳಿ ಜೀವ ಉಳಿಸಿಕೊಳ್ಳುವ ಸಾಧ್ಯತೆಯಿದೆ ಎಂಬುದು ನಿಜ. ಅಂತೆಯೇ ವಿಚಾರಣೆಯಿಲ್ಲದೆ ವಧಿಸಿದರೆ ನಿರಪರಾಧಿ ಸತ್ಯವಿಶ್ವಾಸಿಯೊಬ್ಬ ನಿಮ್ಮ ಕೈಯಿಂದ ಅನ್ಯಾಯವಾಗಿ ವಧಿಸಲ್ಪಡುವ ಸಾಧ್ಯತೆಯೂ ಇದ್ದೇ ಇದೆ.

70. ಅರ್ಥಾತ್- ಇಸ್ಲಾಮ್ ಸ್ವೀಕರಿಸಿದ ಬಳಿಕವೂ ಯಾವುದೇ ಕಾರಣ ಅಥವಾ ಅನಿವಾರ್ಯತೆಗಳಿಲ್ಲದೆ ತಮ್ಮ ಸತ್ಯನಿಷೇಧಿ ಜನಾಂಗದೊಂದಿಗೇ ಇದ್ದು ಅರೆ ಸತ್ಯವಿಶ್ವಾಸಿ ಮತ್ತು ಅರೆ ಸತ್ಯನಿಷೇಧಿಯಂತೆ ಜೀವನ ಸಾಗಿಸುವುದರಲ್ಲೇ ಸಂತೃಪ್ತಿ ಪಡೆಯುವವರಾಗಿದ್ದಾರೆ. ಆಗ ಇಸ್ಲಾಮೀ ರಾಷ್ಟ್ರವೊಂದು ಅಸ್ತಿತ್ವಕ್ಕೆ ಬಂದಿತ್ತು. ಅಲ್ಲಿಗೆ ವಲಸೆಹೋಗಿ ತಮ್ಮ ಧರ್ಮ ಮತ್ತು ವಿಶ್ವಾಸಕ್ಕೆ ಬದ್ಧರಾಗಿ ಪೂರ್ಣ ಇಸ್ಲಾಮೀ ಬದುಕನ್ನು ಸಾಗಿಸಲು ಅವರಿಗೆ ಸಾಧ್ಯವಿತ್ತು. ಇಸ್ಲಾಮೀ ರಾಷ್ಟ್ರದಿಂದ ತಮ್ಮ ವಿಶ್ವಾಸದ ರಕ್ಷಣೆಗಾಗಿ ಆ ಕಡೆಗೆ ವಲಸೆ ಬರುವಂತೆ ಅವರಿಗೆ ಆಹ್ವಾನವೂ ಬಂದಿತ್ತು.

99. ಅಲ್ಲಾಹ್ ಅವರನ್ನು ಕ್ಷಮಿಸಿಬಿಡಲೂ ಬಹುದು. ಅಲ್ಲಾಹನು ಅತ್ಯಂತ ಮನ್ನಿಸುವಾತನೂ ಕ್ಷಮಾಶೀಲನೂ ಆಗಿರುತ್ತಾನೆ.

فَأُولَٰٓئِكَ عَسَى ٱللَّهُ أَن يَعْفُوَ عَنْهُمْ ۚ وَ
كَانَ ٱللَّهُ عَفُوًّا غَفُورًا ﴿٩٩﴾

100. ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋಗುವವನು ಭೂಮಿಯಲ್ಲಿ ಆಶ್ರಯ ಪಡೆಯಲು ಅನೇಕ ಸ್ಥಳಗಳನ್ನೂ ಜೀವನ ಸಾಗಿಸಲು ಸಾಕಷ್ಟು ಅವಕಾಶವನ್ನೂ ಕಾಣುವನು. ಯಾವನಾದರೂ ತನ್ನ ಮನೆಯಿಂದ ಅಲ್ಲಾಹ್ ಮತ್ತು ಸಂದೇಶವಾಹಕರ ಕಡೆಗೆ ವಲಸೆ ಹೋಗಲು ಹೊರಟರೆ, ಮುಂದೆ ದಾರಿಯಲ್ಲೇ ಅವನಿಗೆ ಮರಣ ವುಂಟಾದರೆ ಅವನ ಪ್ರತಿಫಲ ಅಲ್ಲಾಹನ ಮೇಲೆ ಕಡ್ಡಾಯವಾಗಿ ಬಿಟ್ಟಿತು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.[71]

وَمَن يُهَاجِرْ فِى سَبِيلِ ٱللَّهِ يَجِدْ فِى
ٱلْأَرْضِ مُرَٰغَمًا كَثِيرًا وَسَعَةً ۚ وَمَن
يَخْرُجْ مِنۢ بَيْتِهِۦ مُهَاجِرًا إِلَى ٱللَّهِ وَرَسُولِهِۦ
ثُمَّ يُدْرِكْهُ ٱلْمَوْتُ فَقَدْ وَقَعَ أَجْرُهُۥ عَلَى
ٱللَّهِ ۗ وَكَانَ ٱللَّهُ غَفُورًا رَّحِيمًا ﴿١٠٠﴾

101. ನೀವು ಪ್ರಯಾಣಕ್ಕೆ ಹೊರಟಾಗ ನಮಾಝನ್ನು 'ಕಸ್ರ್' ಮಾಡಿಕೊಳ್ಳುವುದರಲ್ಲಿ[72] (ಕಡಿತಗೊಳಿಸಿಕೊಳ್ಳುವುದರಲ್ಲಿ) ಅಡ್ಡಿಯಿಲ್ಲ. (ಮುಖ್ಯವಾಗಿ) ಸತ್ಯನಿಷೇಧಿಗಳು ನಿಮ್ಮನ್ನು ಸತಾಯಿಸುವರೆಂಬ ಆಶಂಕೆಯುಂಟಾದಾಗ. ಏಕೆಂದರೆ ನಿಶ್ಚಯ ವಾಗಿಯೂ ಅವರು ನಿಮ್ಮೊಂದಿಗೆ ಪ್ರತ್ಯಕ್ಷ ಹಗೆತನ ಸಾಧಿಸಲು ಹೊರಟಿರುತ್ತಾರೆ.

وَإِذَا ضَرَبْتُمْ فِى ٱلْأَرْضِ فَلَيْسَ عَلَيْكُمْ
جُنَاحٌ أَن تَقْصُرُوا۟ مِنَ ٱلصَّلَوٰةِ ۖ إِنْ خِفْتُمْ
أَن يَفْتِنَكُمُ ٱلَّذِينَ كَفَرُوٓا۟ ۚ إِنَّ ٱلْكَٰفِرِينَ
كَانُوا۟ لَكُمْ عَدُوًّا مُّبِينًا ﴿١٠١﴾

102. ಓ ಪೈಗಂಬರರೇ, ನೀವು ಮುಸ್ಲಿಮರೊಂದಿಗೆ ಇದ್ದು (ಯುದ್ಧಾವಸ್ಥೆಯಲ್ಲಿ) ಅವರಿಗೆ ನಮಾಝ್ ಮಾಡಿಸಲು ನಿಂತಾಗ ಅವರಲ್ಲೊಂದು ಗುಂಪು ನಿಮ್ಮ ಸಂಗಡ ನಿಲ್ಲಲಿ ಮತ್ತು ತಮ್ಮ ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡೇ ಇರಲಿ. ಅವರು ಸಾಷ್ಟಾಂಗ ಮಾಡಿದ ಮೇಲೆ ಹಿಂದಕ್ಕೆ ಸರಿದು ಬಿಡಲಿ ಮತ್ತು ಇನ್ನೂ ನಮಾಝ್ ಮಾಡಿರದ ಇನ್ನೊಂದು ಗುಂಪು ಬಂದು ನಿಮ್ಮ ಸಂಗಡ ನಮಾಝ್ ಮಾಡಲಿ. ಅವರೂ ಜಾಗರೂಕರಾಗಿಯೂ ಶಸ್ತ್ರಧಾರಿಗಳಾಗಿಯೂ[73] ಇರಲಿ. ಏಕೆಂದರೆ ನೀವು ನಿಮ್ಮ

وَإِذَا كُنتَ فِيهِمْ فَأَقَمْتَ لَهُمُ ٱلصَّلَوٰةَ فَلْتَقُمْ
طَآئِفَةٌ مِّنْهُم مَّعَكَ وَلْيَأْخُذُوٓا۟ أَسْلِحَتَهُمْ
فَإِذَا سَجَدُوا۟ فَلْيَكُونُوا۟ مِن وَرَآئِكُمْ وَلْتَأْتِ
طَآئِفَةٌ أُخْرَىٰ لَمْ يُصَلُّوا۟ فَلْيُصَلُّوا۟ مَعَكَ وَلْيَأْخُذُوا۟
حِذْرَهُمْ وَأَسْلِحَتَهُمْ ۗ وَدَّ ٱلَّذِينَ كَفَرُوا۟
لَوْ تَغْفُلُونَ عَنْ أَسْلِحَتِكُمْ وَأَمْتِعَتِكُمْ

71. ಅಲ್ಲಾಹನ ಧರ್ಮದ ಮೇಲೆ ವಿಶ್ವಾಸವಿಟ್ಟ ವ್ಯಕ್ತಿಗೆ ಸತ್ಯನಿಷೇಧದ ವ್ಯವಸ್ಥೆಯಲ್ಲಿ ಎರಡು ವಿಧದಲ್ಲಿ ಮಾತ್ರ ಜೀವನ ಸಾಗಿಸಲು ಸಾಧ್ಯವಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಒಂದೋ ಅವನು ಇಸ್ಲಾಮನ್ನು ಆ ಪ್ರದೇಶದಲ್ಲಿ ಪ್ರಬಲಗೊಳಿಸಲು ಮತ್ತು ಸತ್ಯನಿಷೇಧದ ವ್ಯವಸ್ಥೆಯನ್ನು ಇಸ್ಲಾಮೀ ವ್ಯವಸ್ಥೆಯಾಗಿ ಮಾರ್ಪಡಿಸಲು ಹೋರಾಡುತ್ತಿರಬೇಕು. ಪ್ರವಾದಿಗಳು ಮತ್ತು ಅವರ ಆರಂಭದ ಅನುಯಾಯಿಗಳು ಹಾಗೆಯೇ ಮಾಡುತ್ತಿದ್ದರು. ಇಲ್ಲವೇ ಅಲ್ಲಿಂದ ಹೊರಡುವ ದಾರಿಗಾಣದೆ ತೀವ್ರ ಅಸಮಾಧಾನದೊಂದಿಗೆ ಅನಿವಾರ್ಯವಾಗಿ ಅಲ್ಲಿ ನೆಲೆಸಿರಬೇಕು.

72. ಶಾಂತಿಯ ಕಾಲದಲ್ಲಿ ಮಾಡಲಾಗುವ ಪ್ರವಾಸದ 'ಕಸ್ರ್' (ನಮಾಝ್‌ನ ಕಡಿತ) ಎಂದರೆ ನಾಲ್ಕು ರಕಅತ್ ಕಡ್ಡಾಯವಿರುವ ಅವಧಿಯಲ್ಲಿ ಎರಡು ರಕಅತ್ ನಮಾಝ್ ನಿರ್ವಹಿಸುವುದಾಗಿದೆ. ಯುದ್ಧಾವಸ್ಥೆಯಲ್ಲಿ ಕಸ್ರ್‌ಗೆ ಮಿತಿಯನ್ನು ಗೊತ್ತುಪಡಿಸಲಾಗಿಲ್ಲ. ಯುದ್ಧದ ಸಂದರ್ಭದಲ್ಲಿ ಅವಕಾಶ ಒದಗಿಬಂದಂತೆ ನಮಾಝ್ ನಿರ್ವಹಿಸಬೇಕು.

73. ಸಲಾತುಲ್ ಖೌಫ್(ಆತಂಕದ ಅವಧಿಯ ನಮಾಝ್)ನ ಈ ಆದೇಶವು ಶತ್ರುವಿನ ಆಕ್ರಮಣದ ಭಯವಿರುವ ಆದರೆ ಯುದ್ಧವಿನ್ನೂ ಆರಂಭಗೊಂಡಿರದ ಸಂದರ್ಭಕ್ಕಾಗಿ ಆಗಿದೆ.

فَيَمِيلُونَ عَلَيْكُم مَّيْلَةً وَاحِدَةً ۚ وَلَا جُنَاحَ
عَلَيْكُمْ إِن كَانَ بِكُمْ أَذًى مِّن مَّطَرٍ أَوْ
كُنتُم مَّرْضَىٰ أَن تَضَعُوا أَسْلِحَتَكُمْ ۖ وَخُذُوا
حِذْرَكُمْ ۗ إِنَّ اللَّهَ أَعَدَّ لِلْكَافِرِينَ عَذَابًا مُّهِينًا ﴿١٠٢﴾

ಆಯುಧಗಳಿಂದಲೂ ಸಾಮಾನು ಸಾಮಗ್ರಿಗಳಿಂದಲೂ ಕಿಂಚಿತ್ತಾದರೂ ಅಜಾಗರೂಕರಾದಾಗ ನಿಮ್ಮ ಮೇಲೆ ಹಠಾತ್ತಾಗಿ ಎರಗಿಬಿಡಬೇಕೆಂದು ಸತ್ಯನಿಷೇಧಿಗಳು ಹೊಂಚುಹಾಕಿಕೊಂಡಿರುತ್ತಾರೆ. ಒಂದು ವೇಳೆ ಮಳೆಯ ಕಾರಣದಿಂದ ನಿಮಗೆ ತೊಂದರೆಯಾಗುವುದೆಂದು ಕಂಡರೆ ಅಥವಾ ನೀವು ರೋಗಗ್ರಸ್ತರಾದರೆ ಆಯುಧಗಳನ್ನು ಕೆಳಗಿಡುವುದರಲ್ಲಿ ದೋಷವಿಲ್ಲ. ಆಗಲೂ ಜಾಗ್ರತರಾಗಿರಿ. ಅಲ್ಲಾಹ್ ಸತ್ಯನಿಷೇಧಿಗಳಿಗೆ ಅಪಮಾನಕಾರಕ ಶಿಕ್ಷೆಯನ್ನು ಸಿದ್ಧಗೊಳಿಸಿಟ್ಟಿರುತ್ತಾನೆ.

فَإِذَا قَضَيْتُمُ الصَّلَاةَ فَاذْكُرُوا اللَّهَ قِيَامًا
وَقُعُودًا وَعَلَىٰ جُنُوبِكُمْ ۚ فَإِذَا اطْمَأْنَنتُمْ
فَأَقِيمُوا الصَّلَاةَ ۚ إِنَّ الصَّلَاةَ كَانَتْ
عَلَى الْمُؤْمِنِينَ كِتَابًا مَّوْقُوتًا ﴿١٠٣﴾

103. ನಮಾಝ್ ಮುಗಿಸಿಕೊಂಡ ಬಳಿಕ ನಿಂತೂ ಕುಳಿತೂ ಮಲಗಿಯೂ ಎಲ್ಲ ಅವಸ್ಥೆಗಳಲ್ಲೂ ಅಲ್ಲಾಹನನ್ನು ಸ್ಮರಿಸುತ್ತಲೇ ಇರಿ. ಶಾಂತಿಯುಂಟಾದ ಮೇಲೆ ಸಂಪೂರ್ಣ ನಮಾಝನ್ನು ನೆರವೇರಿಸಿರಿ. ವಾಸ್ತವದಲ್ಲಿ ನಮಾಝ್ ಸತ್ಯವಿಶ್ವಾಸಿಗಳ ಮೇಲೆ ಸಮಯಪಾಲನೆಯೊಂದಿಗೆ ನೆರವೇರಿಸಲು ವಿಧಿಸಲ್ಪಟ್ಟಿರುವ ಕಡ್ಡಾಯ ವಿಧಿಯಾಗಿರುತ್ತದೆ.

وَلَا تَهِنُوا فِي ابْتِغَاءِ الْقَوْمِ ۖ إِن تَكُونُوا
تَأْلَمُونَ فَإِنَّهُمْ يَأْلَمُونَ كَمَا تَأْلَمُونَ ۖ
وَتَرْجُونَ مِنَ اللَّهِ مَا لَا يَرْجُونَ ۗ
وَكَانَ اللَّهُ عَلِيمًا حَكِيمًا ﴿١٠٤﴾

104. ಈ ಗುಂಪನ್ನು ಬೆನ್ನಟ್ಟುವುದರಲ್ಲಿ ದೌರ್ಬಲ್ಯ ತೋರಬೇಡಿರಿ. ನೀವು ಕಷ್ಟಪಡುತ್ತಿರುವಿರಾದರೆ ನಿಮ್ಮಂತೆ ಅವರೂ ಕಷ್ಟಪಡುತ್ತಿದ್ದಾರೆ. ಅವರು ಅಲ್ಲಾಹನಿಂದ ಪ್ರತೀಕ್ಷಿಸದಿರುವುದನ್ನು ನೀವು ಪ್ರತೀಕ್ಷಿಸುತ್ತೀರಿ. ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

إِنَّا أَنزَلْنَا إِلَيْكَ الْكِتَابَ بِالْحَقِّ
لِتَحْكُمَ بَيْنَ النَّاسِ بِمَا أَرَاكَ اللَّهُ ۚ
وَلَا تَكُن لِّلْخَائِنِينَ خَصِيمًا ﴿١٠٥﴾

105. ಓ ಪೈಗಂಬರರೇ ಅಲ್ಲಾಹ್ ನಿಮಗೆ ತೋರಿಸಿಕೊಟ್ಟ ಪ್ರಕಾರ ಜನರ ನಡುವೆ ತೀರ್ಪು ನೀಡಲಿಕ್ಕಾಗಿ ನಾವು ನಿಮ್ಮ ಮೇಲೆ ಈ ಗ್ರಂಥವನ್ನು ಸತ್ಯ ಸಹಿತ ಅವತೀರ್ಣಗೊಳಿಸಿದ್ದೇವೆ. ನೀವು ಅಪ್ರಾಮಾಣಿಕರ ಪರವಾಗಿ ವಾದಿಸುವವರಾಗಬೇಡಿರಿ.

وَاسْتَغْفِرِ اللَّهَ ۖ إِنَّ اللَّهَ كَانَ غَفُورًا رَّحِيمًا ﴿١٠٦﴾

106. ಪಾಪ ವಿಮೋಚನೆಗಾಗಿ ಅಲ್ಲಾಹನನ್ನು ಪ್ರಾರ್ಥಿಸಿರಿ. ಅವನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

وَلَا تُجَادِلْ عَنِ الَّذِينَ يَخْتَانُونَ أَنفُسَهُمْ ۚ
إِنَّ اللَّهَ لَا يُحِبُّ مَن كَانَ خَوَّانًا أَثِيمًا ﴿١٠٧﴾

107. ಆತ್ಮವಂಚನೆ ಮಾಡುವವರನ್ನು[74] ನೀವು ಸಮರ್ಥಿಸಬೇಡಿರಿ. ನಿಶ್ಚಯವಾಗಿಯೂ ವಿಶ್ವಾಸಘಾತಕ ಮತ್ತು ಪಾಪಕರ್ಮಿಗಳಾದವರು ಅಲ್ಲಾಹನಿಗೆ ಮೆಚ್ಚುಗೆಯವರಲ್ಲ.

74. ಇತರರನ್ನು ವಂಚಿಸುವವನು ವಾಸ್ತವದಲ್ಲಿ ಮೊತ್ತ ಮೊದಲು ತನ್ನನ್ನು ತಾನೇ ವಂಚಿಸಿಕೊಳ್ಳುತ್ತಾನೆ.

108. ಇವರು ತಮ್ಮ ಚಟುವಟಿಕೆಗಳನ್ನು ಮಾನವರಿಗೆ ತಿಳಿಯದಂತೆ ಅಡಗಿಸಿಬಿಡಬಲ್ಲರು. ಆದರೆ ಅಲ್ಲಾಹನಿಗೆ ತಿಳಿಯದಂತೆ ಅಡಗಿಸಲಾರರು. ಇವರು ರಾತ್ರಿಕಾಲದಲ್ಲಿ ಅವಿತುಕೊಂಡು ಅವನ ಇಚ್ಛೆಗೆ ವಿರುದ್ಧ ಗೂಢಾಲೋಚನೆ ನಡೆಸುತ್ತಿರುವಾಗಲೂ ಆತನು ಇವರ ಸಂಗಡವೇ ಇರುತ್ತಾನೆ. ಇವರ ಸಕಲ ಕರ್ಮಗಳನ್ನು ಅಲ್ಲಾಹನು ಆವರಿಸಿಕೊಂಡಿರುತ್ತಾನೆ.

يَسْتَخْفُونَ مِنَ النَّاسِ وَلَا يَسْتَخْفُونَ مِنَ
اللَّهِ وَهُوَ مَعَهُمْ إِذْ يُبَيِّتُونَ مَا لَا يَرْضَىٰ
مِنَ الْقَوْلِ ۚ وَكَانَ اللَّهُ بِمَا يَعْمَلُونَ مُحِيطًا ﴿١٠٨﴾

109. ನಿಜ; ನೀವು ಈ ಅಪರಾಧಿಗಳ ಪರವಾಗಿ ಇಹ ಜೀವನದಲ್ಲಂತು ವಾದ ಮಾಡಿದಿರಿ. ಆದರೆ ಪುನರುತ್ಥಾನ ದಿನದಂದು ಇವರಿಗಾಗಿ ಅಲ್ಲಾಹನೊಂದಿಗೆ ವಾದಿಸುವವರು ಯಾರಿದ್ದಾರೆ? ಅಲ್ಲಿ ಇವರ ವಕಾಲತು ವಹಿಸುವವರು ಯಾರು?

هَا أَنتُمْ هَٰؤُلَاءِ جَادَلْتُمْ عَنْهُمْ فِي الْحَيَاةِ
الدُّنْيَا فَمَن يُجَادِلُ اللَّهَ عَنْهُمْ يَوْمَ
الْقِيَامَةِ أَم مَّن يَكُونُ عَلَيْهِمْ وَكِيلًا ﴿١٠٩﴾

110. ಯಾವನಾದರೂ ದುಷ್ಕರ್ಮವೆಸಗಿಬಿಟ್ಟರೆ ಅಥವಾ ತನ್ನ ಮೇಲೆ ತಾನೇ ಅಕ್ರಮವೆಸಗಿದರೆ ಮತ್ತು ಆ ಬಳಿಕ ಅಲ್ಲಾಹನೊಡನೆ ಕ್ಷಮಾಯಾಚನೆ ಮಾಡಿದರೆ, ಅಲ್ಲಾಹನು ಕ್ಷಮಾದಾನಿಯೂ ಕರುಣಾನಿಧಿಯೂ ಆಗಿರುವುದನ್ನು ಅವನು ಕಾಣುವನು.

وَمَن يَعْمَلْ سُوءًا أَوْ يَظْلِمْ نَفْسَهُ ثُمَّ
يَسْتَغْفِرِ اللَّهَ يَجِدِ اللَّهَ غَفُورًا رَّحِيمًا ﴿١١٠﴾

111. ಆದರೆ ಯಾರಾದರೂ ಪಾಪ ಗಳಿಸಿಕೊಂಡರೆ ಅವನ ಈ ಗಳಿಕೆಯು ಅವನಿಗೇ ಕೇಡಾಗುವುದು. ಅಲ್ಲಾಹನಿಗೆ ಸಕಲ ವಿಷಯಗಳ ಅರಿವಿದೆ. ಅವನು ಮಹಾ ಯುಕ್ತಿಪೂರ್ಣನಾಗಿರುತ್ತಾನೆ.

وَمَن يَكْسِبْ إِثْمًا فَإِنَّمَا يَكْسِبُهُ عَلَىٰ
نَفْسِهِ ۚ وَكَانَ اللَّهُ عَلِيمًا حَكِيمًا ﴿١١١﴾

112. ಇನ್ನಾರಾದರೂ ಅಪರಾಧ ಅಥವಾ ಪಾಪಕಾರ್ಯವೆಸಗಿ ಅದರ ಆರೋಪವನ್ನು ಇನ್ನೊಬ್ಬ ನಿರಪರಾಧಿಯ ಮೇಲೆ ಹೊರಿಸಿದರೆ, ಅವನು ಅತಿ ದೊಡ್ಡ ಸುಳ್ಳಾರೋಪಣೆ ಮತ್ತು ಸುವ್ಯಕ್ತ ಪಾತಕದ ಹೊರೆ ಹೊತ್ತುಕೊಂಡನು.

وَمَن يَكْسِبْ خَطِيئَةً أَوْ إِثْمًا ثُمَّ يَرْمِ
بِهِ بَرِيئًا فَقَدِ احْتَمَلَ بُهْتَانًا وَإِثْمًا مُّبِينًا ﴿١١٢﴾

113. ಓ ಪೈಗಂಬರರೇ, ಅಲ್ಲಾಹನ ಅನುಗ್ರಹವೂ ಕೃಪೆಯೂ ನಿಮ್ಮ ಮೇಲೆ ಇಲ್ಲದಿರುತ್ತಿದ್ದರೆ, ಅವರಲ್ಲೊಂದು ಪಂಗಡವು ನಿಮ್ಮನ್ನು ಅಪಗ್ರಹಿಕೆಗೆ ಹಚ್ಚಲು ನಿರ್ಧರಿಸಿಯೇ ಬಿಟ್ಟಿತ್ತು. ವಸ್ತುತಃ ಅವರು ತಮ್ಮನ್ನೇ ಹೊರತು ಇನ್ನಾರನ್ನೂ ಅಪಗ್ರಹಿಕೆಗೆ ಹಚ್ಚುತ್ತಿರಲಿಲ್ಲ. ಅವರು ನಿಮಗೆ ಯಾವ ನಷ್ಟವನ್ನೂ ಮಾಡುವಂತಿರಲಿಲ್ಲ.[75]

وَلَوْلَا فَضْلُ اللَّهِ عَلَيْكَ وَرَحْمَتُهُ لَهَمَّت
طَّائِفَةٌ مِّنْهُمْ أَن يُضِلُّوكَ وَمَا يُضِلُّونَ
إِلَّا أَنفُسَهُمْ ۖ وَمَا يَضُرُّونَكَ مِن شَيْءٍ ۚ
وَأَنزَلَ اللَّهُ عَلَيْكَ الْكِتَابَ وَالْحِكْمَةَ

75. ಅರ್ಥಾತ್- ಅವರು ತಪ್ಪು ವಿವರ ಮತ್ತು ಸಾಕ್ಷ್ಯಾಧಾರಗಳನ್ನು ನೀಡಿ ನಿಮ್ಮನ್ನು ಅಪಗ್ರಹಿಕೆಗೆ ಒಳಗಾಗುವಂತೆ ಮಾಡುವಲ್ಲಿ ಯಶಸ್ವಿಯಾದರೆ ಮತ್ತು ನ್ಯಾಯಕ್ಕೆ ವಿರುದ್ಧವಾಗಿ ತಮ್ಮ ಪರವಾಗಿ ತೀರ್ಮಾನವನ್ನು ಪಡೆದರೆ ನಷ್ಟಕ್ಕೊಳಗಾಗುವವರು ಅವರೇ. ಅದರಿಂದ ನಿಮಗೇನೂ ಕೇಡುಂಟಾಗುವುದಿಲ್ಲ. ಏಕೆಂದರೆ ದೇವನ ದೃಷ್ಟಿಯಲ್ಲಿ ಅವರೇ ಅಪರಾಧಿಯಾಗುತ್ತಾರೆ ವಿನಾ ನೀವಲ್ಲ. ನ್ಯಾಯ

ಅಲ್ಲಾಹನು ನಿಮಗೆ ಗ್ರಂಥ ಹಾಗೂ ಯುಕ್ತಿಯನ್ನು ಅವತೀರ್ಣಗೊಳಿಸಿರುತ್ತಾನೆ ಮತ್ತು ನಿಮಗೆ ತಿಳಿಯದಿದ್ದುದನ್ನು ಕಲಿಸಿರುತ್ತಾನೆ. ಅಲ್ಲಾಹನ ಅನುಗ್ರಹ ನಿಮ್ಮ ಮೇಲೆ ಧಾರಾಳವಿದೆ.

وَعَلَّمَكَ مَا لَمْ تَكُنْ تَعْلَمُ ۚ وَكَانَ فَضْلُ اللّٰهِ عَلَيْكَ عَظِيْمًا ﴿١١٣﴾

114. ಜನರಾಡುವ ಹೆಚ್ಚಿನ ಗುಪ್ತ ಮಾತುಕತೆಗಳಲ್ಲಿ ಯಾವ ಹಿತವೂ ಇರುವುದಿಲ್ಲ. ಯಾರಾದರೂ ರಹಸ್ಯ ದಾನ ಧರ್ಮಗಳ ಬೋಧನೆ ನೀಡಿದರೆ ಅಥವಾ ಯಾವುದಾದರೂ ಸತ್ಕಾರ್ಯಕ್ಕೆ ಅಥವಾ ಜನರೊಳಗೆ ಪರಸ್ಪರ ವ್ಯವಹಾರಗಳನ್ನು ಸರಿಪಡಿಸಲಿಕ್ಕಾಗಿ ಪ್ರೇರೇಪಣೆ ನೀಡಿದರೆ ಇದರಲ್ಲಿ ಹಿತವಿದೆ. ಯಾವನಾದರೂ ಅಲ್ಲಾಹನ ಸಂಪ್ರೀತಿಯ ಪ್ರಾಪ್ತಿಗಾಗಿ ಹೀಗೆ ಮಾಡಿದರೆ ಅವನಿಗೆ ನಾವು ಹಿರಿದಾದ ಪ್ರತಿಫಲ ನೀಡುವೆವು.

لَا خَيْرَ فِيْ كَثِيْرٍ مِّنْ نَّجْوٰىهُمْ اِلَّا مَنْ اَمَرَ بِصَدَقَةٍ اَوْ مَعْرُوْفٍ اَوْ اِصْلَاحٍۭ بَيْنَ النَّاسِ ۚ وَمَنْ يَّفْعَلْ ذٰلِكَ ابْتِغَآءَ مَرْضَاتِ اللّٰهِ فَسَوْفَ نُؤْتِيْهِ اَجْرًا عَظِيْمًا ﴿١١٤﴾

115. ಆದರೆ ಸನ್ಮಾರ್ಗವು ವ್ಯಕ್ತವಾದ ಬಳಿಕವೂ ಸಂದೇಶವಾಹಕರ ವಿರುದ್ಧ ಟೊಂಕ ಕಟ್ಟಿಕೊಂಡವನನ್ನೂ ಸತ್ಯವಿಶ್ವಾಸಿಗಳ ಮಾರ್ಗದ ಹೊರತು ಅನ್ಯ ಮಾರ್ಗಗಳಲ್ಲಿ ನಡೆಯುವವನನ್ನೂ ಅವನು ತಾನಾಗಿ ತಿರುಗಿಕೊಂಡ ಕಡೆಗೇ ನಾವು ತಿರುಗಿಸಿ ಬಿಡುವೆವು ಮತ್ತು ಅವನನ್ನು ಅತ್ಯಂತ ನಿಕೃಷ್ಟ ಸ್ಥಾನವಾಗಿರುವ ನರಕಕ್ಕೆ ತಳ್ಳಿಬಿಡುವೆವು.

وَمَنْ يُّشَاقِقِ الرَّسُوْلَ مِنْۢ بَعْدِ مَا تَبَيَّنَ لَهُ الْهُدٰى وَيَتَّبِعْ غَيْرَ سَبِيْلِ الْمُؤْمِنِيْنَ نُوَلِّهٖ مَا تَوَلّٰى وَنُصْلِهٖ جَهَنَّمَ ۚ وَسَآءَتْ مَصِيْرًا ﴿١١٥﴾

116. ಅಲ್ಲಾಹನು ತನ್ನೊಂದಿಗೆ ಇತರರನ್ನು ಭಾಗೀದಾರರನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು ಅವನು ಕ್ಷಮಿಸಲಿಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು. ಅಲ್ಲಾಹನೊಂದಿಗೆ ಯಾರನ್ನಾದರೂ ಭಾಗೀದಾರರನ್ನಾಗಿ ಮಾಡಿದವನು ಪಥಭ್ರಷ್ಟತೆಯಲ್ಲಿ ಬಹುದೂರ ಸಾಗಿಬಿಟ್ಟನು.

اِنَّ اللّٰهَ لَا يَغْفِرُ اَنْ يُّشْرَكَ بِهٖ وَيَغْفِرُ مَا دُوْنَ ذٰلِكَ لِمَنْ يَّشَآءُ ۚ وَمَنْ يُّشْرِكْ بِاللّٰهِ فَقَدْ ضَلَّ ضَلٰلًاۢ بَعِيْدًا ﴿١١٦﴾

117. ಅವರು ಅಲ್ಲಾಹನನ್ನು ಬಿಟ್ಟು ದೇವಿಗಳನ್ನು ಆರಾಧ್ಯರನ್ನಾಗಿ ಮಾಡುತ್ತಾರೆ. ಅವರು ಅಲ್ಲಾಹನು ಶಪಿಸಿರುವ ಆ ಬಂಡುಕೋರ ಶೈತಾನನನ್ನು ಆರಾಧ್ಯನನ್ನಾಗಿ ಮಾಡುತ್ತಾರೆ-[76]

اِنْ يَّدْعُوْنَ مِنْ دُوْنِهٖۤ اِلَّآ اِنٰثًا ۚ وَاِنْ يَّدْعُوْنَ اِلَّا شَيْطٰنًا مَّرِيْدًا ﴿١١٧﴾

ತೀರ್ಮಾನ ಮಾಡುವವರನ್ನು ವಂಚಿಸಿ ತನ್ನ ಪರವಾಗಿ ತೀರ್ಪನ್ನು ಪಡೆಯುವವನು ಈ ಯುಕ್ತಿಗಳಿಂದಾಗಿ ಸತ್ಯ ತನ್ನ ಕಡೆಗಾಯಿತು ಎಂಬ ಭ್ರಮೆಗೆ ಒಳಗಾಗುತ್ತಾನೆ. ವಾಸ್ತವದಲ್ಲಿ ಅಲ್ಲಾಹನ ದೃಷ್ಟಿಯಲ್ಲಿ ಸತ್ಯ ಅದರ ನಿಜವಾದ ಹಕ್ಕುದಾರರಿಗೇ ಸಲ್ಲುತ್ತದೆ. ನ್ಯಾಯಾಧೀಶನ ತಪ್ಪುತಿಳುವಳಿಕೆಯಿಂದಾಗಿ ನೀಡಲ್ಪಡುವ ಯಾವುದೇ ತೀರ್ಪು ಸತ್ಯವನ್ನು ಯಾವ ರೀತಿಯಲ್ಲೂ ಬಾಧಿಸುವುದಿಲ್ಲ.

76. ಶೈತಾನನ ಮುಂದೆ ಯಾರೂ ಅರ್ಚನಾ ವಿಧಿಗಳನ್ನು ನಡೆಸುವುದಿಲ್ಲ. ಅದಕ್ಕೆ ದೇವತ್ವದ ಪಟ್ಟವನ್ನು ನೀಡುವುದಿಲ್ಲ. ಈ ಅರ್ಥದಲ್ಲಿ ಯಾರೂ ಶೈತಾನನ್ನು ಆರಾಧ್ಯನಾಗಿ ಮಾಡುವುದಿಲ್ಲ. ಶೈತಾನನ್ನು ಆರಾಧ್ಯನಾಗಿ ಮಾಡುವುದೆಂದರೆ ತನ್ನ ಮನಸ್ಸನ್ನು ಶೈತಾನನ ಅಂಕಿತಕ್ಕೆ ಕೊಟ್ಟು ಬಿಡುವುದಾಗಿದೆ. ಶೈತಾನನೇ ತನ್ನ ಪ್ರಭು ಮತ್ತು ತಾನು ಅವನ ದಾಸನೇನೋ ಎಂಬಂತೆ ಅವನು ಹೋದೆಡೆಯಲ್ಲೆಲ್ಲಾ ಅವನನ್ನು ಹಿಂಬಾಲಿಸುವುದಾಗಿದೆ. ನಿಶ್ಯರ್ಥವಾದ ಅನುಸರಣೆ ಮತ್ತು ಅಂಧಾನುಕರಣೆಯೂ, 'ಇಬಾದತ್' ಆಗಿದೆ ಎಂದು ಇದರಿಂದ

118. ಅವನು ಅಲ್ಲಾಹನೊಡನೆ, "ನಾನು ನಿನ್ನ ದಾಸರ ಪೈಕಿ ಒಂದು ನಿಶ್ಚಿತ ಪಾಲನ್ನು ಪಡೆದೇ ತೀರುವೆನು.[77]

لَّعَنَهُ اللَّهُ ۘ وَقَالَ لَأَتَّخِذَنَّ مِنْ عِبَادِكَ نَصِيبًا مَّفْرُوضًا ﴿١١٨﴾

119. ನಾನು ಅವರನ್ನು ಪಥಭ್ರಷ್ಟಗೊಳಿಸುವೆನು. ನಾನು ಅವರನ್ನು ಆಶೆ, ಆಕಾಂಕ್ಷೆಗಳಲ್ಲಿ ಸಿಲುಕಿಸಿಬಿಡುವೆನು. ನಾನು ಅವರಿಗೆ ಅಪ್ಪಣೆ ಕೊಡುವೆನು. ಆಗ ಅವರು ನನ್ನ ಅಪ್ಪಣೆಯಂತೆ ಪ್ರಾಣಿಗಳ ಕಿವಿಗಳನ್ನು ಹರಿಯುವರು.[78] ನಾನು ಅಪ್ಪಣೆ ಕೊಡುವೆನು. ಆಗ ಅವರು ನನ್ನ ಅಪ್ಪಣೆಯಂತೆ ಅಲ್ಲಾಹನ ಸೃಷ್ಟಿಯಲ್ಲಿ ವಿಕೃತಿಯನ್ನುಂಟು ಮಾಡುವರು"[79] ಎಂದು ಹೇಳಿದ್ದನು. (ಅವರು ಆ ಶೈತಾನನ ಅನುಸರಣೆ ಮಾಡುತ್ತಿದ್ದಾರೆ.) ಅಲ್ಲಾಹನ ಬದಲಿಗೆ ಶೈತಾನನನ್ನು ತನ್ನ ರಕ್ಷಕ ಮಿತ್ರನನ್ನಾಗಿ ಮಾಡಿಕೊಂಡಾತನು ವ್ಯಕ್ತವಾದ ನಷ್ಟಕ್ಕೆ ಗುರಿಯಾದನು.

وَلَأُضِلَّنَّهُمْ وَلَأُمَنِّيَنَّهُمْ وَلَآمُرَنَّهُمْ فَلَيُبَتِّكُنَّ آذَانَ الْأَنْعَامِ وَلَآمُرَنَّهُمْ فَلَيُغَيِّرُنَّ خَلْقَ اللَّهِ ۚ وَمَن يَتَّخِذِ الشَّيْطَانَ وَلِيًّا مِّن دُونِ اللَّهِ فَقَدْ خَسِرَ خُسْرَانًا مُّبِينًا ﴿١١٩﴾

120. ಅವನು ಇವರಿಗೆ ವಾಗ್ದಾನ ಮಾಡುತ್ತಾನೆ ಮತ್ತು ಇವರಿಗೆ ಭರವಸೆ ಕೊಡುತ್ತಾನೆ. ಆದರೆ ಶೈತಾನನ ಎಲ್ಲ ವಾಗ್ದಾನಗಳು ವಂಚನೆಯ ವಿನಾ ಇನ್ನೇನೂ ಅಲ್ಲ.

يَعِدُهُمْ وَيُمَنِّيهِمْ ۖ وَمَا يَعِدُهُمُ الشَّيْطَانُ إِلَّا غُرُورًا ﴿١٢٠﴾

121. ಇವರ ವಾಸಸ್ಥಾನವು ನರಕವಾಗಿದ್ದು ಅದರಿಂದ ರಕ್ಷಣೆ ಹೊಂದುವ ಯಾವ ವಿಧಾನವನ್ನೂ ಇವರು ಕಾಣಲಾರರು.

أُولَٰئِكَ مَأْوَاهُمْ جَهَنَّمُ وَلَا يَجِدُونَ عَنْهَا مَحِيصًا ﴿١٢١﴾

122. ಸತ್ಯವಿಶ್ವಾಸವನ್ನಿರಿಸಿಕೊಂಡು ಸತ್ಕರ್ಮಗಳನ್ನು ಕೈಗೊಂಡವರಿಗೆ ನಾವು ತಳಭಾಗದಲ್ಲಿ ನದಿಗಳು ಹರಿಯುವಂತಹ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಕೊಡುವೆವು. ಅವರು ಅಲ್ಲಿ ಸದಾಕಾಲ ವಾಸಿಸುವರು. ಇದು ಅಲ್ಲಾಹನ ದಿಟವಾದ ವಾಗ್ದಾನ. ಅಲ್ಲಾಹನಿಗಿಂತ ಅಧಿಕ ಸತ್ಯವಂತನು ಇನ್ನಾರಿದ್ದಾನೆ.

وَالَّذِينَ آمَنُوا وَعَمِلُوا الصَّالِحَاتِ سَنُدْخِلُهُمْ جَنَّاتٍ تَجْرِي مِن تَحْتِهَا الْأَنْهَارُ خَالِدِينَ فِيهَا أَبَدًا ۖ وَعْدَ اللَّهِ حَقًّا ۚ وَمَنْ أَصْدَقُ مِنَ اللَّهِ قِيلًا ﴿١٢٢﴾

ಅರ್ಥವಾಗುತ್ತದೆ. ಈ ರೀತಿಯ ಅನುಸರಣೆ ಮಾಡುವವನು ವಾಸ್ತವದಲ್ಲಿ ಅಲ್ಲಾಹನನ್ನು ಬಿಟ್ಟು ಯಾರನ್ನು ಅನುಸರಿಸುತ್ತಿದ್ದಾನೋ ಅವನನ್ನೇ ಆರಾಧಿಸುತ್ತಿದ್ದಾನೆ.

77. ಅರ್ಥಾತ್- ಅವರ ಸಮಯ, ಪ್ರಯತ್ನ, ದುಡಿಮೆ, ಶಕ್ತಿ-ಸಾಮರ್ಥ್ಯ, ಸಂಪತ್ತು ಮತ್ತು ಸಂತಾನಗಳೆಲ್ಲದರಲ್ಲೂ ತಾನು ಪಾಲುದಾರನಾಗುವೆನು. ಅವರನ್ನು ವಂಚಿಸಿ ಎಲ್ಲದರ ಒಂದು ಗಣನೀಯ ಅಂಶವನ್ನು ನನ್ನ ಮಾರ್ಗದಲ್ಲಿ ವಿನಿಯೋಗಿಸುವಂತೆ ಮಾಡುವೆನು.

78. ಇದು ಅರೇಬಿಯಾದ ಜನರಲ್ಲಿದ್ದ ಮೂಢನಂಬಿಕೆಗಳ ಪೈಕಿ ಒಂದರ ಕಡೆಗಿರುವ ಸೂಚನೆ. ಹೆಣ್ಣು ಒಂಟೆಯು ಐದು ಅಥವಾ ಹತ್ತು ಬಾರಿ ಮರಿಹಾಕಿದ ನಂತರ ಅವರು ಅದರ ಕಿವಿ ಕತ್ತರಿಸಿ ತಮ್ಮ ದೇವತೆಯ ಹೆಸರಲ್ಲಿ ಅದನ್ನು ಬಿಟ್ಟು ಬಿಡುತ್ತಿದ್ದರು. ಅಂತಹ ಒಂಟೆಯನ್ನು ಸ್ವಂತಕ್ಕೆ ಉಪಯೋಗಿಸುವುದು ಪಾಪಕೃತ್ಯವೆಂದು ಭಾವಿಸುತ್ತಿದ್ದರು. ಹಾಗೆಯೇ ಹತ್ತು ಒಂಟೆಯ ಮರಿಯ ಜನನಕ್ಕೆ ಕಾರಣವಾದ ಗಂಡು ಒಂಟೆಯನ್ನೂ ದೇವತೆಯ ಹೆಸರಲ್ಲಿ ಬಿಟ್ಟು ಬಿಡುತ್ತಿದ್ದರು. ಕಿವಿ ಕತ್ತರಿಸುವುದು ಅದು ಹರಕೆಗೆ ಬಿಟ್ಟ ಪ್ರಾಣಿಯೆಂದು ಸೂಚಿಸುವಂತಹ ಒಂದು ಚಿಹ್ನೆಯಾಗಿತ್ತು.

79. ಅಲ್ಲಾಹನ ಸೃಷ್ಟಿಯಲ್ಲಿ ವಿಕೃತಿಯನ್ನುಂಟುಮಾಡುವುದೆಂದರೆ ಹುಟ್ಟು ಆಕಾರವನ್ನು ಬದಲಿಸುವುದೆಂದು ಅರ್ಥವಲ್ಲ. ಅಲ್ಲಾಹನು ಒಂದು ವಸ್ತುವನ್ನು ಯಾವುದಕ್ಕಾಗಿ ಸೃಷ್ಟಿಸಿದ್ದಾನೋ ಅದಕ್ಕಾಗಿ ಅದನ್ನು ಉಪಯೋಗಿಸದಿರುವ ಮತ್ತು ಯಾವುದಕ್ಕಾಗಿ ಅದನ್ನು ಸೃಷ್ಟಿಸಿಲ್ಲವೋ

123. ಕರ್ಮಗಳ ಪರಿಣಾಮವು ನಿಮ್ಮ ಆಶೋತ್ತರಗಳನ್ನಾಗಲಿ, ಗ್ರಂಥದವರ ಆಶೋತ್ತರಗಳನ್ನಾಗಲಿ ಹೊಂದಿಕೊಂಡಿರುವುದಿಲ್ಲ- ಕೇಡು ಯಾರು ಮಾಡಿದರೂ ಅದರ ಫಲವನ್ನು ಅವನು ಪಡೆದೇ ತೀರುವನು ಮತ್ತು ಅವನು ಅಲ್ಲಾಹನ ಎದುರು ಯಾರನ್ನೂ ತನ್ನ ರಕ್ಷಕ ಮಿತ್ರನನ್ನಾಗಿಯೂ ಸಹಾಯಕನನ್ನಾಗಿಯೂ ಹೊಂದಲಾರನು.

لَيْسَ بِاَمَانِيِّكُمْ وَلَآ اَمَانِيِّ اَهْلِ الْكِتٰبِ ۗ
مَنْ يَّعْمَلْ سُوْٓءًا يُّجْزَ بِهٖ ۙ وَلَا يَجِدْ لَهٗ
مِنْ دُوْنِ اللّٰهِ وَلِيًّا وَّلَا نَصِيْرًا ﴿١٢٣﴾

124. ಪುರುಷನಿರಲಿ ಅಥವಾ ಸ್ತ್ರೀ ಇರಲಿ ಸತ್ಕರ್ಮ ಮಾಡುವವರು ಸತ್ಯವಿಶ್ವಾಸಿಗಳಾಗಿದ್ದರೆ ಇಂತಹವರೇ ಸ್ವರ್ಗದಲ್ಲಿ ಪ್ರವೇಶ ಪಡೆಯುವರು. ಕಿಂಚಿತ್ತೂ ಇವರ ಹಕ್ಕು ಚ್ಯುತಿಯಾಗಲಾರದು.

وَمَنْ يَّعْمَلْ مِنَ الصّٰلِحٰتِ مِنْ ذَكَرٍ اَوْ
اُنْثٰى وَهُوَ مُؤْمِنٌ فَاُولٰٓئِكَ يَدْخُلُوْنَ
الْجَنَّةَ وَلَا يُظْلَمُوْنَ نَقِيْرًا ﴿١٢٤﴾

125. ಅಲ್ಲಾಹನಿಗೆ ಶರಣುಹೋಗಿ ಸುನೀತನಾಗಿ ಏಕನಿಷ್ಠೆಯಿಂದ ಇಬ್‌ರಾಹೀಮರ - ಅಲ್ಲಾಹನು ತನ್ನ ಮಿತ್ರನಾಗಿಸಿಕೊಂಡ ಆ ಇಬ್‌ರಾಹೀಮರ- ಸಂಪ್ರದಾಯವನ್ನನುಸರಿಸುವವನಿಗಿಂತ ಉತ್ತಮವಾದ ಜೀವನ ಪದ್ಧತಿ ಇನ್ನಾರದ್ದಾಗಿರಲು ಸಾಧ್ಯ?

وَمَنْ اَحْسَنُ دِيْنًا مِّمَّنْ اَسْلَمَ وَجْهَهٗ
لِلّٰهِ وَهُوَ مُحْسِنٌ وَّاتَّبَعَ مِلَّةَ اِبْرٰهِيْمَ
حَنِيْفًا ۗ وَاتَّخَذَ اللّٰهُ اِبْرٰهِيْمَ خَلِيْلًا ﴿١٢٥﴾

126. ಭೂಮಿ-ಆಕಾಶಗಳೆಲ್ಲವೂ ಅಲ್ಲಾಹನದು. ಅಲ್ಲಾಹನು ಸಮಸ್ತ ವಸ್ತುಗಳನ್ನು ಆವರಿಸಿಕೊಂಡಿದ್ದಾನೆ.

وَلِلّٰهِ مَا فِي السَّمٰوٰتِ وَمَا فِي الْاَرْضِ ۗ
وَكَانَ اللّٰهُ بِكُلِّ شَيْءٍ مُّحِيْطًا ﴿١٢٦﴾

127. ಜನರು ನಿಮ್ಮೊಡನೆ ಸ್ತ್ರೀಯರ ವಿಷಯದಲ್ಲಿ 'ಫತ್ವಾ' (ಧರ್ಮವಿಧಿ) ಕೇಳುತ್ತಾರೆ.[80] ಹೇಳಿರಿ:- "ಅಲ್ಲಾಹನು ನಿಮಗೆ ಅವರ ವಿಷಯದಲ್ಲಿ 'ಧರ್ಮವಿಧಿ' ನೀಡುತ್ತಾನೆ ಮತ್ತು ಜೊತೆಗೇ ನಿಮಗೆ ಈ ಗ್ರಂಥದಲ್ಲಿ ಮುಂಚಿನಿಂದಲೇ ತಿಳಿಸಿರುವ ಆಜ್ಞೆಗಳನ್ನೂ ನೆನಪಿಗೆ ತಂದುಕೊಡುತ್ತಾನೆ. ಅರ್ಥಾತ್ - ನೀವು ನಿಶ್ಚಿತ ಹಕ್ಕನ್ನು ಸಲ್ಲಿಸದ ಹಾಗೂ ನೀವು ವಿವಾಹ ಮಾಡಿಕೊಳ್ಳಲು ಹಿಂಜರಿಯುವ (ಅಥವಾ ಅತಿಯಾಸೆಯಿಂದ ನೀವು ಸ್ವತಃ ಅವರೊಂದಿಗೆ ವಿವಾಹ ಮಾಡಲು ಬಯಸುವ)[81] ಅನಾಥ ಹೆಣ್ಮಕ್ಕಳ ಬಗೆಗಿರುವ

وَيَسْتَفْتُوْنَكَ فِي النِّسَآءِ ۗ قُلِ اللّٰهُ يُفْتِيْكُمْ
فِيْهِنَّ ۙ وَمَا يُتْلٰى عَلَيْكُمْ فِي الْكِتٰبِ فِيْ
يَتٰمَى النِّسَآءِ الّٰتِيْ لَا تُؤْتُوْنَهُنَّ مَا كُتِبَ
لَهُنَّ وَتَرْغَبُوْنَ اَنْ تَنْكِحُوْهُنَّ وَالْمُسْتَضْعَفِيْنَ
مِنَ الْوِلْدَانِ ۙ وَاَنْ تَقُوْمُوْا لِلْيَتٰمٰى بِالْقِسْطِ ۗ

ಅದಕ್ಕಾಗಿ ಅದನ್ನು ಉಪಯೋಗಿಸುವ ಕ್ರಿಯೆಯನ್ನು ಇಲ್ಲಿ ಪೈಶಾಚಿಕ ಕೃತ್ಯವೆನ್ನಲಾಗಿದೆ. ವಸ್ತುವಿನ ಪ್ರಕೃತಿಗೆ ವಿರುದ್ಧವಾದ ಎಲ್ಲಾ ಕೆಲಸಗಳು ಮತ್ತು ಪ್ರಕೃತಿಯ ಬೇಡಿಕೆಯಿಂದ ಮುಕ್ತವಾಗಲು ಅಳವಡಿಸಲಾಗುವ ಎಲ್ಲಾ ವಿಧಾನಗಳು ಈ ಸೂಕ್ತದ ಪ್ರಕಾರ ಪೈಶಾಚಿಕ ಪ್ರೇರಣೆಯ ಪರಿಣಾಮವಾಗಿವೆ. ಉದಾಹರಣೆಗೆ ಸಲಿಂಗರತಿ, ಗರ್ಭಪಾತ, ಸನ್ಯಾಸ, ಬ್ರಹ್ಮಚರ್ಯೆ, ಸ್ತ್ರೀ ಪುರುಷರನ್ನು ಬಂಜೆಯರಾಗಿ ಮಾಡುವುದು, ಪುರುಷರನ್ನು ಶಿಖಂಡಿಯಾಗಿ ಮಾಡುವುದು. ಮಹಿಳೆಯರನ್ನು ಅವರ ನಿಸರ್ಗದತ್ತ ಕರ್ತವ್ಯಗಳಿಂದ ವಿಮುಖಗೊಳಿಸುವುದು, ಪುರುಷರ ಪಾಲಿಗಿರುವ ನಾಗರಿಕತೆಯ ರಂಗಗಳಲ್ಲಿ ಅವರನ್ನು ಎಳೆತರುವುದು ಇತ್ಯಾದಿ.

80. ಜನರು ಯಾವ ವಿಷಯದಲ್ಲಿ ಧರ್ಮ ವಿಧಿ ಕೇಳುತ್ತಿದ್ದಾರೆಂದು ಸ್ಪಷ್ಟೀಕರಿಸಲಾಗಿಲ್ಲ. ಆದರೆ 128ರಿಂದ 130ರ ತನಕದ ಸೂಕ್ತಗಳಲ್ಲಿ ಪ್ರಸ್ತಾಪಿಸಲಾಗಿರುವ ಧರ್ಮವಿಧಿಯನ್ನು ಗಮನಿಸಿದರೆ ಪ್ರಶ್ನೆಯ ಇಂಗಿತ ಅರ್ಥವಾಗುತ್ತದೆ.

81. 'ತರ್‌ಗಬೂನ ಅನ್ ತಂಕಿಹೂಹುನ್ನ' ಎಂದರೆ 'ನೀವು ಅವರನ್ನು ವಿವಾಹವಾಗುವ ಆಸಕ್ತಿಯನ್ನು ಹೊಂದಿರುವಿರಿ' ಎಂದೂ ಆಗಬಹುದು. ಇಲ್ಲವೇ 'ನೀವು ಅವರನ್ನು ವಿವಾಹವಾಗಲಿಚ್ಛಿಸುವುದಿಲ್ಲ' ಎಂದೂ ಆಗಬಹುದು.

ಆಜ್ಞೆಗಳನ್ನು ಮತ್ತು ದುರ್ಬಲ ಮಕ್ಕಳ ಬಗೆಗಿರುವ ಆಜ್ಞೆಗಳನ್ನು (ನೆನಪಿಗೆ ತಂದುಕೊಡಲಾಗುತ್ತದೆ.) ಅನಾಥರೊಂದಿಗೆ ನ್ಯಾಯದಿಂದ ವರ್ತಿಸಬೇಕೆಂದು ಅಲ್ಲಾಹನು ನಿಮಗೆ ಬೋಧಿಸುತ್ತಾನೆ. ನೀವು ಮಾಡುವ ಒಳಿತುಗಳು ಅಲ್ಲಾಹನ ತಿಳುವಳಿಕೆಗೆ ಬಾರದಿರಲಾರವು."

وَمَا تَفۡعَلُوۡا مِنۡ خَيۡرٍ فَاِنَّ اللّٰهَ كَانَ بِهٖ عَلِيۡمًا ﴿۱۲۷﴾

128. ಓರ್ವ ಸ್ತ್ರೀಗೆ[82] ತನ್ನ ಪತಿಯಿಂದ ದುರ್ವರ್ತನೆ ಅಥವಾ ನಿರ್ಲಕ್ಷ್ಯದ ಭಯವಿದ್ದರೆ, ಪತಿ ಮತ್ತು ಪತ್ನಿ (ಕೆಲವು ಹಕ್ಕು ಬಾಧ್ಯತೆಗಳ ತಾರತಮ್ಯಗಳೊಂದಿಗೆ) ಪರಸ್ಪರ ಸಂಧಾನ ಮಾಡಿಕೊಳ್ಳುವುದರಲ್ಲಿ ದೋಷವಿಲ್ಲ. ಹೇಗಿದ್ದರೂ ಸಂಧಾನವೇ ಅತ್ಯುತ್ತಮ.[83] ಹೃದಯಗಳು ಸಂಕುಚಿತ ಭಾವದ ಕಡೆಗೆ ಬೇಗನೆ ವಾಲುತ್ತವೆ. ಆದರೆ ನೀವು ಸೌಜನ್ಯ ಹಾಗೂ ದೇವಭಯದೊಂದಿಗೆ ವರ್ತಿಸಿದರೆ, ಅಲ್ಲಾಹನು ನಿಮ್ಮ ಈ ವರ್ತನೆಯ ಬಗ್ಗೆ ಬೋಧರಹಿತನಾಗಿರಲಾರನೆಂಬುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ.

وَاِنِ امۡرَاَةٌ خَافَتۡ مِنۡۢ بَعۡلِهَا نُشُوۡزًا اَوۡ اِعۡرَاضًا فَلَا جُنَاحَ عَلَيۡهِمَاۤ اَنۡ يُّصۡلِحَا بَيۡنَهُمَا صُلۡحًا ؕ وَالصُّلۡحُ خَيۡرٌ ؕ وَاُحۡضِرَتِ الۡاَنۡفُسُ الشُّحَّ ؕ وَاِنۡ تُحۡسِنُوۡا وَتَتَّقُوۡا فَاِنَّ اللّٰهَ كَانَ بِمَا تَعۡمَلُوۡنَ خَبِيۡرًا ﴿۱۲۸﴾

129. ಪತ್ನಿಯರ ನಡುವೆ ಸರ್ವಸಂಪೂರ್ಣ ನ್ಯಾಯ ಪಾಲಿಸಲು ನಿಮ್ಮಿಂದ ಸಾಧ್ಯವಾಗದು. ನೀವು ಇಚ್ಛಿಸಿದರೂ ಅದು ನಿಮ್ಮಿಂದ ಸಾಧ್ಯವಾಗದು. ಆದುದರಿಂದ ಒಬ್ಬ ಪತ್ನಿಯು ಅತ್ತ ಜೋತಾಡಿಕೊಂಡಿರುವಂತೆ ಬಿಟ್ಟು ಇನ್ನೊಬ್ಬಳ ಕಡೆಗೇ ವಾಲಿಬಿಡಬೇಡಿರಿ.[84] (ದೇವ ಶಾಸನೋದ್ದೇಶವನ್ನು ಪೂರೈಸಲು ಇಷ್ಟು ಸಾಕು.) ನೀವು ನಿಮ್ಮ ವರ್ತನೆಯನ್ನು ಸರಿಯಾಗಿಟ್ಟುಕೊಂಡರೆ ಮತ್ತು ಅಲ್ಲಾಹನಿಗೆ ಭಯಪಟ್ಟುಕೊಂಡಿದ್ದರೆ ಅಲ್ಲಾಹನು ಕ್ಷಮಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.

وَلَنۡ تَسۡتَطِيۡعُوۡۤا اَنۡ تَعۡدِلُوۡا بَيۡنَ النِّسَآءِ وَلَوۡ حَرَصۡتُمۡ فَلَا تَمِيۡلُوۡا كُلَّ الۡمَيۡلِ فَتَذَرُوۡهَا كَالۡمُعَلَّقَةِ ؕ وَاِنۡ تُصۡلِحُوۡا وَتَتَّقُوۡا فَاِنَّ اللّٰهَ كَانَ غَفُوۡرًا رَّحِيۡمًا ﴿۱۲۹﴾

82. ಇಲ್ಲಿಂದ ಜನರ ಪ್ರಶ್ನೆಗಳಿಗೆ ಉತ್ತರದ ಸರಣಿ ಆರಂಭವಾಗುತ್ತದೆ. ಒಂದಕ್ಕಿಂತ ಹೆಚ್ಚು ಪತ್ನಿಯರಿರುವಾಗ, ಒಬ್ಬಾಕೆಯು ಸ್ತ್ರೀ-ಪುರುಷ ಸಂಪರ್ಕ ಸಾಧ್ಯವಿಲ್ಲದಂತಹ ಸ್ಥಾಯಿರೋಗಕ್ಕೆ ಗುರಿಯಾಗಿದ್ದರೆ ನ್ಯಾಯಪಾಲಿಸುವ ಆದೇಶವನ್ನು ಕೃತಿಗಿಳಿಸುವುದು ಹೇಗೆ ಎಂಬುದು ಪ್ರಶ್ನೆ. ಅಂತಹ ಸಂದರ್ಭದಲ್ಲೂ ಇಬ್ಬರೊಡನೆಯೂ ಒಂದೇ ರೀತಿಯ ಸಾಮೀಪ್ಯ ಇಟ್ಟುಕೊಳ್ಳಲು ಸಾಧ್ಯವೇ? ಏಕ ರೀತಿಯ ಪ್ರೀತಿಯನ್ನು ಹೊಂದಿರಲು ಸಾಧ್ಯವೇ? ದೈಹಿಕ ಸಂಪರ್ಕದಲ್ಲೂ ಸಮಾನತೆ ಪಾಲಿಸಬಹುದೇ? ಒಂದು ವೇಳೆ ಈ ರೀತಿ ನ್ಯಾಯಪಾಲಿಸಲು ಸಾಧ್ಯವಿಲ್ಲವೆಂದಾದರೆ ಎರಡನೆಯ ಪತ್ನಿಯನ್ನು ವಿವಾಹವಾಗಲು ಮೊದಲನೆಯ ಪತ್ನಿಯನ್ನು ಬಿಟ್ಟು ಬಿಡಬೇಕೆ? ಪತ್ನಿ ಸ್ವತಃ ವಿವಾಹ ವಿಚ್ಛೇದನವನ್ನು ಬಯಸದ ಸಂದರ್ಭದಲ್ಲಿ ಸಂಸರ್ಗಕ್ಕೆ ಅಯೋಗ್ಯಳಾಗಿರುವ ಆಕೆ ತನ್ನ ಕೆಲವು ಹಕ್ಕುಗಳಿಂದ ಸ್ವತಃ ಮುಕ್ತಳಾಗಿ ವಿವಾಹ ವಿಚ್ಛೇದನ ಮಾಡದಿರುವಂತೆ ಪತಿಯನ್ನು ಒಲಿಸಿಕೊಳ್ಳಬಹುದೇ? ಹೀಗೆ ಮಾಡುವುದು ನ್ಯಾಯಪಾಲನೆಯ ಶರತ್ತಿಗೆ ವಿರುದ್ಧವಾಗುವುದಿಲ್ಲವೇ? ಎಂಬುದೇ ಆ ಪ್ರಶ್ನೆಗಳು.

83. ಅರ್ಥಾತ್- ವಿವಾಹ ವಿಚ್ಛೇದನ ಮತ್ತು ಪ್ರತ್ಯೇಕತೆಗಿಂತ, ತಾನು ಪ್ರಾಯದ ಒಂದು ಅವಧಿಯನ್ನು ಕಳೆದಿರುವ ಪತಿಯೊಂದಿಗೆ ಸಂಧಾನ ಮಾಡಿಕೊಂಡು ಜತೆಗಿರುವುದೇ ವಾಸಿ.

84. ನ್ಯಾಯಪಾಲನೆಯ ಶರತ್ತಿನೊಂದಿಗೆ ಒಂದೆಡೆ ಪವಿತ್ರ ಕುರ್‌ಆನ್ ಬಹುಪತ್ನಿತ್ವಕ್ಕೆ ಅನುಮತಿ ನೀಡಿದರೆ ನ್ಯಾಯಪಾಲನೆ ಸಾಧ್ಯವಿಲ್ಲವೆನ್ನುವ ಮೂಲಕ ಈ ಅನುಮತಿಯನ್ನು ಮೊಟಕುಗೊಳಿಸುತ್ತದೆ ಎಂಬ ಅರ್ಥವನ್ನು ಕೆಲವರು ಈ ಸೂಕ್ತಕ್ಕೆ ಕಲ್ಪಿಸುತ್ತಾರೆ. ಆದರೆ ಈ ರೀತಿಯ ಅರ್ಥ ಕಲ್ಪಿಸಲು ಈ ಸೂಕ್ತದಲ್ಲಿ ಸರ್ವಥಾ ಅವಕಾಶವಿಲ್ಲ. "ಪತ್ನಿಯರ ನಡುವೆ ಸರ್ವ ಸಂಪೂರ್ಣ ನ್ಯಾಯಪಾಲಿಸಲು ನಿಮ್ಮಿಂದ ಸಾಧ್ಯವಾಗದು" ಎಂದಷ್ಟೇ ಹೇಳಲಾಗಿದ್ದರೆ ಈ ರೀತಿ ಅರ್ಥೈಸಬಹುದಾಗಿತ್ತು. ಆದರೆ "ಒಂದು ಪತ್ನಿಯ ಕಡೆಗೆ ನೀವು ಸಂಪೂರ್ಣ ವಾಲದಿರಿ" ಎಂದು ಹೇಳುವ ಮೂಲಕ ಐರೋಪ್ಯ ಕ್ರೈಸ್ತರ ಅಂಧಾನುಕರಣೆ ಮಾಡುವವರ ಇಂತಹ ವಾದಕ್ಕೆ ಇಲ್ಲಿ ಅವಕಾಶವುಳಿಸಲಾಗಿಲ್ಲ.

130. ಆದರೆ ದಂಪತಿಗಳು ಪರಸ್ಪರ ಬೇರ್ಪಟ್ಟೇ ಬಿಟ್ಟರೆ ಅಲ್ಲಾಹ್ ತನ್ನ ಅಪಾರ ಮಹಿಮೆಯಿಂದ ಒಬ್ಬರನ್ನು ಇನ್ನೊಬ್ಬರಿಂದ ನಿರಪೇಕ್ಷರನ್ನಾಗಿ ಮಾಡಿಬಿಡುವನು. ಅಲ್ಲಾಹನ ಆಶ್ರಯವು ಅತಿ ವಿಶಾಲವಾಗಿದೆ ಮತ್ತು ಅವನು ಮಹಾಧೀಮಂತನೂ ಆಗಿರುತ್ತಾನೆ.

وَإِن يَتَفَرَّقَا يُغْنِ اللّٰهُ كُلًّا مِّن سَعَتِهٖ ۚ
وَكَانَ اللّٰهُ وَاسِعًا حَكِيمًا ﴿١٣٠﴾

131. ಭೂಮಿ-ಆಕಾಶಗಳಲ್ಲಿ ಇರುವುದೆಲ್ಲವೂ ಅಲ್ಲಾಹನ ಸೊತ್ತು. ನಾವು ನಿಮಗಿಂತ ಮುಂಚೆ ಗ್ರಂಥ ನೀಡಿದವರಿಗೆ ಕೊಟ್ಟ ಬೋಧನೆಯೂ ಈಗ ನಿಮಗೆ ಕೊಡುತ್ತಿರುವ ಬೋಧನೆಯೂ ಅಲ್ಲಾಹನನ್ನು ಭಯಪಟ್ಟು ವರ್ತಿಸಿರಿ ಎಂಬುದೇ ಆಗಿರುತ್ತದೆ. ಆದರೆ ನೀವು ನಿರಾಕರಿಸುತ್ತೀರಾದರೆ ನಿರಾಕರಿಸಿರಿ. ಭೂಮ್ಯಾಕಾಶಗಳ ಸಕಲ ವಸ್ತುಗಳ ಒಡೆಯನು ಅಲ್ಲಾಹನೇ ಆಗಿರುತ್ತಾನೆ ಮತ್ತು ಅವನು ನಿರಪೇಕ್ಷನು; ಸ್ವಯಂ ಸ್ತುತ್ಯರ್ಹನು.

وَلِلّٰهِ مَا فِي السَّمٰوٰتِ وَمَا فِي الْأَرْضِ ۗ
وَلَقَدْ وَصَّيْنَا الَّذِينَ أُوتُوا الْكِتٰبَ مِن
قَبْلِكُمْ وَإِيَّاكُمْ أَنِ اتَّقُوا اللّٰهَ ۚ وَإِن
تَكْفُرُوا فَإِنَّ لِلّٰهِ مَا فِي السَّمٰوٰتِ وَمَا
فِي الْأَرْضِ ۚ وَكَانَ اللّٰهُ غَنِيًّا حَمِيدًا ﴿١٣١﴾

132. ಅಹುದು; ಆಕಾಶಗಳಲ್ಲಿರುವ ಮತ್ತು ಭೂಮಿಯಲ್ಲಿರುವ ಸಮಸ್ತ ವಸ್ತುಗಳ ಒಡೆಯ ಅಲ್ಲಾಹನೇ, ಕಾರ್ಯ ನಿರ್ವಹಣೆಗೆ ಅವನೇ ಸಾಕು.

وَلِلّٰهِ مَا فِي السَّمٰوٰتِ وَمَا فِي الْأَرْضِ ۚ
وَكَفٰى بِاللّٰهِ وَكِيلًا ﴿١٣٢﴾

133. ಆತನಿಚ್ಛಿಸಿದರೆ ನಿಮ್ಮನ್ನು ಸರಿಸಿ ನಿಮ್ಮ ಸ್ಥಾನದಲ್ಲಿ ಇತರರನ್ನು ತರುವನು. ಅವನು ಇದಕ್ಕೆ ಸಂಪೂರ್ಣ ಸಾಮರ್ಥ್ಯ ಹೊಂದಿರುತ್ತಾನೆ.

إِن يَشَأْ يُذْهِبْكُمْ أَيُّهَا النَّاسُ وَيَأْتِ
بِآخَرِينَ ۚ وَكَانَ اللّٰهُ عَلٰى ذٰلِكَ قَدِيرًا ﴿١٣٣﴾

134. ಕೇವಲ ಐಹಿಕ ಪ್ರತಿಫಲವನ್ನು ಬಯಸುವಾತನು- ಅಲ್ಲಾಹನ ಬಳಿ ಐಹಿಕ ಪ್ರತಿಫಲವೂ ಇದೆ, ಪಾರಲೌಕಿಕ ಪ್ರತಿಫಲವೂ ಇದೆ ಎಂಬುದನ್ನು ತಿಳಿದಿರಬೇಕು. ಅಲ್ಲಾಹನು ಸರ್ವಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ.

مَّن كَانَ يُرِيدُ ثَوَابَ الدُّنْيَا فَعِندَ اللّٰهِ
ثَوَابُ الدُّنْيَا وَالْآخِرَةِ ۚ وَكَانَ اللّٰهُ
سَمِيعًا بَصِيرًا ﴿١٣٤﴾ ع ١٩ ١٤

135. ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯದ ಧ್ವಜವಾಹಕರೂ ಅಲ್ಲಾಹನಿಗಾಗಿ ಸಾಕ್ಷ್ಯವಹಿಸುವವರೂ ಆಗಿರಿ. ನಿಮ್ಮ ನ್ಯಾಯ ಮತ್ತು ಸಾಕ್ಷ್ಯವು ಸ್ವತಃ ನಿಮ್ಮ ಅಥವಾ ನಿಮ್ಮ ಮಾತಾಪಿತರ ಮತ್ತು ನಿಮ್ಮ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿಯೇ. ಕಕ್ಷಿಯು ಧನಿಕನಿರಲಿ ಅಥವಾ ಬಡವನಿರಲಿ ನಿಮಗಿಂತ ಹೆಚ್ಚಾಗಿ ಅಲ್ಲಾಹನು ಅವರ ಹಿತಚಿಂತಕನಾಗಿರುತ್ತಾನೆ. ಆದುದರಿಂದ

يٰٓأَيُّهَا الَّذِينَ آمَنُوا كُونُوا قَوّٰمِينَ بِالْقِسْطِ
شُهَدَآءَ لِلّٰهِ وَلَوْ عَلٰٓى أَنفُسِكُمْ أَوِ الْوٰلِدَيْنِ
وَالْأَقْرَبِينَ ۚ إِن يَكُنْ غَنِيًّا أَوْ فَقِيرًا
فَاللّٰهُ أَوْلٰى بِهِمَا ۖ فَلَا تَتَّبِعُوا الْهَوٰٓى أَن
تَعْدِلُوا ۚ وَإِن تَلْوُۥٓا أَوْ تُعْرِضُوا فَإِنَّ اللّٰهَ

ನಿಮ್ಮ ಚಿತ್ತಾಸಕ್ತಿಯ ಅನುಸರಣೆಯಲ್ಲಿ ನ್ಯಾಯ ಪರಿಪಾಲನೆ ಯಿಂದ ಸರಿಯಬೇಡಿರಿ. ನೀವು ಗೂಢಾರ್ಥದ ಮಾತುಗಳನ್ನಾಡಿದರೆ ಅಥವಾ ಸತ್ಯದಿಂದ ನುಣುಚಿಕೊಂಡರೆ, ನಿಶ್ಚಯವಾಗಿಯೂ ನೀವು ಮಾಡುತ್ತಿರುವ ಕರ್ಮಗಳ ಅರಿವು ಅಲ್ಲಾಹನಿಗಿದೆ ಯೆಂಬುದು ಚೆನ್ನಾಗಿ ತಿಳಿದಿರಲಿ.

كَانَ بِمَا تَعْمَلُونَ خَبِيرًا ﴿١٣٥﴾

136. ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಮೇಲೆ, ಅವನ ಸಂದೇಶವಾಹಕರ ಮೇಲೆ, ಅವನು ತನ್ನ ಸಂದೇಶವಾಹಕರಿಗೆ ಅವತೀರ್ಣಗೊಳಿಸಿದ ಗ್ರಂಥದ ಮೇಲೆ ಮತ್ತು ಇದಕ್ಕಿಂತ ಮುಂಚೆ ಅವನು ಅವತೀರ್ಣ ಗೊಳಿಸಿದ್ದ ಪ್ರತಿಯೊಂದು ಗ್ರಂಥದ ಮೇಲೆ ವಿಶ್ವಾಸವಿಡಿರಿ.[85] ಅಲ್ಲಾಹನನ್ನೂ ಅವನ ದೇವಚರರನ್ನೂ ಅವನ ಗ್ರಂಥಗಳನ್ನೂ ಅವನ ಸಂದೇಶವಾಹಕರನ್ನೂ ಅಂತಿಮ ದಿನವನ್ನೂ ನಿರಾಕರಿಸಿ ದವನು[86] ಪಥಭ್ರಷ್ಟನಾಗಿ ಅಲೆದಾಡುತ್ತ ಬಹುದೂರ ಹೋಗಿ ಬಿಟ್ಟನು.

يَٰٓأَيُّهَا ٱلَّذِينَ ءَامَنُوٓا۟ ءَامِنُوا۟ بِٱللَّهِ وَرَسُولِهِۦ
وَٱلْكِتَٰبِ ٱلَّذِى نَزَّلَ عَلَىٰ رَسُولِهِۦ وَٱلْكِتَٰبِ
ٱلَّذِىٓ أَنزَلَ مِن قَبْلُ ۚ وَمَن يَكْفُرْ
بِٱللَّهِ وَمَلَٰٓئِكَتِهِۦ وَكُتُبِهِۦ وَرُسُلِهِۦ
وَٱلْيَوْمِ ٱلْءَاخِرِ فَقَدْ ضَلَّ ضَلَٰلًۢا بَعِيدًا ﴿١٣٦﴾

137 ಸತ್ಯವಿಶ್ವಾಸವನ್ನು ಸ್ವೀಕರಿಸಿಕೊಂಡ ಬಳಿಕ, ನಿರಾಕರಿಸಿ, ಪುನಃ ವಿಶ್ವಾಸವಿಟ್ಟು, ಪುನಃ ನಿರಾಕರಿಸಿ, ತಮ್ಮ ನಿರಾಕರಣೆಯಲ್ಲಿ ಮುಂದೆ ಮುಂದೆ ಸಾಗಿದವರನ್ನು ಅಲ್ಲಾಹನು ಎಂದೆಂದಿಗೂ ಕ್ಷಮಿಸಲಾರನು ಮತ್ತು ಅವರಿಗೆ ಸನ್ಮಾರ್ಗದರ್ಶನ ಮಾಡಿಸಲಾರನು.

إِنَّ ٱلَّذِينَ ءَامَنُوا۟ ثُمَّ كَفَرُوا۟ ثُمَّ ءَامَنُوا۟ ثُمَّ
كَفَرُوا۟ ثُمَّ ٱزْدَادُوا۟ كُفْرًا لَّمْ يَكُنِ ٱللَّهُ
لِيَغْفِرَ لَهُمْ وَلَا لِيَهْدِيَهُمْ سَبِيلًۢا ﴿١٣٧﴾

138-139.ಸತ್ಯವಿಶ್ವಾಸಿಗಳನ್ನು ಬಿಟ್ಟು ಸತ್ಯನಿಷೇಧಿಗಳನ್ನು ಮಿತ್ರರನ್ನಾಗಿ ಮಾಡಿಕೊಂಡ ಕಪಟವಿಶ್ವಾಸಿಗಳಿಗೆ ವೇದನಾಯುಕ್ತ ಶಿಕ್ಷೆ ಸಿದ್ಧವಿದೆಯೆಂಬ ಸುವಾರ್ತೆಯನ್ನು ಅರುಹಿ ಬಿಡಿರಿ. ಇವರೇನು

بَشِّرِ ٱلْمُنَٰفِقِينَ بِأَنَّ لَهُمْ عَذَابًا أَلِيمًا ﴿١٣٨﴾
ٱلَّذِينَ يَتَّخِذُونَ ٱلْكَٰفِرِينَ أَوْلِيَآءَ مِن
دُونِ ٱلْمُؤْمِنِينَ ۚ أَيَبْتَغُونَ عِندَهُمُ ٱلْعِزَّةَ

85. ವಿಶ್ವಾಸಿಗಳೊಂದಿಗೆ ವಿಶ್ವಾಸವಿಡಿರಿ ಎಂದು ಹೇಳುವುದು ಮೇಲ್ನೋಟಕ್ಕೆ ವಿಚಿತ್ರವೆನಿಸುತ್ತದೆ. ವಾಸ್ತವದಲ್ಲಿ ಇಲ್ಲಿ "ಈಮಾನ್" (ಸತ್ಯವಿಶ್ವಾಸ) ಎಂಬ ಪದ ಎರಡು ವಿಭಿನ್ನ ಅರ್ಥಗಳಲ್ಲಿ ಪ್ರಯೋಗವಾಗಿದೆ. ಸತ್ಯವಿಶ್ವಾಸ ಸ್ವೀಕರಿಸುವುದರ ಒಂದು ಅರ್ಥ ನಿರಾಕರಣೆಯ ಬದಲು ಅನುಸರಣೆಯ ಮಾರ್ಗವನ್ನು ನೆಚ್ಚಿಕೊಳ್ಳುವುದಾಗಿದೆ. ಅವಿಶ್ವಾಸಿಗಳಿಂದ ಪ್ರತ್ಯೇಕಗೊಂಡು ವಿಶ್ವಾಸಿಗಳ ಸಾಲಿಗೆ ಸೇರುವುದಾಗಿದೆ. ಅದರ ಇನ್ನೊಂದು ಅರ್ಥ ಯಾವುದರ ಮೇಲೆ ಅವನು ವಿಶ್ವಾಸವಿರಿಸಿದ್ದಾನೋ ಅದನ್ನು ಮನಃಪೂರ್ವಕವಾಗಿ ಸಂಪೂರ್ಣ ಶ್ರದ್ಧೆ ಮತ್ತು ಪ್ರಾಮಾಣಿಕತೆಗಳೊಂದಿಗೆ ಒಪ್ಪಿಕೊಳ್ಳುವುದಾಗಿದೆ. ಈ ಸೂಕ್ತದ ಅಭಿಸಂಬೋಧನೆ ಮೊದಲ ಅರ್ಥದಲ್ಲಿ ಬರುವ ಸಮಸ್ತ 'ಸತ್ಯವಿಶ್ವಾಸಿ'ಗಳ ಕಡೆಗಿದೆ. ಎರಡನೆಯ ಅರ್ಥದಂತೆ ಅವರೆಲ್ಲರೂ ನೈಜ ವಿಶ್ವಾಸಿಗಳಾಗಬೇಕೆಂಬ ಬೇಡಿಕೆಯನ್ನು ಅವರ ಮುಂದಿರಿಸಲಾಗಿದೆ.

86. 'ನಿರಾಕರಣೆ'ಗೂ ಎರಡು ಅರ್ಥಗಳಿವೆ. ಮೊದಲನೆಯದಾಗಿ ವ್ಯಕ್ತಿ ಸ್ಪಷ್ಟವಾಗಿ ನಿರಾಕರಿಸಿ ಬಿಡುವುದು. ಎರಡನೆಯದಾಗಿ ನಾಲಗೆಯಿಂದ ಸಮ್ಮತಿಸಿದರೂ ಮನಃಪೂರ್ವಕ ಸಮ್ಮತಿಸದಿರುವುದು ಅಥವಾ ತನ್ನ ಧೋರಣೆಯ ಮೂಲಕ ತಾನು ಯಾವುದನ್ನು ನಂಬುವ ಬಗ್ಗೆ ವಾದಿಸಿಕೊಳ್ಳುತ್ತಿರುವನೋ ಅದನ್ನು ವಸ್ತುತಃ ನಂಬುತ್ತಿಲ್ಲವೆಂದು ಸಾಬೀತು ಪಡಿಸುವುದು.

ಪ್ರತಿಷ್ಠೆಯನ್ನರಸುತ್ತ ಅವರ ಬಳಿಗೆ ಹೋಗುತ್ತಿರುವರೇ? ವಸ್ತುತಃ ಪ್ರತಿಷ್ಠೆಯು ಸರ್ವಸಂಪೂರ್ಣವಾಗಿ ಅಲ್ಲಾಹನಿಗೇ ಆಗಿರುತ್ತದೆ.

فَإِنَّ الْعِزَّةَ لِلّٰهِ جَمِيْعًا ﴿١٣٩﴾

140. "ಅಲ್ಲಾಹನ ವಚನಗಳ ವಿರುದ್ಧ ನಿಷೇಧ ಮಾತುಗಳನ್ನಾಡುತ್ತಿರುವುದನ್ನೂ ಅವು ಅಣಕಿಸಲ್ಪಡುತ್ತಿರುವುದನ್ನೂ ನೀವು ಕೇಳಿದಾಗ, ಅವರು ಬೇರೆ ಮಾತನ್ನಾರಂಭಿಸುವವರೆಗೂ ಅಲ್ಲಿ ಕುಳಿತುಕೊಳ್ಳಬೇಡಿರಿ. ಅನ್ಯಥಾ ನೀವೂ ಅವರಂತೆಯೇ ಆಗುತ್ತೀರಿ" ಎಂದು ಅಲ್ಲಾಹನು ನಿಮಗೆ ಈ ಗ್ರಂಥದಲ್ಲಿ ಮೊದಲೇ ಅಪ್ಪಣೆ ಕೊಟ್ಟಿದ್ದಾನೆ. ಅಲ್ಲಾಹ್ ಕಪಟ ವಿಶ್ವಾಸಿಗಳನ್ನೂ ಸತ್ಯನಿಷೇಧಿಗಳನ್ನೂ ನರಕದಲ್ಲಿ ಒಟ್ಟುಗೂಡಿಸಲಿರುವನೆಂಬುದನ್ನು ನಿಸ್ಸಂದೇಹವಾಗಿ ತಿಳಿದುಕೊಳ್ಳಿರಿ.

وَقَدْ نَزَّلَ عَلَيْكُمْ فِي الْكِتٰبِ اَنْ اِذَا
سَمِعْتُمْ اٰيٰتِ اللّٰهِ يُكْفَرُ بِهَا وَيُسْتَهْزَاُ
بِهَا فَلَا تَقْعُدُوْا مَعَهُمْ حَتّٰى يَخُوْضُوْا فِيْ
حَدِيْثٍ غَيْرِهٖٓ ۖ اِنَّكُمْ اِذًا مِّثْلُهُمْ ۗ اِنَّ
اللّٰهَ جَامِعُ الْمُنٰفِقِيْنَ وَالْكٰفِرِيْنَ فِيْ
جَهَنَّمَ جَمِيْعَا ۨ ﴿١٤٠﴾

141. ಈ ಕಪಟವಿಶ್ವಾಸಿಗಳು ನಿಮ್ಮ ವಿಷಯದಲ್ಲಿ (ನಿಮ್ಮ ಸ್ಥಿತಿ ಏನಾಗುತ್ತಿದೆಯೆಂಬುದನ್ನು) ಕಾದು ನೋಡುತ್ತಿರುತ್ತಾರೆ. ಅಲ್ಲಾಹನ ಕಡೆಯಿಂದ ನಿಮಗೆ ವಿಜಯ ಪ್ರಾಪ್ತಿಯಾದರೆ ಇವರು ನಿಮ್ಮ ಬಳಿಗೆ ಬಂದು, "ನಾವೂ ನಿಮ್ಮೊಂದಿಗೆ ಇರಲಿಲ್ಲವೇ?" ಎನ್ನುವರು. ಸತ್ಯನಿಷೇಧಿಗಳಿಗೆ ಮೇಲುಗೈಯಾದರೆ, ಅವರೊಡನೆ, "ನಿಮ್ಮ ವಿರುದ್ಧ ಹೋರಾಡಲು ಶಕ್ತರಿದ್ದೂ ನಾವು ನಿಮ್ಮನ್ನು ಮುಸ್ಲಿಮರಿಂದ ರಕ್ಷಿಸಲಿಲ್ಲವೇ?" ಎನ್ನುವರು. ಆದುದರಿಂದ ನಿಮ್ಮ ಮತ್ತು ಅವರ ಪ್ರಕರಣದ ತೀರ್ಮಾನವನ್ನು ಅಲ್ಲಾಹನು ಪುನರುತ್ಥಾನ ದಿನದಂದು ಮಾಡುವನು. (ಆ ತೀರ್ಮಾನದಲ್ಲಿ) ಅಲ್ಲಾಹನು ಸತ್ಯವಿಶ್ವಾಸಿಗಳಿಗೆದುರಾಗಿ ಸತ್ಯನಿಷೇಧಿಗಳಿಗೆ ವಿಜಯದ ಯಾವ ದಾರಿಯನ್ನೂ ಇರಿಸಿರುವುದೇ ಇಲ್ಲ.

الَّذِيْنَ يَتَرَبَّصُوْنَ بِكُمْ ۚ فَاِنْ كَانَ لَكُمْ
فَتْحٌ مِّنَ اللّٰهِ قَالُوْٓا اَلَمْ نَكُنْ مَّعَكُمْ ۖ
وَاِنْ كَانَ لِلْكٰفِرِيْنَ نَصِيْبٌ ۙ قَالُوْٓا اَلَمْ
نَسْتَحْوِذْ عَلَيْكُمْ وَنَمْنَعْكُمْ مِّنَ الْمُؤْمِنِيْنَ ۗ
فَاللّٰهُ يَحْكُمُ بَيْنَكُمْ يَوْمَ الْقِيٰمَةِ ۗ وَلَنْ
يَّجْعَلَ اللّٰهُ لِلْكٰفِرِيْنَ عَلَى الْمُؤْمِنِيْنَ سَبِيْلًا ﴿١٤١﴾

142. ಈ ಕಪಟವಿಶ್ವಾಸಿಗಳು ಅಲ್ಲಾಹನೊಂದಿಗೆ ವಂಚನೆ ಮಾಡುತ್ತಿದ್ದಾರೆ. ವಸ್ತುತಃ ಅಲ್ಲಾಹನೇ ಅವರನ್ನು ವಂಚನೆಯಲ್ಲಿ ಸಿಲುಕಿಸಿ ಬಿಟ್ಟಿರುತ್ತಾನೆ. ಇವರು ನಮಾಝ್ ಮಾಡಲು ಅರೆ ಮನಸ್ಸಿನಿಂದ, ಕೇವಲ ಜನರಿಗೆ ತೋರಿಸಲಿಕ್ಕಾಗಿ ಏಳುತ್ತಾರೆ. ಇವರು ಅಲ್ಲಾಹನನ್ನು ಅತ್ಯಲ್ಪವೇ ಸ್ಮರಿಸುತ್ತಾರೆ.

اِنَّ الْمُنٰفِقِيْنَ يُخٰدِعُوْنَ اللّٰهَ وَهُوَ خَادِعُهُمْ ۚ
وَاِذَا قَامُوْٓا اِلَى الصَّلٰوةِ قَامُوْا كُسَالٰى ۙ
يُرَآءُوْنَ النَّاسَ وَلَا يَذْكُرُوْنَ اللّٰهَ اِلَّا قَلِيْلًا ۙ ﴿١٤٢﴾

143. ಇವರು ಸತ್ಯನಿಷೇಧ ಮತ್ತು ಸತ್ಯವಿಶ್ವಾಸಗಳ ನಡುವೆ ಓಲಾಡುತ್ತಿರುತ್ತಾರೆ. ಸಂಪೂರ್ಣವಾಗಿ ಇತ್ತಲೂ ಇಲ್ಲ; ಸಂಪೂರ್ಣವಾಗಿ ಅತ್ತಲೂ ಇಲ್ಲ. ಅಲ್ಲಾಹನೇ ದಾರಿ ತಪ್ಪಿಸಿದಾತನಿಗೆ ನೀವು ಯಾವ ದಾರಿಯನ್ನೂ ಕಾಣಲಾರಿರಿ.[87]

مُّذَبْذَبِيْنَ بَيْنَ ذٰلِكَ ۖ لَآ اِلٰى هٰٓؤُلَآءِ
وَلَآ اِلٰى هٰٓؤُلَآءِ ۗ وَمَنْ يُّضْلِلِ اللّٰهُ فَلَنْ
تَجِدَ لَهٗ سَبِيْلًا ﴿١٤٣﴾

87. ಅರ್ಥಾತ್- ಯಾರು ಅಲ್ಲಾಹನ ವಾಣಿ ಮತ್ತು ಪ್ರವಾದಿಚರ್ಯೆಯ ಮೂಲಕ ಮಾರ್ಗದರ್ಶನ ಪಡೆಯುವುದಿಲ್ಲವೋ, ಸತ್ಯದಿಂದ

144. ಓ ಸತ್ಯವಿಶ್ವಾಸಿಗಳೇ, ನೀವು ಸತ್ಯವಿಶ್ವಾಸಿಗಳನ್ನು ಬಿಟ್ಟು ಸತ್ಯ ನಿಷೇಧಿಗಳನ್ನು ನಿಮ್ಮ ಆಪ್ತ ಮಿತ್ರರನ್ನಾಗಿ ಮಾಡಿಕೊಳ್ಳಬೇಡಿರಿ. ನೀವು ನಿಮ್ಮ ವಿರುದ್ಧ ಅಲ್ಲಾಹನಿಗೆ ಸುವ್ಯಕ್ತ ಆಧಾರ ಕೊಟ್ಟು ಬಿಡಬೇಕೆಂದಿಚ್ಛಿಸುತ್ತೀರಾ?

يَٰٓأَيُّهَا ٱلَّذِينَ ءَامَنُوا۟ لَا تَتَّخِذُوا۟ ٱلْكَٰفِرِينَ
أَوْلِيَآءَ مِن دُونِ ٱلْمُؤْمِنِينَ ۚ أَتُرِيدُونَ
أَن تَجْعَلُوا۟ لِلَّهِ عَلَيْكُمْ سُلْطَٰنًا مُّبِينًا ﴿١٤٤﴾

145. ಕಪಟವಿಶ್ವಾಸಿಗಳು ನರಕದ ಅತ್ಯಂತ ತಳಭಾಗಕ್ಕೆ ಹೋಗುವರೆಂಬು ದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ. ಅವರ ಸಹಾಯಕರಾಗಿ ನೀವು ಯಾರನ್ನೂ ಕಾಣಲಾರಿರಿ.

إِنَّ ٱلْمُنَٰفِقِينَ فِى ٱلدَّرْكِ ٱلْأَسْفَلِ
مِنَ ٱلنَّارِ وَلَن تَجِدَ لَهُمْ نَصِيرًا ﴿١٤٥﴾

146. ಆದರೆ ಅವರ ಪೈಕಿ ಪಶ್ಚಾತ್ತಾಪ ಪಟ್ಟು ಮರಳಿ ತಮ್ಮ ಕರ್ಮ ವಿಧಾನವನ್ನು ಸರಿಪಡಿಸಿಕೊಂಡು ಅಲ್ಲಾಹನಿಗೆ ನಿಷ್ಠೆ ತೋರಿ ತಮ್ಮ ಧರ್ಮವನ್ನು ಅಲ್ಲಾಹನಿಗೇ ಮೀಸಲಾಗಿರಿಸಿಕೊಂಡವರು ಸತ್ಯವಿಶ್ವಾಸಿಗಳೊಂದಿಗೆ ಇರುತ್ತಾರೆ. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಅತ್ಯಂತ ಹಿರಿದಾದ ಪ್ರತಿಫಲ ನೀಡಿಯೇ ತೀರುವನು.

إِلَّا ٱلَّذِينَ تَابُوا۟ وَأَصْلَحُوا۟ وَٱعْتَصَمُوا۟
بِٱللَّهِ وَأَخْلَصُوا۟ دِينَهُمْ لِلَّهِ فَأُو۟لَٰٓئِكَ مَعَ
ٱلْمُؤْمِنِينَ ۖ وَسَوْفَ يُؤْتِ ٱللَّهُ ٱلْمُؤْمِنِينَ
أَجْرًا عَظِيمًا ﴿١٤٦﴾

147. ನೀವು ಕೃತಜ್ಞ ದಾಸರಾಗಿದ್ದು ಸತ್ಯವಿಶ್ವಾಸ ಮಾರ್ಗದಲ್ಲಿ ನಡೆಯುತ್ತಿದ್ದರೆ, ಅಲ್ಲಾಹನು ನಿಮ್ಮನ್ನು ದಂಡಿಸುವನೇಕೆ? ಅಲ್ಲಾಹ್ ಮಹಾ ಗುಣಗ್ರಾಹಿಯೂ[88] ಸರ್ವರ ಸ್ಥಿತಿಗತಿಗಳ ಬಗ್ಗೆ ಪೂರ್ಣ ಜ್ಞಾನಿಯೂ ಆಗಿರುತ್ತಾನೆ.

مَّا يَفْعَلُ ٱللَّهُ بِعَذَابِكُمْ إِن شَكَرْتُمْ
وَءَامَنتُمْ ۚ وَكَانَ ٱللَّهُ شَاكِرًا عَلِيمًا ﴿١٤٧﴾

148. *ಮನುಷ್ಯನು ಅವಾಚ್ಯ ಪದಗಳನ್ನುಚ್ಚರಿಸುವುದನ್ನು ಅಲ್ಲಾಹನು ಮೆಚ್ಚುವುದಿಲ್ಲ. ಆದರೆ ಮರ್ದಿತನು ಇದಕ್ಕೆ ಹೊರತಾಗಿದ್ದಾನೆ.[89] ಅಲ್ಲಾಹ್ ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ. (ಮರ್ದಿತರಾಗಿರುವ ಸ್ಥಿತಿಯಲ್ಲಿ ನಿಮಗೆ ಅವಾಚ್ಯ ಪದಗಳನ್ನುಚ್ಚರಿ ಸುವ ಹಕ್ಕಿದೆ.)

لَّا يُحِبُّ ٱللَّهُ ٱلْجَهْرَ بِٱلسُّوٓءِ مِنَ ٱلْقَوْلِ
إِلَّا مَن ظُلِمَ ۚ وَكَانَ ٱللَّهُ سَمِيعًا عَلِيمًا ﴿١٤٨﴾

149. ಆದರೂ ನೀವು ಬಹಿರಂಗವಾಗಿಯೂ ರಹಸ್ಯವಾಗಿಯೂ ಒಳಿತನ್ನೇ ಮಾಡುತ್ತಲಿದ್ದರೆ ಅಥವಾ ಕನಿಷ್ಠಪಕ್ಷ ಕೆಡುಕನ್ನು ಮನ್ನಿಸಿದರೆ, ನಿಶ್ಚಯವಾಗಿಯೂ ಅಲ್ಲಾಹನು(ತನ್ನ ಗುಣವಿಶೇಷತೆಗನುಸಾರವಾಗಿ) ಕ್ಷಮಾಶೀಲನಾಗಿರುತ್ತಾನೆ (ವಸ್ತುತಃ ಶಿಕ್ಷೆ ಕೊಡಲಿಕ್ಕೂ) ಸರ್ವ ಸಮರ್ಥನಾಗಿರುತ್ತಾನೆ.

إِن تُبْدُوا۟ خَيْرًا أَوْ تُخْفُوهُ أَوْ تَعْفُوا۟ عَن
سُوٓءٍ فَإِنَّ ٱللَّهَ كَانَ عَفُوًّا قَدِيرًا ﴿١٤٩﴾

ವಿಮುಖನಾಗಿ ಅಸತ್ಯದ ಕಡೆಗೆ ಒಲವು ತೋರಿರುವುದನ್ನು ಕಂಡು ಯಾರನ್ನು ಅಲ್ಲಾಹನು ಸ್ವತಃ ಆ ಕಡೆಗೆ ತಿರುಗಿಸಿ ಬಿಟ್ಟಿದ್ದಾನೋ, ಯಾರ ಅಜ್ಞಾನಪ್ರಿಯತೆಯನ್ನು ಕಂಡು ಅಲ್ಲಾಹನು ಅವನ ಪಾಲಿಗೆ ಸನ್ಮಾರ್ಗದರ್ಶನದ ಬಾಗಿಲನ್ನು ಮುಚ್ಚಿ ದುರ್ಮಾರ್ಗದ ಬಾಗಿಲನ್ನು ತೆರೆದಿದ್ದಾನೋ ಅಂತಹವರಿಗೆ ಮಾರ್ಗದರ್ಶನ ಮಾಡುವುದು ವಾಸ್ತವದಲ್ಲಿ ಯಾರಿಂದಲೂ ಸಾಧ್ಯವಿಲ್ಲ.

88. ದಾಸನು ಕೃತಜ್ಞತೆ ತೋರುವುದೆಂದರೆ ಉಪಕಾರ ಸ್ಮರಣೆ ಮಾಡುವುದು. ಕೃತಜ್ಞತೆ ದೇವನ ಕಡೆಯಿಂದ ಪ್ರಕಟವಾಗುವುದೆಂದರೆ ದಾಸನ ಕರ್ಮಗಳನ್ನು ಮಾನ್ಯ ಮಾಡುವುದು.

***ಇಲ್ಲಿಂದ 6ನೆಯ ಕಾಂಡ ಆರಂಭ.**

89. ಅರ್ಥಾತ್- ಶೋಷಿತನಿಗೆ ಶೋಷಕನ ವಿರುದ್ಧ ಸ್ವರ ಎತ್ತುವ ಹಕ್ಕಿದೆ.

150. ಅಲ್ಲಾಹ್ ಹಾಗೂ ಅವನ ಸಂದೇಶವಾಹಕರನ್ನು ನಿಷೇಧಿಸುವವರೂ ಅಲ್ಲಾಹ್ ಹಾಗೂ ಅವನ ಸಂದೇಶವಾಹಕರ ನಡುವೆ ತಾರತಮ್ಯ ಮಾಡಬೇಕೆಂದು ಬಯಸುವವರೂ ನಾವು ಕೆಲವರನ್ನು ಸ್ವೀಕರಿಸುವೆವು ಇನ್ನು ಕೆಲವರನ್ನು ನಿಷೇಧಿಸುವೆವು ಎನ್ನುತ್ತ ಸತ್ಯನಿಷೇಧ ಮತ್ತು ಸತ್ಯವಿಶ್ವಾಸದ ಮಧ್ಯೆ ಒಂದು ನಡುಮಾರ್ಗವನ್ನು ಸ್ವೀಕರಿಸುವ ಇಚ್ಛೆಯುಳ್ಳವರೂ ನೈಜ ಸತ್ಯನಿಷೇಧಿಗಳಾಗಿದ್ದಾರೆ.

إِنَّ الَّذِيْنَ يَكْفُرُوْنَ بِاللّٰهِ وَرُسُلِهٖ وَ
يُرِيْدُوْنَ اَنْ يُّفَرِّقُوْا بَيْنَ اللّٰهِ وَرُسُلِهٖ
وَيَقُوْلُوْنَ نُؤْمِنُ بِبَعْضٍ وَّنَكْفُرُ بِبَعْضٍ ۙ
وَّيُرِيْدُوْنَ اَنْ يَّتَّخِذُوْا بَيْنَ ذٰلِكَ سَبِيْلًا ﴿١٥٠﴾

151. ಇಂತಹ ಸತ್ಯನಿಷೇಧಿಗಳಿಗೆ ನಾವು ಅಪಮಾನಕಾರಕ ಶಿಕ್ಷೆ ಸಿದ್ಧಪಡಿಸಿಟ್ಟಿರುತ್ತೇವೆ.

اُولٰٓئِكَ هُمُ الْكٰفِرُوْنَ حَقًّا ۚ وَاَعْتَدْنَا لِلْكٰفِرِيْنَ
عَذَابًا مُّهِيْنًا ﴿١٥١﴾

152. ಇದಕ್ಕೆ ವ್ಯತಿರಿಕ್ತವಾಗಿ ಅಲ್ಲಾಹ್ ಮತ್ತು ಅವನ ಸಮಗ್ರ ಸಂದೇಶವಾಹಕರನ್ನು ನಂಬಿ, ಅವರ ನಡುವೆ ತಾರತಮ್ಯವಿರಿಸದಿರುವವರಿಗೆ ನಾವು ಖಂಡಿತವಾಗಿಯೂ ಅವರ ಪ್ರತಿಫಲವನ್ನು ನೀಡುವೆವು. ಅಲ್ಲಾಹ್ ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

وَالَّذِيْنَ اٰمَنُوْا بِاللّٰهِ وَرُسُلِهٖ وَلَمْ يُفَرِّقُوْا
بَيْنَ اَحَدٍ مِّنْهُمْ اُولٰٓئِكَ سَوْفَ يُؤْتِيْهِمْ
اُجُوْرَهُمْ ۗ وَكَانَ اللّٰهُ غَفُوْرًا رَّحِيْمًا ﴿١٥٢﴾ ع

153. ಬಾನಲೋಕದಿಂದ ನೀವೊಂದು ಲಿಖಿತವನ್ನು ಇಳಿಸಿಕೊಡಬೇಕೆಂದು ಇಂದು ಈ ಗ್ರಂಥದವರು ನಿಮ್ಮೊಂದಿಗೆ ಅಪೇಕ್ಷಿಸುತ್ತಿರುವರೆಂದಾದರೆ, ಇವರು ಇದಕ್ಕಿಂತಲೂ ಹಿರಿದಾದ (ಪಾತಕಪರ) ಬೇಡಿಕೆಗಳನ್ನು ಈ ಹಿಂದೆ ಮೂಸಾರೊಂದಿಗೆ ಮಾಡಿರುತ್ತಾರೆ. ಇವರು ಅವರೊಡನೆ, "ನಮಗೆ ಅಲ್ಲಾಹನನ್ನು ಪ್ರತ್ಯಕ್ಷ ತೋರಿಸು" ಎಂದಿದ್ದರು. ಈ ಉದ್ಧಟತನದ ಕಾರಣದಿಂದಲೇ ಅವರ ಮೇಲೆ ಹಠಾತ್ತನೆ ಸಿಡಿಲೆರಗಿತು. ಅವರು ಸುಸ್ಪಷ್ಟ ನಿದರ್ಶನಗಳನ್ನು ಕಂಡಿದ್ದರೂ ಆ ಬಳಿಕ ಕರುವನ್ನು ತಮ್ಮ ಆರಾಧ್ಯವನ್ನಾಗಿ ಮಾಡಿಕೊಂಡರು. ಇಷ್ಟಾಗಿಯೂ ನಾವು ಅವರನ್ನು ಮನ್ನಿಸಿದೆವು. ನಾವು ಮೂಸಾರಿಗೆ ಸುವ್ಯಕ್ತ ಆದೇಶ ನೀಡಿದೆವು.

يَسْـَٔلُكَ اَهْلُ الْكِتٰبِ اَنْ تُنَزِّلَ عَلَيْهِمْ
كِتٰبًا مِّنَ السَّمَآءِ فَقَدْ سَاَلُوْا مُوْسٰٓى اَكْبَرَ
مِنْ ذٰلِكَ فَقَالُوْٓا اَرِنَا اللّٰهَ جَهْرَةً فَاَخَذَتْهُمُ
الصّٰعِقَةُ بِظُلْمِهِمْ ۚ ثُمَّ اتَّخَذُوا الْعِجْلَ مِنْۢ
بَعْدِ مَا جَآءَتْهُمُ الْبَيِّنٰتُ فَعَفَوْنَا عَنْ
ذٰلِكَ ۚ وَاٰتَيْنَا مُوْسٰى سُلْطٰنًا مُّبِيْنًا ﴿١٥٣﴾

154. ಅವರ ಮೇಲೆ ಪರ್ವತವನ್ನು (ತೂರ್) ಎತ್ತಿ ಹಿಡಿದು ಅವರಿಂದ (ಆದೇಶವನ್ನು ಪಾಲಿಸುವ) ಕರಾರನ್ನು ಪಡೆದೆವು. ದ್ವಾರದೊಳಕ್ಕೆ ಸಾಷ್ಟಾಂಗವೆರಗುತ್ತ ಪ್ರವೇಶಿಸಬೇಕೆಂದು ನಾವು ಅವರಿಗೆ ಅಪ್ಪಣೆ

وَرَفَعْنَا فَوْقَهُمُ الطُّوْرَ بِمِيْثَاقِهِمْ وَقُلْنَا
لَهُمُ ادْخُلُوا الْبَابَ سُجَّدًا وَّقُلْنَا لَهُمْ لَا

ಕೊಟ್ಟೆವು.[90] 'ಸಬ್ತ್'ನ (ಸಬ್ಬಾತದ) ನಿಯಮವನ್ನು ಮುರಿಯಬೇಡಿರೆಂದು ನಾವು ಅವರಿಗೆ ಹೇಳಿದೆವು ಮತ್ತು ಈ ಬಗ್ಗೆ ಅವರಿಂದ ಬಲವಾದ ಕರಾರನ್ನು ಪಡೆದೆವು.

تَعْدُوا فِي السَّبْتِ وَأَخَذْنَا مِنْهُمْ مِيثَاقًا غَلِيظًا ﴿١٥٤﴾

155. ಕೊನೆಗೆ ಅವರು ಕರಾರನ್ನು ಮುರಿದರು. ಅಲ್ಲಾಹನ ನಿದರ್ಶನಗಳನ್ನು ಸುಳ್ಳಾಗಿಸಿದರು. ಅನೇಕ ಪ್ರವಾದಿಗಳನ್ನು ಅನ್ಯಾಯವಾಗಿ ವಧಿಸಿದರು. "ನಮ್ಮ ಹೃದಯಗಳು ಕವಚಗಳೊಳಗೆ ಭದ್ರವಾಗಿವೆ"[91] ಎಂದೂ ಹೇಳಿಬಿಟ್ಟರು. ವಾಸ್ತವದಲ್ಲಿ ಅವರ ಈ ಮಿಥ್ಯ-ಆರಾಧನೆಯ ಕಾರಣದಿಂದ ಅಲ್ಲಾಹನು ಅವರ ಹೃದಯಗಳಿಗೆ ಮುದ್ರೆಯೊತ್ತಿಬಿಟ್ಟನು. ಆದುದರಿಂದ ಅವರು ಅತ್ಯಲ್ಪವೇ ವಿಶ್ವಾಸವಿರಿಸುತ್ತಾರೆ.

فَبِمَا نَقْضِهِمْ مِيثَاقَهُمْ وَكُفْرِهِمْ بِآيَاتِ اللَّهِ
وَقَتْلِهِمُ الْأَنْبِيَاءَ بِغَيْرِ حَقٍّ وَقَوْلِهِمْ قُلُوبُنَا
غُلْفٌ ۚ بَلْ طَبَعَ اللَّهُ عَلَيْهَا بِكُفْرِهِمْ فَلَا
يُؤْمِنُونَ إِلَّا قَلِيلًا ﴿١٥٥﴾

156. ಅವರು ತಮ್ಮ ನಿಷೇಧ ನೀತಿಯಲ್ಲಿ ಮುಂದುವರಿಯುತ್ತ ಮರ್ಯಮಳ ಮೇಲೆ ಉಗ್ರ ಸುಳ್ಳಾರೋಪವನ್ನು ಹೊರಿಸಿಬಿಟ್ಟರು.

وَبِكُفْرِهِمْ وَقَوْلِهِمْ عَلَىٰ مَرْيَمَ بُهْتَانًا عَظِيمًا ﴿١٥٦﴾

157. ಮತ್ತು ನಾವು ಅಲ್ಲಾಹನ ಸಂದೇಶವಾಹಕರಾದ ಮರ್ಯಮರ ಪುತ್ರ ಈಸಾ ಮಸೀಹರನ್ನು ವಧಿಸಿದೆವೆಂದು ಅವರು ಹೇಳಿದರು.[92] ವಸ್ತುತಃ ಅವರು ಅವರನ್ನು (ಈಸಾರನ್ನು) ವಧಿಸಲೂ ಇಲ್ಲ, ಶಿಲುಬೆಗೇರಿಸಲೂ ಇಲ್ಲ. ನಿಜವಾಗಿ ಆ ಪ್ರಕರಣವು ಅವರಿಗೆ ಅಸ್ಪಷ್ಟಗೊಳಿಸಲ್ಪಟ್ಟಿತು.[93] ಈ ವಿಷಯದಲ್ಲಿ ಭಿನ್ನಾಭಿಪ್ರಾಯ ತೋರಿದವರೂ ವಾಸ್ತವದಲ್ಲಿ ಸಂಶಯಗ್ರಸ್ತರಾಗಿರುತ್ತಾರೆ. ಅವರಿಗೆ ಈ ಪ್ರಕರಣದ ಅರಿವೇನೂ ಇಲ್ಲ. ಕೇವಲ ಗುಮಾನಿಯನ್ನೇ ಅನುಸರಿಸಲಾಗುತ್ತಿದೆ. ಅವರು ಮಸೀಹರನ್ನು ಖಂಡಿತವಾಗಿಯೂ ವಧಿಸಲಿಲ್ಲ.

وَقَوْلِهِمْ إِنَّا قَتَلْنَا الْمَسِيحَ عِيسَى ابْنَ مَرْيَمَ
رَسُولَ اللَّهِ وَمَا قَتَلُوهُ وَمَا صَلَبُوهُ وَلَٰكِنْ
شُبِّهَ لَهُمْ ۚ وَإِنَّ الَّذِينَ اخْتَلَفُوا فِيهِ
لَفِي شَكٍّ مِنْهُ ۚ مَا لَهُمْ بِهِ مِنْ عِلْمٍ
إِلَّا اتِّبَاعَ الظَّنِّ ۚ وَمَا قَتَلُوهُ يَقِينًا ﴿١٥٧﴾

90. ಇದರ ಪ್ರಸ್ತಾಪ ಅಲ್‌ಬಕರಃ ಅಧ್ಯಾಯದ 58-59ನೆಯ ಸೂಕ್ತದಲ್ಲಿ ಬಂದಿದೆ.

91. ಅರ್ಥಾತ್- ನೀವು ಏನು ಬೇಕಾದರೂ ಹೇಳಿ, ನಮ್ಮ ಮನಸ್ಸಿನ ಮೇಲೆ ಅದರಿಂದ ಯಾವ ಪರಿಣಾಮವೂ ಆಗದು.

92. ಅರ್ಥಾತ್- ಅವರ ಭಂಡ ಧೈರ್ಯ ಎಷ್ಟು ಹೆಚ್ಚಾಗಿತ್ತೆಂದರೆ ಪ್ರವಾದಿಯನ್ನು ಪ್ರವಾದಿಯೆಂದು ಅರಿಯುತ್ತಲೂ ಅವರು ಅವರನ್ನು ಕೊಲೆ ಮಾಡಲು ಹೇಸಲಿಲ್ಲ. ಮಾತ್ರವಲ್ಲ ನಾವು ಅಲ್ಲಾಹನ ಪ್ರವಾದಿಯ ಕೊಲೆ ಮಾಡಿದೆವು ಎಂದು ಧೈರ್ಯದಿಂದ ಹೇಳಿದರು. ಮರ್ಯಮ್ ಅಧ್ಯಾಯದ ಎರಡನೆಯ ಪರಿಚ್ಛೇದವನ್ನು ನಮ್ಮ ಟಿಪ್ಪಣಿಗಳ ಸಮೇತ ಓದಿದರೆ ಬನೀಇಸ್ರಾಈಲರು ಪ್ರವಾದಿ ಈಸಾರ(ಅ) ಬಗ್ಗೆ ಅವರು ನಿಜವಾಗಿಯೂ ದೇವ ಪ್ರವಾದಿಯೇ ಆಗಿದ್ದಾರೆ ಎಂದು ಅರಿತ ಬಳಿಕವೂ ಅವರನ್ನು ಯಾವ ರೀತಿ ಶಿಲುಬೆಗೇರಿಸಲು ಪ್ರಯತ್ನಿಸಿದರೆಂದು ತಿಳಿಯುತ್ತದೆ.

93. ಪ್ರವಾದಿ ಮಸೀಹ್‌ರನ್ನು(ಅ) ಶಿಲುಬೆಗೇರಿಸಲಾಗುವುದಕ್ಕೆ ಮೊದಲೇ ಮೇಲೆತ್ತಿಕೊಳ್ಳಲಾಗಿತ್ತೆಂದು ಈ ಸೂಕ್ತದಿಂದ ಸ್ಪಷ್ಟವಾಗುತ್ತದೆ. ಮಸೀಹ್‌ರು(ಅ) ಶಿಲುಬೆಗೇರಿ ಪ್ರಾಣ ತೆತ್ತರು ಎಂಬ ಕ್ರೈಸ್ತರ ಮತ್ತು ಯಹೂದಿಯರ ಭಾವನೆ ತಪ್ಪುಕಲ್ಪನೆಗಳಿಂದ ಕೂಡಿದ್ದಾಗಿದೆ ಎಂದೂ ಇದರಿಂದ ತಿಳಿದು ಬರುತ್ತದೆ. ಯಹೂದಿಯರು ಅವರನ್ನು ಶಿಲುಬೆಗೇರಿಸುವುದಕ್ಕೆ ಮೊದಲೇ ಅಲ್ಲಾಹನು ಅವರನ್ನು ಯಾವುದೋ ಹಂತದಲ್ಲಿ ಮೇಲೆತ್ತಿಕೊಂಡನು. ಯಹೂದಿಯರು ಶಿಲುಬೆಗೇರಿಸಿದ ವ್ಯಕ್ತಿ ಬೇರೆ ಯಾರೋ ಆಗಿದ್ದನು. ಅವರು ಕಾರಣಾಂತರದಿಂದ ಅವನನ್ನು ಮರ್ಯಮರ ಪುತ್ರ ಈಸಾನೇ ಆಗಿರಬೇಕೆಂದು ಭ್ರಮಿಸಿದರು.

158. ನಿಜವಾಗಿ ಅಲ್ಲಾಹನು ಅವರನ್ನು ತನ್ನ ಕಡೆಗೆ ಎತ್ತಿಕೊಂಡನು. ಅಲ್ಲಾಹನು ಮಹಾ ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆ.

بَلْ رَّفَعَهُ اللّٰهُ اِلَيْهِ ؕ وَكَانَ اللّٰهُ عَزِيْزًا حَكِيْمًا ﴿۱۵۸﴾

159. ಗ್ರಂಥದವರಲ್ಲಿ ಯಾವನೂ ಅವರ ಮರಣಕ್ಕಿಂತ ಮುಂಚೆ ಅವರ ಮೇಲೆ ವಿಶ್ವಾಸವಿರಿಸದಿರಲಾರನು.[94] ಪುನರುತ್ಥಾನ ದಿನದಂದು ಅವರು ಅವರ (ಗ್ರಂಥದವರ) ವಿರುದ್ಧ ಸಾಕ್ಷಿ ಹೇಳುವರು.

وَاِنْ مِّنْ اَهْلِ الْكِتٰبِ اِلَّا لَيُؤْمِنَنَّ بِهٖ قَبْلَ مَوْتِهٖ ۚ وَيَوْمَ الْقِيٰمَةِ يَكُوْنُ عَلَيْهِمْ شَهِيْدًا ۚ﴿۱۵۹﴾

160. ಹೀಗೆ ಈ ಯಹೂದಿಯರ ಈ ಅಕ್ರಮ ವರ್ತನೆಗಳ ಕಾರಣದಿಂದ ಮತ್ತು ಇವರು ಜನರನ್ನು ಅಲ್ಲಾಹನ ಮಾರ್ಗದಿಂದ ಹೆಚ್ಚು ಹೆಚ್ಚಾಗಿ ತಡೆಯುತ್ತಲೂ ಇದ್ದುದರಿಂದ-

فَبِظُلْمٍ مِّنَ الَّذِيْنَ هَادُوْا حَرَّمْنَا عَلَيْهِمْ طَيِّبٰتٍ اُحِلَّتْ لَهُمْ وَبِصَدِّهِمْ عَنْ سَبِيْلِ اللّٰهِ كَثِيْرًا ۙ﴿۱۶۰﴾

161. ಇವರಿಗೆ ನಿಷಿದ್ಧಗೊಳಿಸಿದ್ದ ಬಡ್ಡಿಯನ್ನು ಪಡೆಯುತ್ತಲೂ ಜನರ ಸಂಪತ್ತನ್ನು ಅನುಚಿತ ರೀತಿಯಿಂದ ಕಬಳಿಸುತ್ತಲೂ ಇದ್ದ ಕಾರಣದಿಂದ ನಾವು ಇವರಿಗೆ ಹಿಂದೆ 'ಧರ್ಮಸಮ್ಮತ' ಗೊಳಿಸಿದ್ದ ಅನೇಕ ಶುದ್ಧ ವಸ್ತುಗಳನ್ನು ನಿಷಿದ್ಧ ಎಂದು ವಿಧಿಸಿಬಿಟ್ಟೆವು[95] ಮತ್ತು ಇವರಲ್ಲಿ ಸತ್ಯನಿಷೇಧಿ ಆಗಿರುವವರಿಗಾಗಿ ನಾವು ವೇದನಾಯುಕ್ತ ಯಾತನೆಯನ್ನು ಸಿದ್ಧಗೊಳಿಸಿ ಬಿಟ್ಟಿರುತ್ತೇವೆ.

وَّاَخْذِهِمُ الرِّبٰوا وَقَدْ نُهُوْا عَنْهُ وَاَكْلِهِمْ اَمْوَالَ النَّاسِ بِالْبَاطِلِ ؕ وَاَعْتَدْنَا لِلْكٰفِرِيْنَ مِنْهُمْ عَذَابًا اَلِيْمًا ﴿۱۶۱﴾

162. ಆದರೆ ಇವರಲ್ಲಿ ಪರಿಪಕ್ವ ಜ್ಞಾನವುಳ್ಳವರು ಮತ್ತು ಸತ್ಯವಿಶ್ವಾಸವುಳ್ಳವರೆಲ್ಲರೂ (ಓ ಪೈಗಂಬರರೇ,) ನಿಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟ ಹಾಗೂ ನಿಮಗಿಂತ ಮೊದಲು ಅವತೀರ್ಣಗೊಳಿಸಲ್ಪಟ್ಟ ಶಿಕ್ಷಣದ ಮೇಲೆ ವಿಶ್ವಾಸವಿರಿಸುತ್ತಾರೆ. ಈ ರೀತಿ ವಿಶ್ವಾಸವಿರಿಸುವವರಿಗೆ, ನಮಾಝ್ ಹಾಗೂ ಝಕಾತ್‌ಗಳನ್ನು ಪಾಲಿಸುವವರಿಗೆ ಮತ್ತು ಅಲ್ಲಾಹ್ ಹಾಗೂ

لٰكِنِ الرّٰسِخُوْنَ فِى الْعِلْمِ مِنْهُمْ وَالْمُؤْمِنُوْنَ يُؤْمِنُوْنَ بِمَاۤ اُنْزِلَ اِلَيْكَ وَمَاۤ اُنْزِلَ مِنْ قَبْلِكَ وَالْمُقِيْمِيْنَ الصَّلٰوةَ وَالْمُؤْتُوْنَ الزَّكٰوةَ وَالْمُؤْمِنُوْنَ بِاللّٰهِ وَالْيَوْمِ الْاٰخِرِ ؕ اُولٰٓٮِٕكَ

94. ಈ ವಾಕ್ಯಕ್ಕೆ ಎರಡು ಅರ್ಥಗಳಿವೆ: ಇದರಲ್ಲಿ ಎರಡು ಬಗೆಯ ಅರ್ಥಗಳಿಗೂ ಆಸ್ಪದವಿದೆ. ನಾವು ಭಾಷಾಂತರದಲ್ಲಿ ನೀಡಿದ ಅರ್ಥ ಮೊದಲನೆಯದು. ಎರಡನೆಯದು ಗ್ರಂಥದವರ ಪೈಕಿ ಯಾರೂ ತನ್ನ ಮರಣಕ್ಕಿಂತ ಮುಂಚೆ ಮಸೀಹರ ಮೇಲೆ ವಿಶ್ವಾಸವಿರಿಸದೆ ಇರಲಾರ ಎಂದಾಗಿದೆ.

95. ಪ್ರಾಯಶಃ ಇದು ಮುಂದೆ ಅಲ್ ಅನ್‌ಆಮ್ ಅಧ್ಯಾಯದ 146ನೆಯ ಸೂಕ್ತದಲ್ಲಿ ಬರುವ ವಿಷಯದ ಕಡೆಗೆ ಸೂಚನೆ. ಅರ್ಥಾತ್ ಬನೀಇಸ್ರಾಈಲರಿಗೆ ಉಗುರುಗಳಿರುವ ಎಲ್ಲಾ ಪ್ರಾಣಿಗಳೂ ನಿಷಿದ್ಧಗೊಳಿಸಲ್ಪಟ್ಟವು. ದನ ಮತ್ತು ಆಡಿನ ಕೊಬ್ಬು ಸಹ ಅವರಿಗೆ ನಿಷೇಧಿಸಲ್ಪಟ್ಟಿತು. ಅಲ್ಲದೆ ಯಹೂದಿ ಕರ್ಮಶಾಸ್ತ್ರದಲ್ಲಿರುವ ಇತರ ಕಟ್ಟುನಿಟ್ಟಿನ ನಿಬಂಧನೆಗಳ ಕಡೆಗೂ ಪ್ರಾಯಶಃ ಈ ಮೂಲಕ ಬೊಟ್ಟು ಮಾಡಲಾಗಿರಬಹುದು. ಯಾವುದೇ ವಿಭಾಗಕ್ಕೆ ಜೀವನದ ವರ್ತುಲವನ್ನು ಸಂಕುಚಿತಗೊಳಿಸುವುದು ನಿಜಾರ್ಥದಲ್ಲಿ ಒಂದು ರೀತಿಯ ಶಿಕ್ಷೆಯೇ ಆಗಿದೆ.

سَنُؤْتِيهِمْ أَجْرًا عَظِيمًا ﴿١٦٢﴾

ಅಂತಿಮ ದಿವಸದ ಮೇಲೆ ನಿಜವಾದ ವಿಶ್ವಾಸವಿರಿಸುವವರಿಗೆ ನಾವು ಖಂಡಿತವಾಗಿಯೂ ಅತ್ಯುನ್ನತ ಪ್ರತಿಫಲ ನೀಡುವೆವು.

إِنَّا أَوْحَيْنَا إِلَيْكَ كَمَا أَوْحَيْنَا إِلَىٰ نُوحٍ وَالنَّبِيِّينَ مِن بَعْدِهِ ۚ وَأَوْحَيْنَا إِلَىٰ إِبْرَاهِيمَ وَإِسْمَاعِيلَ وَإِسْحَاقَ وَيَعْقُوبَ وَالْأَسْبَاطِ وَعِيسَىٰ وَأَيُّوبَ وَيُونُسَ وَهَارُونَ وَسُلَيْمَانَ ۚ وَآتَيْنَا دَاوُودَ زَبُورًا ﴿١٦٣﴾

163. ಓ ಪೈಗಂಬರರೇ, ನಾವು ನೂಹ್ ಮತ್ತು ಅನಂತರದ ಪ್ರವಾದಿಗಳ ಕಡೆಗೆ ದಿವ್ಯವಾಣಿ ಕಳುಹಿಸಿದಂತೆಯೇ ನಿಮ್ಮ ಕಡೆಗೂ 'ದಿವ್ಯವಾಣಿ' ಕಳುಹಿಸಿರುತ್ತೇವೆ. ನಾವು ಇಬ್‌ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಯಅ್‌ಕೂಬರ ಸಂತತಿ, ಈಸಾ, ಅಯ್ಯೂಬ್, ಯೂನುಸ್, ಹಾರೂನ್ ಮತ್ತು ಸುಲೈಮಾನರ ಕಡೆಗೂ 'ದಿವ್ಯವಾಣಿ' ಕಳುಹಿಸಿದೆವು. ನಾವು ದಾವೂದರಿಗೆ 'ಝುಬೂರ್' ನೀಡಿದೆವು.

وَرُسُلًا قَدْ قَصَصْنَاهُمْ عَلَيْكَ مِن قَبْلُ وَرُسُلًا لَّمْ نَقْصُصْهُمْ عَلَيْكَ ۚ وَكَلَّمَ اللَّهُ مُوسَىٰ تَكْلِيمًا ﴿١٦٤﴾

164. ನಾವು ಇದಕ್ಕಿಂತ ಮುಂಚೆ ನಿಮ್ಮ ಮುಂದೆ ಪ್ರಸ್ತಾಪಿಸಿದ್ದ ಸಂದೇಶವಾಹಕರ ಮೇಲೂ ನಿಮ್ಮ ಮುಂದೆ ಪ್ರಸ್ತಾಪಿಸದೆ ಇದ್ದ ಸಂದೇಶವಾಹಕರ ಮೇಲೂ 'ದಿವ್ಯವಾಣಿ' ಇಳಿಸಿದೆವು. ಅಲ್ಲಾಹನು ಮೂಸಾರೊಡನೆ, ಮಾತನಾಡುವ ರೀತಿಯಲ್ಲೇ ಮಾತನಾಡಿದನು.

رُّسُلًا مُّبَشِّرِينَ وَمُنذِرِينَ لِئَلَّا يَكُونَ لِلنَّاسِ عَلَى اللَّهِ حُجَّةٌ بَعْدَ الرُّسُلِ ۚ وَكَانَ اللَّهُ عَزِيزًا حَكِيمًا ﴿١٦٥﴾

165. ಅವನು ಈ ಸಂದೇಶವಾಹಕರೆಲ್ಲರನ್ನು ನಿಯೋಗಿಸಿದ ಬಳಿಕ ಜನರ ಬಳಿ ಅಲ್ಲಾಹನಿಗೆದುರು ವಾದವುಳಿಯದಂತಾಗಲು[96] ಅವರನ್ನು ಸುವಾರ್ತೆ ಮತ್ತು ಎಚ್ಚರಿಕೆ ನೀಡುವವರನ್ನಾಗಿ ಮಾಡಿ ಕಳುಹಿಸಿದ್ದನು. ಅಲ್ಲಾಹನು ಪ್ರತಾಪಶಾಲಿಯೂ ಯುಕ್ತಿ ಪೂರ್ಣನೂ ಆಗಿರುತ್ತಾನೆ.

لَّٰكِنِ اللَّهُ يَشْهَدُ بِمَا أَنزَلَ إِلَيْكَ ۖ أَنزَلَهُ بِعِلْمِهِ ۖ وَالْمَلَائِكَةُ يَشْهَدُونَ ۚ وَكَفَىٰ بِاللَّهِ شَهِيدًا ﴿١٦٦﴾

166. ಆದರೆ (ಜನರು ಒಪ್ಪದಿದ್ದರೆ ಒಪ್ಪದಿರಲಿ.) ಓ ಪೈಗಂಬರರೇ, ಅವನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದನ್ನೆಲ್ಲಾ ತನ್ನ ಜ್ಞಾನದಿಂದ ಅವತೀರ್ಣಗೊಳಿಸಿರುತ್ತಾನೆಂದು ಅಲ್ಲಾಹನು ಸಾಕ್ಷಿ ಹೇಳುತ್ತಾನೆ. ಅಲ್ಲಾಹನ ಸಾಕ್ಷ್ಯವು ಧಾರಾಳ ಸಾಕಿದ್ದರೂ ಇದಕ್ಕೆ ದೇವಚರರೂ ಸಾಕ್ಷಿಗಳಾಗಿದ್ದಾರೆ.

إِنَّ الَّذِينَ كَفَرُوا وَصَدُّوا عَن سَبِيلِ اللَّهِ قَدْ ضَلُّوا ضَلَالًا بَعِيدًا ﴿١٦٧﴾

167. ಇದನ್ನು ಮಾನ್ಯ ಮಾಡಲು ಸ್ವತಃ ನಿರಾಕರಿಸುವವರು ಮತ್ತು ಇತರರನ್ನು ದೇವಮಾರ್ಗದಿಂದ ತಡೆಯುವವರು ಪಥಭ್ರಷ್ಟತೆ ಯಲ್ಲಿ ಸತ್ಯದಿಂದ ಬಹುದೂರ ಸಾಗಿರುತ್ತಾರೆ.

96. ಅರ್ಥಾತ್- ಈ ಎಲ್ಲಾ ಪ್ರವಾದಿಗಳನ್ನು ಕಳುಹಿಸುವುದರ ಉದ್ದೇಶ ಒಂದೇ ಆಗಿತ್ತು. ನಿರ್ಣಾಯಕ ದಿನದಂದು ಯಾವ ಪಥಭ್ರಷ್ಟ ಅಪರಾಧಿಯೂ ನಮಗೆ ತಿಳಿದಿರಲಿಲ್ಲ, ವಸ್ತುಸ್ಥಿತಿಯನ್ನು ತಿಳಿಸಲು ನೀನು ವ್ಯವಸ್ಥೆ ಮಾಡಿರಲಿಲ್ಲ ಎಂದು ಅಲ್ಲಾಹನ ಮುಂದೆ ಹೇಳುವಂತಾಗಬಾರದು. ಈ ರೀತಿ ಸಕಲ ಮನುಷ್ಯರಿಗೆ ನೆಪ ಹೂಡಲು ಅವಕಾಶ ನೀಡದಿರುವುದೇ ಈ ಏಕೈಕ ಉದ್ದೇಶ.

168. ಹೀಗೆ ಸತ್ಯನಿಷೇಧ ಹಾಗೂ ವಿದ್ರೋಹ ಮಾರ್ಗವನ್ನು ಸ್ವೀಕರಿಸಿಕೊಂಡು ಅಕ್ರಮ ಅತ್ಯಾಚಾರಕ್ಕಿಳಿದವರನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರನು-

إِنَّ الَّذِينَ كَفَرُوا وَظَلَمُوا لَمْ يَكُنِ اللَّهُ لِيَغْفِرَ لَهُمْ وَلَا لِيَهْدِيَهُمْ طَرِيقًا ﴿١٦٨﴾

169. ಮತ್ತು ಅವರಿಗೆ ನರಕದ ವಿನಾ ಬೇರಾವ ಮಾರ್ಗವನ್ನೂ ತೋರಿಸಲಾರನು. ಅವರು ಅದರಲ್ಲೇ ಸದಾಕಾಲ ವಾಸಿಸುವರು. ಅಲ್ಲಾಹನಿಗೆ ಇದೇನೂ ಕಷ್ಟಕಾರ್ಯವಲ್ಲ.

إِلَّا طَرِيقَ جَهَنَّمَ خَالِدِينَ فِيهَا أَبَدًا ۚ وَكَانَ ذَٰلِكَ عَلَى اللَّهِ يَسِيرًا ﴿١٦٩﴾

170. ಓ ಜನರೇ, ಈ ಸಂದೇಶವಾಹಕರು ನಿಮ್ಮ ಬಳಿಗೆ ನಿಮ್ಮ ಪಾಲಕ ಪ್ರಭುವಿನ ಕಡೆಯಿಂದ ಸತ್ಯವನ್ನು ತಂದಿದ್ದಾರೆ. ವಿಶ್ವಾಸವಿರಿಸಿರಿ. ಅದು ನಿಮಗೇ ಒಳಿತು. ನೀವು ನಿರಾಕರಿಸುತ್ತೀರೆಂದಾದರೆ ಭೂಮಿ-ಆಕಾಶಗಳಲ್ಲಿ ಇರುವುದೆಲ್ಲವೂ ಅಲ್ಲಾಹನದ್ದೆಂಬುದನ್ನು ತಿಳಿದುಕೊಳ್ಳಿರಿ ಮತ್ತು ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.[97]

يَا أَيُّهَا النَّاسُ قَدْ جَاءَكُمُ الرَّسُولُ بِالْحَقِّ مِنْ رَبِّكُمْ فَآمِنُوا خَيْرًا لَكُمْ ۚ وَإِنْ تَكْفُرُوا فَإِنَّ لِلَّهِ مَا فِي السَّمَاوَاتِ وَالْأَرْضِ ۚ وَكَانَ اللَّهُ عَلِيمًا حَكِيمًا ﴿١٧٠﴾

171. ಓ ಗ್ರಂಥದವರೇ, ನಿಮ್ಮ ಧರ್ಮದಲ್ಲಿ ನೀವು ಹದಮೀರಬೇಡಿರಿ,[98] ಸತ್ಯದ ಹೊರತು ಇನ್ನೇನನ್ನೂ ಅಲ್ಲಾಹನ ಮೇಲೆ ಹೊರಿಸಬೇಡಿರಿ. ಮರ್ಯಮರ ಪುತ್ರ ಈಸಾ ಮಸೀಹರು ಅಲ್ಲಾಹನ ಸಂದೇಶವಾಹಕರಾಗಿದ್ದರೇ ವಿನಾ ಇನ್ನೇನೂ ಆಗಿರಲಿಲ್ಲ. ಅವರು, ಅಲ್ಲಾಹನು ಮರ್ಯಮರ ಕಡೆಗೆ ಕಳುಹಿಸಿದ ಒಂದು ಫರಮಾನು[99] (ಆಜ್ಞೆ) ಆಗಿದ್ದರು ಮತ್ತು ಅಲ್ಲಾಹನ ಕಡೆಯಿಂದ (ಮರ್ಯಮರ ಗರ್ಭಾಶಯದಲ್ಲಿ ಶಿಶುವಿನ ರೂಪ ಧಾರಣ ಮಾಡಿದ) ಒಂದು

يَا أَهْلَ الْكِتَابِ لَا تَغْلُوا فِي دِينِكُمْ وَلَا تَقُولُوا عَلَى اللَّهِ إِلَّا الْحَقَّ ۚ إِنَّمَا الْمَسِيحُ عِيسَى ابْنُ مَرْيَمَ رَسُولُ اللَّهِ وَكَلِمَتُهُ أَلْقَاهَا إِلَىٰ مَرْيَمَ وَرُوحٌ مِنْهُ ۖ فَآمِنُوا بِاللَّهِ وَرُسُلِهِ ۖ وَلَا تَقُولُوا ثَلَاثَةٌ ۚ انْتَهُوا

97. ಅರ್ಥಾತ್- ತನ್ನ ಸಾಮ್ರಾಜ್ಯದಲ್ಲಿದ್ದು ಕಿಡಿಗೇಡಿತನವನ್ನೆಸಗುವವರ ಬಗ್ಗೆ ನಿಮ್ಮ ಪ್ರಭು ತಿಳಿಯದವನಲ್ಲ. ಹಾಗೆಯೇ ತನ್ನ ಆದೇಶಗಳನ್ನು ಉಲ್ಲಂಘಿಸುವವರನ್ನು ಎದುರಿಸುವ ವಿಧಾನವರಿಯದ ತಿಳಿಗೇಡಿಯೂ ಅವನಲ್ಲ.

98. ಇಲ್ಲಿ ಗ್ರಂಥದವರೆಂದರೆ ಕ್ರೈಸ್ತರು, ಅರಬಿ ಭಾಷೆಯಲ್ಲಿ 'ಗುಲೂ' ಎಂದರೆ ಯಾವುದೇ ವಿಷಯದ ಸಮರ್ಥನೆ ಮತ್ತು ಬೆಂಬಲದಲ್ಲಿ ಮಿತಿಮೀರುವುದು. ಮಸೀಹ್‌ರನ್ನು(ಅ) ನಿರಾಕರಿಸುವ ಮತ್ತು ವಿರೋಧಿಸುವ ಕೆಲಸಗಳಲ್ಲಿ ಮಿತಿಮೀರಿರುವುದು ಯಹೂದಿಯರ ಅಪರಾಧವಾಗಿದ್ದರೆ, ಮಸೀಹ್‌ರ(ಅ) ಮೇಲಿನ ಅಭಿಮಾನದಲ್ಲಿ ಹದ್ದು ಮೀರಿ ಅವರನ್ನು ದೇವಪುತ್ರ ಮತ್ತು ಸಾಕ್ಷಾತ್ ದೇವನಾಗಿ ಮಾಡಿದುದು ಕ್ರೈಸ್ತರ ಅಪರಾಧವಾಗಿತ್ತು.

99. ಮೂಲದಲ್ಲಿ 'ಕಲಿಮಃ' ಎಂಬ ಪದ ಪ್ರಯೋಗವಾಗಿದೆ. ಅಲ್ಲಾಹನು ಮರ್ಯಮರ ಕಡೆಗೆ 'ಕಲಿಮಃ'(ವಚನ)ವನ್ನು ಕಳುಹಿಸುವುದೆಂದರೆ ಪುರುಷನ ವೀರ್ಯದಿಂದ ಸಂಪನ್ನವಾಗದೆ ಗರ್ಭಧಾರಣೆ ಮಾಡಬೇಕೆಂಬ ಆದೇಶವನ್ನು ಹ. ಮರ್ಯಮ್‌ರ(ಅ) ಗರ್ಭಕೋಶದ ಮೇಲೆ ಅವತೀರ್ಣಗೊಳಿಸುವುದು. ಕ್ರೈಸ್ತರು ಮೊದಲು 'ಕಲಿಮಃ' ಎಂಬ ಪದವನ್ನು 'ಕಲಾಮ್' (ವಚನ) ಅಥವಾ 'ನತಕ್' (ಮಾತು) ಎಂಬ ಅರ್ಥಉಳ್ಳ ಪದವೆಂದು ಭಾವಿಸಿದರು. ಅನಂತರ 'ಕಲಾಮ್' ಎಂದರೆ ಅಲ್ಲಾಹನ ಮಾತನಾಡುವ ಗುಣವಿಶೇಷತೆಯಾಗಿರಬಹುದೆಂದು ಕಲ್ಪಿಸಿಕೊಂಡರು. ತದನಂತರ ಅಲ್ಲಾಹನ ಈ ಗುಣವಿಶೇಷತೆಯೇ ಹ. ಮರ್ಯಮ್‌ರ(ಅ) ಗರ್ಭದೊಳಗೆ ಪ್ರವೇಶಿಸಿ ಮಸೀಹ್‌ರ(ಅ) ರೂಪದಲ್ಲಿ ಮೂರ್ತ ಸ್ವರೂಪವನ್ನು ಪಡೆಯಿತು ಎಂದು ಭಾವಿಸಿದರು. ಹೀಗೆ ಕ್ರೈಸ್ತರಲ್ಲಿ ಮಸೀಹ್‌ರ(ಅ) ದೇವತ್ವದ ಬಗ್ಗೆ ಪಥಭ್ರಷ್ಟ ವಿಶ್ವಾಸ ಜನ್ಮತಾಳಿತು. ಈ ತಪ್ಪುಧಾರಣೆಯಿಂದಾಗಿಯೇ ದೇವನು ಸ್ವತಃ ಅಥವಾ ದೇವನ ಗುಣವಿಶೇಷತೆಯಾದ 'ಕಲಾಮ್' ಮಸೀಹ್‌ರ(ಅ) ರೂಪದಲ್ಲಿ ಮೈವೆತ್ತಿರಬಹುದೆಂಬ ವಾದ ಬೇರೂರಿತು.

خَيْرًا لَّكُمْ ۚ إِنَّمَا اللَّهُ إِلَٰهٌ وَاحِدٌ ۖ سُبْحَانَهُ أَن يَكُونَ لَهُ وَلَدٌ ۘ لَّهُ مَا فِي السَّمَاوَاتِ وَمَا فِي الْأَرْضِ ۗ وَكَفَىٰ بِاللَّهِ وَكِيلًا ﴿١٧١﴾

ಆತ್ಮವಾಗಿದ್ದರು.[100] ಆದುದರಿಂದ ಅಲ್ಲಾಹ್ ಮತ್ತು ಸಂದೇಶ ವಾಹಕರ ಮೇಲೆ ವಿಶ್ವಾಸವಿಡಿರಿ. ಮೂವರಿದ್ದಾರೆನ್ನಬೇಡಿರಿ[101]- ಇದನ್ನು ತೊರೆಯಿರಿ. ಇದು ನಿಮಗೇ ಉತ್ತಮ. ಅಲ್ಲಾಹನಂತೂ ಏಕಮಾತ್ರ ಆರಾಧ್ಯನಾಗಿರುವನು. ಅವನಿಗೊಬ್ಬ ಪುತ್ರನಿದ್ದಾನೆನ್ನಲು, ಅವನು ಅದರಿಂದ ಪರಿಶುದ್ಧನಾಗಿರುತ್ತಾನೆ.[102] ಭೂಮಿ-ಆಕಾಶಗಳ ಸಕಲ ವಸ್ತುಗಳೂ ಅವನ ಸೊತ್ತು ಮತ್ತು ಅವುಗಳ ಸಂರಕ್ಷಣೆಗೆ ಅಲ್ಲಾಹನೇ ಸಾಕು.

لَّن يَسْتَنكِفَ الْمَسِيحُ أَن يَكُونَ عَبْدًا لِّلَّهِ وَلَا الْمَلَائِكَةُ الْمُقَرَّبُونَ ۚ وَمَن يَسْتَنكِفْ عَنْ عِبَادَتِهِ وَيَسْتَكْبِرْ فَسَيَحْشُرُهُمْ إِلَيْهِ جَمِيعًا ﴿١٧٢﴾

172. ತಾನು ಅಲ್ಲಾಹನ ದಾಸನಾಗಿರುವ ಬಗ್ಗೆ ಮಸೀಹರು ಎಂದೆಂದೂ ಸಂಕೋಚ ಪಡಲಿಲ್ಲ. ಅತ್ಯಂತ ನಿಕಟವರ್ತಿ ದೇವಚರರೂ ಈ ಬಗ್ಗೆ ಸಂಕೋಚ ಪಡುವುದಿಲ್ಲ. ಯಾವನಾದರೂ ಅಲ್ಲಾಹನ ದಾಸ್ಯದ ಬಗ್ಗೆ ಸಂಕೋಚಪಟ್ಟರೆ ಮತ್ತು ಅಹಂಭಾವ ತೋರಿದರೆ, ಅಲ್ಲಾಹನು ಎಲ್ಲರನ್ನೂ ಸುತ್ತುವರಿದು ತನ್ನ ಮುಂದೆ ಹಾಜರು ಪಡಿಸುವ ಅದೊಂದು ಕಾಲ ಬರಲಿದೆ.

فَأَمَّا الَّذِينَ آمَنُوا وَعَمِلُوا الصَّالِحَاتِ

173. ಆಗ ವಿಶ್ವಾಸವಿಟ್ಟು ಸತ್ಕರ್ಮ ವಿಧಾನ ಕೈಗೊಂಡವರು ತಮ್ಮ

100. ಇಲ್ಲಿ ಸ್ವತಃ ಮಸೀಹ್‌ರನ್ನು(ಅ) 'ರೂಹುಮ್ಮಿನ್‌ಹು' (ದೇವ ವತಿಯಿಂದ ಒಂದು ಆತ್ಮ) ಎನ್ನಲಾಗಿದೆ. ಅಲ್‌ಬಕರಃ ಅಧ್ಯಾಯದ 87ನೆಯ ಸೂಕ್ತದಲ್ಲಿ ಈ ವಿಷಯವನ್ನು ಈ ರೀತಿ ಪ್ರಸ್ತಾಪಿಸಲಾಗಿದೆ. "ನಾವು ಪವಿತ್ರಾತ್ಮದ ಮೂಲಕ ಅವರಿಗೆ ಸಹಾಯ ಮಾಡಿದೆವು" ಈ ಎರಡು ಉಲ್ಲೇಖಗಳ ಅರ್ಥವೇನೆಂದರೆ, ಅಲ್ಲಾಹನು ಮಸೀಹ್‌ರಿಗೆ(ಅ) ಪವಿತ್ರಾತ್ಮವನ್ನು ನೀಡಿದ್ದನು. ಅದು ಕೇಡನ್ನು ಅರಿಯದ, ಸಾದ್ಯಂತ ಸತ್ಯ ಮತ್ತು ಪ್ರಾಮಾಣಿಕತೆಯಿಂದ ಕೂಡಿದ ಮತ್ತು ಅಡಿಯಿಂದ ಮುಡಿತನಕ ಸುಶೀಲವಾದ ಆತ್ಮವಾಗಿತ್ತು. ಕ್ರೈಸ್ತರು ಇದರಲ್ಲೇ ಅತಿರೇಕ ಮಾಡಿದರು. 'ರೂಹುಮ್ಮಿನಲ್ಲಾಹ್'ವನ್ನು ಅವರು ಅಲ್ಲಾಹನ ಆತ್ಮವೆಂದು ಭಾವಿಸಿದರು. ರೂಹುಲ್ ಕುದುಸ್ (Holy Ghost) ಎಂದರೆ ಮಸೀಹ್‌ರಲ್ಲಿ(ಅ) ಅಂತರ್‌ಲೀನಗೊಂಡ ಅಲ್ಲಾಹನ ಪವಿತ್ರಾತ್ಮವೆಂದು ಕಲ್ಪಿಸಿದರು. ಹೀಗೆ ಅಲ್ಲಾಹ್ ಮತ್ತು ಮಸೀಹ್‌ರ(ಅ) ಜತೆಗೆ 'ರೂಹುಲ್ ಕುದುಸ್'(ಪವಿತ್ರಾತ್ಮ)ನನ್ನು ಅವರು ಮೂರನೆಯ ದೇವನಾಗಿ ಮಾಡಿದರು.

101. ಅರ್ಥಾತ್- ನಿಮ್ಮಲ್ಲಿ ಯಾವ ರೂಪದಲ್ಲಾದರೂ ಇರುವ ತ್ರಿದೇವತ್ವದ ವಿಶ್ವಾಸವನ್ನು ತೊರೆದು ಬಿಡಿರಿ. ಕ್ರೈಸ್ತರು ವಾಸ್ತವದಲ್ಲಿ ಏಕಕಾಲಕ್ಕೆ ಏಕದೇವತ್ವದಲ್ಲೂ ತ್ರಿದೇವತ್ವದಲ್ಲೂ ವಿಶ್ವಾಸವಿಡುತ್ತಾರೆ. ಇಂಜೀಲ್(ಬೈಬಲ್)ನಲ್ಲಿ ಕಂಡು ಬರುವ ಮಸೀಹ್‌ರ(ಅ) ಸ್ಪಷ್ಟೋಕ್ತಿಗಳ ಆಧಾರದಲ್ಲಿ 'ದೇವನು ಏಕನಾಗಿದ್ದಾನೆ. ಅವನ ಹೊರತು ಇನ್ನಾವ ದೇವನೂ ಇಲ್ಲ' ಎಂಬುದನ್ನು ಯಾವ ಕ್ರೈಸ್ತನೂ ನಿರಾಕರಿಸಲಾರನು. ಏಕದೇವತ್ವವೇ ನಿಜವಾದ ಧರ್ಮವೆಂದು ಒಪ್ಪಿಕೊಳ್ಳದೇ ಅವರಿಗೆ ಬೇರೆ ದಾರಿ ಇಲ್ಲ. ಆದರೆ ಮಸೀಹ್‌ರ(ಅ) ವ್ಯಕ್ತಿತ್ವಕ್ಕೆ ಅತಿರೇಕವೆಸಗುವ ಮೂಲಕ ಅವರು ತ್ರಿದೇವತ್ವವನ್ನೂ ಪ್ರತಿಪಾದಿಸುತ್ತಿದ್ದಾರೆ. ಈ ತನಕ ಈ ಎರಡು ವಿರೋಧಾಭಾಸದ ವಿಶ್ವಾಸಗಳನ್ನು ಒಟ್ಟೊಟ್ಟಿಗೇ ಹೇಗೆ ಒಪ್ಪಿಕೊಳ್ಳುವುದು ಎಂದು ನಿರ್ಧರಿಸಲು ಅವರಿಗೆ ಸಾಧ್ಯವಾಗಿಲ್ಲ.

102. ಇದು ಕ್ರೈಸ್ತರ ನಾಲ್ಕನೆಯ ಅತಿರೇಕದ ಖಂಡನೆಯಾಗಿದೆ. ಕ್ರೈಸ್ತರ ಉಲ್ಲೇಖಗಳು ಒಂದು ವೇಳೆ ಸರಿಯೇ ಆಗಿದ್ದರೆ, ಅವುಗಳ (ವಿಶೇಷವಾಗಿ ಪ್ರಥಮ ಮೂರು ಬೈಬಲ್‌ಗಳ) ಮೂಲಕ ತಿಳಿದು ಬರುವುದೇನೆಂದರೆ ಮಸೀಹರು(ಅ) ದೇವ ಮತ್ತು ದಾಸರ ನಡುವಿನ ಸಂಬಂಧವನ್ನು ತಂದೆ ಮತ್ತು ಮಗನ ಸಂಬಂಧಕ್ಕೆ ಹೋಲಿಸಿದ್ದಾರೆ. ದೇವನಿಗೆ ತಂದೆ ಎಂಬ ಪದವನ್ನು ಕೇವಲ ಹೋಲಿಕೆ ಮತ್ತು ಅಲಂಕಾರಕ್ಕಾಗಿ ಅವರು ಪ್ರಯೋಗಿಸಿದ್ದಾರೆ. ಇದು ಕೇವಲ ಮಸೀಹ್‌ರಿಗೆ(ಅ) ಸಲ್ಲುವ ವಿಶೇಷತೆಯಲ್ಲ. ಹಿಂದಿನ ಕಾಲದಿಂದಲೇ ಬನೀ ಇಸ್ರಾಈಲರು ದೇವನಿಗೆ ತಂದೆ ಎಂಬ ಪದವನ್ನು ಉಪಯೋಗಿಸುತ್ತಾ ಬಂದಿದ್ದರು. ಬೈಬಲ್‌ನ ಹಳೆಯ ಒಡಂಬಡಿಕೆಯಲ್ಲಿ ಅದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಮಸೀಹ್‌ರು(ಅ) ತಮ್ಮ ಜನಾಂಗದ ವಾಡಿಕೆಗೆ ಅನುಸಾರವಾಗಿಯೇ ಈ ಪದವನ್ನು ಉಪಯೋಗಿಸಿದರು. ಅವರು ದೇವನನ್ನು ತನ್ನ ಮಾತ್ರವಲ್ಲ, ಎಲ್ಲರ ತಂದೆ ಎಂದು ಕರೆಯುತ್ತಿದ್ದರು. ಕ್ರೈಸ್ತರು ಇಲ್ಲಿ ಪುನಃ ಅತಿರೇಕವೆಸಗಿದರು. ಅವರು ಮಸೀಹ್‌ರನ್ನು(ಅ) ದೇವನ 'ಏಕೈಕ' ಪುತ್ರನೆಂದು ಸಾರಿದರು.

ಪ್ರತಿಫಲವನ್ನು ಸರ್ವ ಸಂಪೂರ್ಣ ಪಡೆಯುವರು. ಮಾತ್ರವಲ್ಲದೆ ಅಲ್ಲಾಹ್ ಅವರಿಗೆ ತನ್ನ ಅನುಗ್ರಹದಿಂದ ಇನ್ನಷ್ಟು ಹೆಚ್ಚು ಪುರಸ್ಕಾರವನ್ನು ದಯಪಾಲಿಸುವನು. ದಾಸ್ಯ-ಆರಾಧನೆಗೆ ಸಂಕೋಚ ಪಟ್ಟವರಿಗೆ ಹಾಗೂ ಅಹಂಭಾವ ತೋರಿಸಿದವರಿಗೆ ಅಲ್ಲಾಹ್ ವೇದನಾಯುಕ್ತ ಯಾತನೆ ಕೊಡುವನು. ಅವರು ಅಲ್ಲಾಹನ ಹೊರತು ಇತರ ಯಾರೆಲ್ಲರ ರಕ್ಷಣೆ ಮತ್ತು ಸಹಾಯಗಳ ಮೇಲೆ ಭರವಸೆಯನ್ನಿಡುತ್ತಾರೋ ಅವರ ಪೈಕಿ ಯಾರನ್ನೂ ಅಲ್ಲಿ ಕಾಣಲಾರರು.

فَيُوَفِّيهِمْ أُجُورَهُمْ وَيَزِيدُهُم مِّن
فَضْلِهِ ۖ وَأَمَّا الَّذِينَ اسْتَنكَفُوا وَاسْتَكْبَرُوا
فَيُعَذِّبُهُمْ عَذَابًا أَلِيمًا وَلَا يَجِدُونَ لَهُم
مِّن دُونِ اللَّهِ وَلِيًّا وَلَا نَصِيرًا ﴿١٧٣﴾

174. ಓ ಜನರೇ, ನಿಮ್ಮ ಪಾಲಕ ಪ್ರಭುವಿನ ವತಿಯಿಂದ ನಿಮ್ಮ ಬಳಿಗೆ ಸುವ್ಯಕ್ತ ಪ್ರಮಾಣವು ಬಂದು ಬಿಟ್ಟಿದೆ. ನಾವು ನಿಮಗೆ ಸ್ಪಷ್ಟವಾಗಿ ದಾರಿ ತೋರಿಸಿಕೊಡುವಂತಹ ಜ್ಯೋತಿಯನ್ನು ಕಳುಹಿಸಿದ್ದೇವೆ.

يَا أَيُّهَا النَّاسُ قَدْ جَاءَكُم بُرْهَانٌ مِّن
رَّبِّكُمْ وَأَنزَلْنَا إِلَيْكُمْ نُورًا مُّبِينًا ﴿١٧٤﴾

175. ಇನ್ನು ಯಾರು ಅಲ್ಲಾಹನ ಮಾತನ್ನು ಕೇಳಿ ನಡೆಯುವರೋ ಮತ್ತು ಅವನ ಅಭಯವನ್ನರಸುವರೋ ಅವರನ್ನು ಅಲ್ಲಾಹ್ ತನ್ನ ಕೃಪೆ ಹಾಗೂ ತನ್ನ ಅನುಗ್ರಹಗಳ ಆಶ್ರಯದಲ್ಲಿ ತೆಗೆದುಕೊಳ್ಳುವನು ಮತ್ತು ತನ್ನ ಕಡೆಗೆ ಬರುವ ನೇರ ಮಾರ್ಗವನ್ನು ತೋರಿಸಿಕೊಡುವನು.

فَأَمَّا الَّذِينَ آمَنُوا بِاللَّهِ وَاعْتَصَمُوا بِهِ
فَسَيُدْخِلُهُمْ فِي رَحْمَةٍ مِّنْهُ وَفَضْلٍ
وَيَهْدِيهِمْ إِلَيْهِ صِرَاطًا مُّسْتَقِيمًا ﴿١٧٥﴾

176. ಓ ಪೈಗಂಬರರೇ, ಜನರು ನಿಮ್ಮೊಡನೆ 'ಕಲಾಲಃ'ದ[103] ಕುರಿತು ಧರ್ಮವಿಧಿ ಕೇಳುತ್ತಾರೆ. ಹೇಳಿರಿ: ಅಲ್ಲಾಹ್ ನಿಮಗೆ ಹೀಗೆ ಧರ್ಮವಿಧಿ ಕೊಡುತ್ತಾನೆ. ಯಾರಾದರೂ ಸಂತತಿಹೀನನಾಗಿ ಮೃತಪಟ್ಟರೆ ಮತ್ತು ಅವನಿಗೆ ಒಬ್ಬಳೇ ಸಹೋದರಿ[104] ಇದ್ದರೆ, ಅವಳು ಅವನು ಬಿಟ್ಟುಹೋಗುವ ಸೊತ್ತಿನಿಂದ ಅರ್ಧಾಂಶ ಪಡೆಯುವಳು ಮತ್ತು ಸಹೋದರಿಯು ಸಂತತಿ ವಿಹೀನಳಾಗಿ

يَسْتَفْتُونَكَ قُلِ اللَّهُ يُفْتِيكُمْ فِي الْكَلَالَةِ ۚ
إِنِ امْرُؤٌ هَلَكَ لَيْسَ لَهُ وَلَدٌ وَلَهُ أُخْتٌ
فَلَهَا نِصْفُ مَا تَرَكَ ۚ وَهُوَ يَرِثُهَا إِن لَّمْ
يَكُن لَّهَا وَلَدٌ ۚ فَإِن كَانَتَا اثْنَتَيْنِ فَلَهُمَا
الثُّلُثَانِ مِمَّا تَرَكَ ۚ وَإِن كَانُوا إِخْوَةً

103. 'ಕಲಾಲಃ' ಎಂದರೆ ಭಿನ್ನಾಭಿಪ್ರಾಯವೆಂದರ್ಥ. ಕೆಲವರ ಪ್ರಕಾರ ಮಕ್ಕಳಿಲ್ಲದ ಮತ್ತು ತಂದೆ-ತಾತಂದಿರೂ ಬದುಕಿಲ್ಲದ ವ್ಯಕ್ತಿಯನ್ನು ಕಲಾಲಃ ಎನ್ನುತ್ತಾರೆ. ಇನ್ನು ಕೆಲವರ ಪ್ರಕಾರ ಮಕ್ಕಳಿಲ್ಲದೆ ನಿಧನನಾಗುವವನನ್ನು ಕಲಾಲಃ ಎನ್ನುತ್ತಾರೆ. ಆದರೆ ಹೆಚ್ಚಿನ ಕರ್ಮಶಾಸ್ತ್ರಜ್ಞರು ಇದು ಮೊದಲ ಅರ್ಥದಲ್ಲೇ ಪ್ರಯೋಗವಾಗುತ್ತದೆ ಎಂಬ ಹ. ಅಬೂಬಕರ್(ರ) ಅಭಿಪ್ರಾಯವನ್ನು ಮಾನ್ಯ ಮಾಡುತ್ತಾರೆ. ಪವಿತ್ರ ಕುರ್ಆನಿನಲ್ಲೂ ಇದಕ್ಕೆ ಸಮರ್ಥನೆ ದೊರೆಯುತ್ತದೆ. ಏಕೆಂದರೆ ಅದರಲ್ಲಿ ಕಲಾಲಃನ ಸಹೋದರಿ ಅರ್ಧಾಂಶ ಸೊತ್ತಿನ ವಾರೀಸುದಾರಳು ಎನ್ನಲಾಗಿದೆ. ಕಲಾಲಃನ ತಂದೆ ಜೀವಂತವಿರುತ್ತಿದ್ದರೆ ಅವನ ಸೋದರಿಗೆ ಸೊತ್ತಿನಲ್ಲಿ ಪಾಲು ಸಿಗುವ ಪ್ರಮೇಯವೇ ಉದ್ಭವಿಸುವುದಿಲ್ಲ.

104. ಇಲ್ಲಿ ಮೃತನ ತಂದೆ-ತಾಯಿಗಳಿಬ್ಬರ ಮೂಲಕವೂ ಅಥವಾ ತಂದೆಯ ಮೂಲಕ ಮಾತ್ರ ಸಂಬಂಧ ಹೊಂದಿರುವ ಸೋದರ-ಸೋದರಿಯರ ಆಸ್ತಿಯ ಹಕ್ಕನ್ನು ಪ್ರಸ್ತಾಪಿಸಲಾಗಿದೆ. ಹ. ಅಬೂಬಕರ್(ರ) ಒಮ್ಮೆ ಪ್ರವಚನವೊಂದರಲ್ಲಿ ಇದರ ಅರ್ಥವನ್ನು ವಿವರಿಸಿದ್ದರು. ಆ ಬಗ್ಗೆ ಸಹಾಬಿಗಳಾರೂ ಆಕ್ಷೇಪವೆತ್ತಿರಲಿಲ್ಲ. ಆದ್ದರಿಂದ ಇದು ಸರ್ವಸಮ್ಮತ ವಿಷಯವಾಗಿದೆ.

رِّجَالًا وَّنِسَآءً فَلِلذَّكَرِ مِثْلُ حَظِّ الْاُنْثَيَيْنِ ؕ يُبَيِّنُ اللّٰهُ لَكُمْ اَنْ تَضِلُّوْا ؕ وَاللّٰهُ بِكُلِّ شَيْءٍ عَلِيْمٌ ﴿١٧٦﴾ ع ٢٤

ಮೃತಳಾದರೆ, ಸಹೋದರನು ಅವಳ ವಾರೀಸುದಾರನಾಗುವನು.[105] ಮೃತನ ವಾರೀಸುದಾರರಾಗಿ ಇಬ್ಬರು ಸಹೋದರಿಯರಿದ್ದರೆ ಅವರು ಸೊತ್ತಿನ ಮೂರರಲ್ಲೆರಡಂಶದ ಹಕ್ಕುದಾರರಾಗುವರು.[106] ಅನೇಕ ಮಂದಿ ಸಹೋದರ ಸಹೋದರಿಯರಿದ್ದರೆ ಸ್ತ್ರೀಯರಿಗೆ ಒಂದು ಮತ್ತು ಪುರುಷರಿಗೆ ಇಮ್ಮಡಿ ಪಾಲು ಸಿಗುವುದು. ನೀವು ದಾರಿತಪ್ಪಿ ಅಲೆಯದಂತೆ ಅಲ್ಲಾಹನು ನಿಮಗಾಗಿ ಆದೇಶಗಳನ್ನು ವಿಶದೀಕರಿಸುತ್ತಾನೆ. ಅಲ್ಲಾಹನು ಪ್ರತಿಯೊಂದು ವಸ್ತುವಿನ ಜ್ಞಾನವುಳ್ಳವನಾಗಿರುತ್ತಾನೆ.

---

105. ಅರ್ಥಾತ್- ಇತರ ಅಧಿಕೃತ ಹಕ್ಕುದಾರರಿಲ್ಲದಿದ್ದರೆ ಸಹೋದರನು ಆಕೆಯ ಪೂರ್ಣ ಸೊತ್ತಿಗೆ ವಾರೀಸುದಾರನಾಗುವನು. ಇತರ ಹಕ್ಕುದಾರರು ಇದ್ದ ಪಕ್ಷದಲ್ಲಿ (ಉದಾಃ ಪತಿ), ಅವರ ಪಾಲನ್ನು ನೀಡಿದ ಬಳಿಕ ಉಳಿದ ಸೊತ್ತು ಸಹೋದರನಿಗೆ ಸಿಗುವುದು.

106. ಎರಡಕ್ಕಿಂತ ಹೆಚ್ಚು ಸೋದರಿಯರಿದ್ದರೂ ಈ ಆದೇಶ ಅನ್ವಯಿಸುತ್ತದೆ.